ಕರ್ನಾಟಕ ಸರ್ಕಾರ

# ಸವಿ ಕನ್ನಡ

## ಪ್ರಥಮ ಭಾಷೆ ಕನ್ನಡ

### ಅಭ್ಯಾಸ ಸಹಿತ ಪಠ್ಯಪುಸ್ತಕ

(ಪರಿಷ್ಕೃತ – 2022)

©KTBS Not to be republished

## ೪

## ನಾಲ್ಕನೆಯ ತರಗತಿ



**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**

ನಂ. ೪, ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ,
ಬೆಂಗಳೂರು – ೫೬೦೦೮೫

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು:**

ಡಾ. ಪಿ. ಮಹದೇವಯ್ಯ : ಸಹ ಪ್ರಾಧ್ಯಾಪಕ, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ. ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.

**ಸದಸ್ಯರು:**

ಶ್ರೀಮತಿ ಎಂ.ಜೆ. ಮಮತಾ ಮೂಡಿತ್ತಾಯ : ಕನ್ನಡ ಶಿಕ್ಷಕಿ, ಸರ್ಕಾರಿ ಪದವಿ ಪೂರ್ವ ಕಾಲೇಜು ಬೆಳ್ಳಾರೆ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

ಶ್ರೀ ಮಹದೇವಯ್ಯ : ಸರ್ಕಾರಿ ಪ್ರೌಢ ಶಾಲೆ ಅಂತರಸಂತೆ ಹೆಗ್ಗಡದೇವನಕೋಟೆ ತಾ. ಮೈಸೂರು ಜಿಲ್ಲೆ.

ಶ್ರೀ ಎಸ್. ನಾಗಪ್ಪ : ಸಿ.ಆರ್.ಪಿ. ಕೋರ ಕ್ಲಸ್ಟರ್, ತುಮಕೂರು ತಾಲ್ಲೂಕು.

ಶ್ರೀಮತಿ ಡಿ.ಎಸ್. ರಾಜಮ್ಮ : ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

ಶ್ರೀ ಬಾಬು ಭಂಡಾರಿಗಲ್ : ಸಹ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಜಹೀರಾಬಾದ್, ರಾಯಚೂರು ಜಿಲ್ಲೆ.

**ಚಿತ್ರ ವಿನ್ಯಾಸದ ಕಲಾವಿದರು :**

ಬಾಗೂರು ಮಾರ್ಕಾಂಡೇಯ, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು.

**ಪರಿಶೀಲಕರು :**

ಶ್ರೀ ಆರ್.ಡಿ.ರವೀಂದ್ರ : ಸಮನ್ವಯಾಧಿಕಾರಿ (ಪ್ರಭಾರಿ) ಕ್ಷೇತ್ರ ಸಂಪನ್ಮೂಲ ಕೇಂದ್ರ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

©KTBS Not to be republished

**ಸಂಪಾದಕ ಮಂಡಳಿ ಸದಸ್ಯರು :**

ಪ್ರೊ. ಚಂದ್ರಶೇಖರ ಪಾಟೀಲ್, ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ ನಗರ, ಬೆಂಗಳೂರು – ೭೮

ಡಾ.ಕೆ. ಮರುಳಸಿದ್ದಪ್ಪ, ಸಾಹಿತಿಗಳು, ನಂ. ೧೫೭, ೧೨ ನೆಯ ಕ್ರಾಸ್, ಜೆ.ಪಿ. ನಗರ ೨ನೇ ಹಂತ, ಬೆಂಗಳೂರು – ೭೮

ಪ್ರೊ. ಸಾ.ಶಿ. ಮರುಳಯ್ಯ, ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.

ಪ್ರೊ. ಅ.ರಾ.ಮಿತ್ರ, ಸಾಹಿತಿಗಳು, ಕೆ.ಎಚ್. ಬಿ. ಕಾಲೋನಿ, ಯಲಹಂಕ, ಬೆಂಗಳೂರು–೬೪

ಡಾ. ವಿಷ್ಣು ಎಂ. ಶಿಂದೆ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**ಮುಖ್ಯ ಸಂಯೋಜಕರು :**

ಪ್ರೊ. ಜಿ.ಎಸ್. ಮುಡಂಬಡಿತ್ತಾಯ, ಸಂಯೋಜಕರು, ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫.

**ಸಲಹೆ ಮತ್ತು ಮಾರ್ಗದರ್ಶನ :**

ಶ್ರೀ ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫.

ಶ್ರೀಮತಿ ಸಿ. ನಾಗಮಣಿ, ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫.

**ಕಾರ್ಯಕ್ರಮ ಸಂಯೋಜಕರು :**

ಶ್ರೀ ಪಾಂಡುರಂಗ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫.

# ಮುನ್ನುಡಿ

೨೦೦೫ ನೆಯ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೆಯ ಸಾಲಿನಿಂದ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೆಯ ತರಗತಿಯವರೆಗೆ ಪರಿಸರ ಅಧ್ಯಯನ ಗಣಿತ ಮತ್ತು ೬ ರಿಂದ ೧೦ ನೆಯ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಆವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನವನ್ನು ಸಂಯೋಜಿಸುವುದು.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

©KTBS Not to be republished

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯಪುಸ್ತಕಗಳೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿ ವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳಿಗೆ, ರಾಜ್ಯಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

©KTBS
Not to be republished

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫.

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫.

# ಮೊದಲ ಮಾತು.....

ಕರ್ನಾಟಕ ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸಿದೆ- ಇದರ ಮುಖ್ಯ ಗುರಿ ಕಲಿಕೆ ಹಾಗೂ ಬೋಧನೆಯ ಗುಣಮಟ್ಟವನ್ನು ಹೆಚ್ಚಿಸುವುದಾಗಿದೆ. ರಾಷ್ಟ್ರೀಯ ಪಠ್ಯಕ್ರಮ-೨೦೦೫ರ ಅನ್ವಯ ಕರ್ನಾಟಕ ರಾಜ್ಯ ಪಠ್ಯವಸ್ತುವನ್ನು ಆಧರಿಸಿ ಈ ಪಠ್ಯಪುಸ್ತಕವನ್ನು ಸಿದ್ಧಪಡಿಸಲಾಗಿದೆ. ಹೀಗೆ ಸಿದ್ಧಪಡಿಸುವ ಮೊದಲು ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ - ೨೦೦೯ರ ಆಶಯಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಮಕ್ಕಳು ತಮ್ಮ ಜ್ಞಾನವನ್ನು ಪುನರ್ ರಚಿಸಿಕೊಳ್ಳಲು ಅವಕಾಶವಿರುವ, ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದ ಮೂಲಕ ಮಕ್ಕಳ ಕಲಿಕೆಯನ್ನು ದೃಢೀಕರಿಸಲು ಅನುಕೂಲವಾಗುವ ರೀತಿಯಲ್ಲಿ ಪಾಠ ಹಾಗೂ ಚಟುವಟಿಕೆಗಳನ್ನು ರೂಪಿಸಲಾಗಿದೆ.

ಪಠ್ಯಪುಸ್ತಕದಲ್ಲಿನ ಪಾಠಗಳನ್ನು ಸುಗಮಕಾರರು (ಶಿಕ್ಷಕರು) ಕೇವಲ ವಿಷಯ ಕಲಿಕಾ ದೃಷ್ಟಿಯಿಂದ ಗಮನಿಸದೇ ಭಾಷೆಯ ಕೌಶಲಗಳ ಬೆಳವಣಿಗೆಗೆ ಆದ್ಯತೆ ನೀಡುವುದು. ಈ ದೃಷ್ಟಿಯಲ್ಲಿ ಕಥಾರಚನೆ, ಕವನ ರಚನೆ, ಭಾಷಣ, ಚರ್ಚೆ, ಸಾಹಿತ್ಯ ಓದುವಿಕೆ, ಸಂಗ್ರಹ ಇತ್ಯಾದಿ ಸೃಜನಾತ್ಮಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ತರಗತಿ ಪ್ರಕ್ರಿಯೆಯಲ್ಲಿ ನಮ್ಮ ಸುಗಮಕಾರರು ಇದಕ್ಕೆ ಹೆಚ್ಚಿನ ಒತ್ತು ನೀಡಬೇಕಾಗಿದೆ.

ಪ್ರಸ್ತುತ ಪಠ್ಯದಲ್ಲಿ ಅಳವಡಿಸಿರುವ ಪಾಠಗಳು ಮಕ್ಕಳ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸುವಂತಹವು. ಓದುವ ಅಭಿರುಚಿ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಭಿಮಾನವನ್ನು ಹುಟ್ಟಿಸುವಂತಹ ವಿಚಾರಗಳಿಗೆ ಒತ್ತು ನೀಡಲಾಗಿದೆ. ಪಾಠಗಳ ರಚನೆ ಸಂದರ್ಭದಲ್ಲಿ ೪ನೆಯ ತರಗತಿ ಮಕ್ಕಳ ವಯಸ್ಸನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಓದುವ ಮತ್ತು ಬರೆಯುವ ಬಳಕೆ ಹೆಚ್ಚಾಗಲಿ ಎಂಬ ಕಾರಣಕ್ಕಾಗಿ ವಿಶಿಷ್ಟವಾದ ಗದ್ಯ ಪಾಠಗಳನ್ನು ರಚಿಸಲಾಗಿದೆ. ಪಾಠಗಳ ಆಶಯಕ್ಕೆ ತಕ್ಕಂತೆ ಚಿತ್ರಗಳನ್ನು ನೀಡಲಾಗಿದೆ. ಇದರಿಂದ ಮಕ್ಕಳು ಪಾಠದ ಆಶಯವನ್ನು ಗ್ರಹಿಸಿಕೊಳ್ಳಲು ಸಹಾಯಕವಾಗಿದೆ. ಕನ್ನಡ ಭಾಷೆಯನ್ನು ಮಕ್ಕಳು ಸುಲಭವಾಗಿ ನಿರ್ವಹಿಸುವುದಕ್ಕೆ ಸರಳವಾಗುವಂತೆ ಸಂಭಾಷಣೆ, ನಾಟಕ, ಜೀವನ ಚರಿತ್ರೆ, ಕಥೆ, ಭಾಷಣ, ದೇಶಭಕ್ತಿ, ಭಾವೈಕ್ಯತೆ, ರೈತನ ದುಡಿಮೆ-ಗರಿಮೆ, ಸಾವಯವ ಕೃಷಿ ಹಾಗೂ ಮಹಿಳೆ ಹೀಗೆ ಬೇರೆ ಬೇರೆ ಮಾದರಿಯ ವಸ್ತುಗಳುಳ್ಳ ಪಾಠಗಳನ್ನು ಅಳವಡಿಸಲಾಗಿದೆ.

©KTBS Not to be republished

ಸಮಕಾಲೀನ ಪಠ್ಯಪುಸ್ತಕ ವೈಜ್ಞಾನಿಕ ಹಾಗೂ ಶೈಕ್ಷಣಿಕವಾಗಿ ಉತ್ತಮವಾಗಿದೆ. ೨೦ನೆಯ ಶತಮಾನದ ಶಿಕ್ಷಣ ಕ್ರಾಂತಿಯ ಹಿನ್ನೆಲೆಯನ್ನು ಹೊಂದಿದೆ. ಈ ಪುಸ್ತಕದಲ್ಲಿ ಉತ್ತರ ಬರೆಯಲು ಸಾಕಷ್ಟು ಅವಕಾಶ ಮಾಡಲಾಗಿದೆ. ಆದ್ದರಿಂದ ಇದು ಪಠ್ಯ ಹಾಗೂ ಪ್ರಾಯೋಗಿಕ ಅಭ್ಯಾಸ ಸಹಿತ ಪುಸ್ತಕವಾಗಿದೆ. ಭಾಷೆಯ ಆಧುನೀಕರಣದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭಾಷೆಯ ರಚನೆ ಕಲಿಕೆಗೆ ಅವಕಾಶ ಮಾಡಿದೆ. ಮಕ್ಕಳ ಸಾಮಾಜಿಕ ಪರಿಸರದಲ್ಲಿ ಬಳಕೆಯಾಗುವ ಭಾಷಿಕ ರೂಪಗಳನ್ನು ಗಮನದಲ್ಲಿರಿಸಿಕೊಂಡು ಪ್ರಾದೇಶಿಕ ರೂಪ, ಅವುಗಳ ಅರ್ಥ ಹಾಗೂ ವಿವರಗಳನ್ನು ಸಾಂದರ್ಭಿಕವಾಗಿ ನೀಡಲಾಗಿದೆ. ಇದರ ಸಹಾಯದಿಂದ ಹೊಸ ಪದಗಳ ಅರ್ಥ ವಿವರಣೆಯನ್ನು ಓದಿ ಅರ್ಥೈಸಲು ಸಹಾಯಕವಾಗುವುದು.

'ಅರ್ಥ-ಗಮನಿಸಿ' ಭಾಗದಲ್ಲಿ ಪಠ್ಯದ ಪ್ರಮುಖ ಪರಿಕಲ್ಪನೆಗಳ ವಿವರಣೆ ಸಂಗ್ರಹ ರೀತಿಯಲ್ಲಿರುತ್ತದೆ. ಅಂದರೆ ಅರ್ಥವನ್ನು ಒಂದು ವಾಕ್ಯದಲ್ಲಿ ವಿವರಣಾತ್ಮಕವಾಗಿ ವಿವರಿಸಿ ಹೇಳಲಾಗಿದೆ. 'ಬಳಕೆ-ಚಟುವಟಿಕೆ' ಇಲ್ಲಿ ಬಳಕೆ ಮೂಲಕ ಭಾಷೆಯ ರಚನೆಯನ್ನು ಕಲಿಸುವುದಾದರೂ, ಮಕ್ಕಳು ಸ್ವಂತವಾಗಿ ಬರಹ ಮಾಡಬೇಕಾಗಿದೆ. ಇದರಿಂದ ಮಕ್ಕಳ ಬರೆವಣಿಗೆ ಉತ್ತಮವಾಗುವುದು. ಪ್ರಗತಿದಾಯಕವಾಗುವುದು. ಉಲ್ಲಾಸದಾಯಕ ಕ್ರಿಯಾತ್ಮಕ ಆಟಗಳ ಮೂಲಕ ಭಾಷೆಯ ರಚನೆಯನ್ನು ಕಲಿಯುವುದಕ್ಕೆ ಅವಕಾಶ ಕಲ್ಪಿಸಿದೆ. ಮಕ್ಕಳು ತಾವು ಓದಿದ ಪಠ್ಯದ ಬಗೆಗೆ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಅಭಿವ್ಯಕ್ತಿಪಡಿಸುವುದಕ್ಕೆ ಅವಕಾಶವನ್ನು ಕಲ್ಪಿಸಿದೆ. ಇದರಿಂದ ಕನ್ನಡ ವಾಕ್ಯ ರಚನೆಯನ್ನು ಮಕ್ಕಳು ಉತ್ತಮಪಡಿಸಿಕೊಳ್ಳಬಹುದಾಗಿದೆ.

ಮಕ್ಕಳು ಪರೋಕ್ಷವಾಗಿ ಮೂಲಾಕ್ಷರ, ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಕಲಿಯಲು ಅವಕಾಶ ಮಾಡಿದೆ. ಪಾಠದಿಂದ ಪಾಠಕ್ಕೆ ಭಾಷಾ ಚಟುವಟಿಕೆ ಸರಣಿಯನ್ನು ಉನ್ನತೀಕರಿಸಿದೆ. ಸಾಮರ್ಥ್ಯವಾರು ಮತ್ತು ವಾರ್ಷಿಕ ದಿನಚರಿಗಳ ವಿಶೇಷತೆಯನ್ನು ಗಮನಿಸಿ ಅನುಕ್ರಮವಾಗಿ ಒಂದು ಪದ್ಯ ಆದ ಮೇಲೆ ಎರಡು ಅಥವಾ ಮೂರು ಗದ್ಯ ಪಾಠಗಳನ್ನು ಜೋಡಿಸಿದೆ. 'ನುಡಿ-ಆಟಗಳು' ಮಕ್ಕಳ ಪಠ್ಯದ ಸಂದರ್ಭದಲ್ಲಿ ಕಲಿತ ಭಾಷಾ ಜ್ಞಾನವನ್ನು ಪರೀಕ್ಷಿಸಿಕೊಳ್ಳುವ ಭಾಗ. ಇಲ್ಲಿ ಮಕ್ಕಳ ಸಾಮಾಜಿಕ ಪರಿಸರದಲ್ಲಿ ಬಳಕೆಯಾಗುವ ಭಾಷಿಕ ಆಟಗಳ ಮಾದರಿಗಳನ್ನು ಗಮನಿಸಿ ಅಳವಡಿಸಿದೆ. ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಗಾದೆ, ನುಡಿಗಟ್ಟು, ನಾಣ್ಣುಡಿಗಳು ಮರೆಯಾಗುತ್ತಿವೆ. ಅಂತಹವುಗಳನ್ನು ಇಲ್ಲಿ ಪರಿಚಯ ಮಾಡಲಾಗಿದೆ. 'ನುಡಿ-ಕಣಜ' ಭಾಗ ಕಲಿಕೆಯನ್ನು ಖಚಿತ ಮಾಡಲು ಪೂರಕವಾಗಿದೆ. ಮಕ್ಕಳು ಹೆಚ್ಚುವರಿಯಾಗಿ ಒಂದು ಪದಕ್ಕೆ ಬೇರೆ ಬೇರೆ ಅರ್ಥಗಳನ್ನು ಇಲ್ಲಿ ತಿಳಿಯಲು ಸಹಾಯಕವಾಗಿದೆ. ಇದು ಮಕ್ಕಳ ಪದ ಸಂಪತ್ತನ್ನು ಹೆಚ್ಚು ಮಾಡಿಕೊಳ್ಳಲು ಅನುವಾಗುವುದು.

ಪ್ರಸ್ತುತ ಈ ಪಠ್ಯಪುಸ್ತಕದ ರಚನೆಯಲ್ಲಿ ನೆರವಾದ ಸಮಿತಿಯ ಎಲ್ಲ ಸದಸ್ಯರುಗಳು ತಾವು ವಹಿಸಿಕೊಂಡ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಕೊಟ್ಟಿದ್ದಾರೆ. ಪರಿಶೀಲಕರು ಸಕ್ರಿಯವಾಗಿ ಪಾಲ್ಗೊಂಡು ಸೂಕ್ತ ಸಲಹೆಗಳನ್ನು ನೀಡಿ ಪುಸ್ತಕ ಮೌಲಿಕವಾಗುವಂತೆ ಮಾಡಿದ್ದಾರೆ. ಹಾಗೆಯೆ ಪಠ್ಯ ರಚನೆ ಸಂದರ್ಭದಲ್ಲಿ ಸೂಕ್ತ ಸಲಹೆ ನೀಡಿದ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರು, ಉಪ ನಿರ್ದೇಶಕರು ಮತ್ತು ಸಂಯೋಜಕರು ಹಾಗೂ ಹಿರಿಯ ಸಹಾಯಕ ನಿರ್ದೇಶಕರುಗಳನ್ನು ಪ್ರೀತಿಯಿಂದ ನೆನೆಯುತ್ತೇನೆ. ಪಠ್ಯದ ಆಶಯಕ್ಕೆ ತಕ್ಕಂತೆ ಚಿತ್ರವನ್ನು ರಚಿಸಿಕೊಟ್ಟ ಕಲಾವಿದರಿಗೆ ವಂದನೆಗಳು. ಕರಡುಪ್ರತಿಯನ್ನು ತಿದ್ದುವುದರಲ್ಲಿ ಸಹಕರಿಸಿದ ಹಾಗೆಯೇ ಪಠ್ಯಪುಸ್ತಕ ರಚನೆ ಕಾರ್ಯಾಗಾರದಲ್ಲಿ ಸಹಕರಿಸಿದ ಕರ್ನಾಟಕ ಪಠ್ಯಪುಸ್ತಕ ಸಂಘದ ಎಲ್ಲಾ ವರ್ಗದ ಅಧಿಕಾರಿಗಳಿಗೆ ಆತ್ಮೀಯ ವಂದನೆಗಳು.

©KTBS Not to be republished

**ಡಾ. ಪಿ. ಮಹಾದೇವಯ್ಯ**
ಅಧ್ಯಕ್ಷರು
ಸವಿ ಕನ್ನಡ – ೪
ಪಠ್ಯಪುಸ್ತಕ ರಚನಾ ಸಮಿತಿ

# ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ,** ರಾಜ್ಯಪಠ್ಯಪುಸ್ತಕ ಪರಿಷ್ಕರಣಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ)., ಬೆಂಗಳೂರು–೮೫

## ಪರಿಷ್ಕರಣ ಸಮಿತಿ

**ಅಧ್ಯಕ್ಷರು**

**ಡಾ. ರಾಜಪ್ಪ ದಳವಾಯಿ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕೋಲಾರ, ಬೆಂಗಳೂರು ವಿಶ್ವವಿದ್ಯಾಲಯ.

**ಸದಸ್ಯರು**

**ಡಾ. ಜಗನ್ನಾಥ್. ಹೆಬ್ಬಾಳೆ,** ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ, ವಾಣಿಜ್ಯ ಪ್ರಥಮದರ್ಜೆ ಕಾಲೇಜು, ಬೀದರ್

**ಶ್ರೀ. ಅಲ್ಲಮಪ್ರಭು ಬೆಟ್ಟದೂರು,** ನಿವೃತ್ತ ಪ್ರಾಂಶುಪಾಲರು, ಅಮರ ಚೇತನ, ತವಳಗೇರಿ ಕಾಲೋನಿ, ಕಲ್ಯಾಣನಗರ, ಕೊಪ್ಪಳ

**ಶ್ರೀ. ವಿ.ರಂಗಪ್ಪಯ್ಯಹೊಳ್ಳ,** ನಿವೃತ್ತ ಕನ್ನಡ ಭಾಷಾ ಶಿಕ್ಷಕರು, ಶ್ರೀನಿವಾಸ ಚಿತ್ರಪಾಡಿ, ಸಾಲಿಗ್ರಾಮ, ಉಡುಪಿ ತಾ.

**ಶ್ರೀ. ಬಿ. ರವೀಶ್‌ಕುಮಾರ್,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲ್ಲೂಕು.

**ಶ್ರೀ. ಚಿಕ್ಕದೇವೇಗೌಡ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು–೬೧

**ಶ್ರೀ. ತಮ್ಮಣ್ಣಗೌಡ ಹೆಚ್.ಸಿ.,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾಲ್ಲೂಕು

**ಶ್ರೀಮತಿ. ಸುಶೀಲ,** ಕನ್ನಡ ಅಧ್ಯಾಪಕಿ, (ಪ್ರೌಢಶಾಲಾ ವಿಭಾಗ), ಸರ್ಕಾರಿ ಪದವಿಪೂರ್ವ ಕಾಲೇಜು, ಮದ್ದೂರು ತಾಲ್ಲೂಕು

**ಶ್ರೀ. ಬಸವರಾಜಪ್ಪ, ಎಂ,** ಕನ್ನಡ ಅಧ್ಯಾಪಕರು (ಪ್ರೌಢಶಾಲಾ ವಿಭಾಗ), ಸರ್ಕಾರಿಪದವಿಪೂರ್ವಕಾಲೇಜು, ಹೊಸನಗರತಾ.

**ಶ್ರೀ. ಎನ್.ಬಿ.ವೀರನಗೌಡ,** ಬಿ.ಅರ್.ಪಿ, ಕ್ಷೇತ್ರಸಮನ್ವಯಾಧಿಕಾರಿಗಳ ಕಛೇರಿ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

**ಕಲಾವಿದರು:**

**ಶ್ರೀ. ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

©KTBS Not to be republished

## ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು–೭೮

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನಸಂಸ್ಥೆ, ಮಾನಸ ಗಂಗೋತ್ರಿ , ಮೈಸೂರು–೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ, ಎಚ್.ಎಸ್.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫

**ಶ್ರೀ ಕೆ.ಜಿ. ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫

## ಪರಿಷ್ಕರಣೆ ಕುರಿತು.

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು

©KTBS Not to be republished

ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ, ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

©KTBS
Not to be republished

**(ಎಂ.ಪಿ. ಮಾದೇಗೌಡ)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

# ಪುನರ್ ಪರಿಶೀಲನೆಯ ಕುರಿತು

೨೦೧೪ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು ೨೦೧೭–೧೮ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ೨೦೨೧ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾಗಿದ್ದ ಭಾಷಾ ಪಠ್ಯಗಳಲ್ಲಿ ನಮಗೆ ಅನೇಕ ಸಮಸ್ಯೆಗಳು ಕಂಡುಬಂದವು. ಅವುಗಳನ್ನು ಸರಿಪಡಿಸಲು ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಭಾಷಾಪಠ್ಯವು ಇರುವುದು ವಿದ್ಯಾರ್ಥಿಯಲ್ಲಿ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಉತ್ತಮಪಡಿಸುವುದಕ್ಕೆ. ಭಾಷಾಪಠ್ಯಗಳನ್ನು ಅಧ್ಯಯನ ಮಾಡಿದ ವಿದ್ಯಾರ್ಥಿಯಲ್ಲಿ ಭಾಷೆಯ ಬಗ್ಗೆ ಅಭಿಮಾನ ಮೂಡಬೇಕು; ಆತನ ಭಾಷಾಪ್ರೌಢಿಮೆ ಗಣನಾತ್ಮಕವಾಗಿ ಹೆಚ್ಚಬೇಕು. ಓದುವ, ಆಲಿಸುವ, ಮಾತಾಡುವ ಮತ್ತು ಬರೆಯುವ ಸಾಮರ್ಥ್ಯಗಳು ಸುಧಾರಿಸಬೇಕು. ಸ್ವತಂತ್ರವಾಗಿ ವಿದ್ಯಾರ್ಥಿಯು ತನ್ನ ಅಭಿಪ್ರಾಯ, ಅನಿಸಿಕೆಗಳನ್ನು ಅತ್ಯಂತ ಶಕ್ತಿಶಾಲಿಯಾಗಿ ಹೇಳುವುದಕ್ಕೆ ಸಾಧ್ಯವಾಗಬೇಕು. ೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾದ ಪಠ್ಯಪುಸ್ತಕಗಳಲ್ಲಿ ಭಾಷೆಯ ಈ ಬಗೆಯ ಕಲಿಕೆಗೆ ಹಿನ್ನಡೆಯಾಗಿ ಕೇವಲ ಸಿದ್ಧಾಂತಪ್ರಚಾರವೇ ಮುನ್ನೆಲೆಗೆ ಬಂದಿದ್ದುದನ್ನು ಗಮನಿಸಿದೆವು. ಆ ಪಠ್ಯಗಳ ಮರುಪರಿಷ್ಕರಣೆಯ ಹೊತ್ತಿನಲ್ಲಿ ಈ ನಿಯಮಗಳನ್ನು ಹೇರಿಕೊಂಡೆವು: (೧) ಭಾಷಾಪಠ್ಯವಿರುವುದು ಅತ್ಯುತ್ತಮವಾದ ಪ್ರಾತಿನಿಧಿಕ ಪಠ್ಯವನ್ನು ಕೊಡುವುದಕ್ಕಾಗಿಯೇ ಹೊರತು ಸಾಮಾಜಿಕನ್ಯಾಯ, ಲಿಂಗಸಮಾನತೆ ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ. ಹಾಗಾಗಿ ಭಾಷೆಯ ವೈವಿಧ್ಯ ಹಾಗೂ ವಿಶೇಷಗಳನ್ನು ಹೆಚ್ಚು ಕಾಣಿಸುವ ಗದ್ಯ/ಪದ್ಯ ಭಾಗಗಳನ್ನು ಆರಿಸಿಕೊಳ್ಳಬೇಕು. (೨) ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತಪ್ರಚಾರಕ್ಕೆ ಅವಕಾಶವಾಗಬಾರದು. (೩) ಗ್ರಾಂಥಿಕ ಭಾಷೆಯಲ್ಲದೆ ಮೌಖಿಕ ಪರಂಪರೆಯ ಹಾಗೂ ಹಲವು ಪ್ರಕಾರದ ಸಾಹಿತ್ಯಗಳಿಗೆ ಅವಕಾಶ ಕೊಡಬೇಕು. (೪) ಬಳಸಿದ ಭಾಷೆ, ಭಾಷಾಸೊಗಡು, ಪ್ರತಿಪಾದಿಸಿರುವ ವಿಚಾರ, ಹೊಸ ಚಿಂತನೆಗಳನ್ನು ಹುಟ್ಟಿಸುವ ಸಾಧ್ಯತೆ, ಸಾಹಿತ್ಯ ಪ್ರಕಾರದ ವೈಶಿಷ್ಟ್ಯ ಇತ್ಯಾದಿ ಎಲ್ಲ ಬಗೆಯಲ್ಲೂ ಪಾಠಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕು. (೫) ಕವಿ/ಲೇಖಕರ

©KTBS Not to be republished

ಪುನರಾವರ್ತನೆಯನ್ನು ಕಡಿಮೆ ಮಾಡಿ ಹೊಸ ಕವಿ/ಲೇಖಕರ ಬರಹಗಳಿಗೆ ಅವಕಾಶ ಮಾಡಿಕೊಡಬೇಕು. (೬) ಭಾಷೆಯ ಸೊಬಗನ್ನು ಪರಿಚಯಿಸುವ ಭಾಗಗಳನ್ನು ಪ್ರತಿ ಅಧ್ಯಾಯದ ಜೊತೆ ಸೇರಿಸಬೇಕು.

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (೨೦೧೪ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ. ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

**ಎಂ.ಪಿ. ಮಾದೇಗೌಡ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು
ಕರ್ನಾಟಕ ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿ

©KTBS
Not to be republished

### ಪುನರ್ ಪರಿಷ್ಕರಣಾ ಸಮಿತಿ

**ಶ್ರೀ ರೋಹಿತ್ ಚಕ್ರತೀರ್ಥ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

**ಸದಸ್ಯರು :**

**ಡಾ. ರೋಹಿಣಾಕ್ಷ,** ಸಹಾಯಕ ಪ್ರಾಧ್ಯಾಪಕರು, ಜಾನಪದಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಆಳಂದ ರಸ್ತೆ, ಕಲಬುರಗಿ.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಭಾಷಾ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ಉತ್ತರಹಳ್ಳಿ, ಬೆಂಗಳೂರು, ದಕ್ಷಿಣ ವಲಯ–೧.

**ಸಲಹೆಗಾರರು :**

**ಶ್ರೀ ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫.

**ಶ್ರೀ ಕೆ.ಜಿ.ರಂಗಯ್ಯ** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫.

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ. ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫.

# ಪರಿವಿಡಿ

P2Q2U6




| ಕ್ರ.ಸಂ. | ಗದ್ಯ-ಪದ್ಯಗಳು | ಕೃತಿಕಾರರ ಹೆಸರು | ಪುಟ ಸಂಖ್ಯೆ |
|---|---|---|---|
| ೧ | ಕನ್ನಡಮ್ಮನ ಹರಕೆ (ಪದ್ಯ) | ಕುವೆಂಪು | ೦೧ |
| ೨ | ಬುದ್ಧಿವಂತ ರಾಮಕೃಷ್ಣ | ಸಮಿತಿ ರಚನೆ | ೦೬ |
| ೩ | ವೀರಮಾತೆ ಜೀಜಾಬಾಯಿ | ಸಮಿತಿ ರಚನೆ | ೧೩ |
| ೪ | ಮಳೆ (ಪದ್ಯ) | ಪಳಕಳ ಸೀತಾರಾಮ ಭಟ್ಟ | ೨೨ |
| ೫ | ಅಜ್ಜಿಯ ತೋಟದಲ್ಲಿ ಒಂದು ದಿನ | ಸಮಿತಿ ರಚನೆ | ೨೯ |
| ೬ | ದೊಡ್ಡವರು ಯಾರು? | ಸಮಿತಿ ರಚನೆ | ೩೯ |
| ೭ | ಬೀಸೋಕಲ್ಲಿನ ಪದ (ಪದ್ಯ) | ಜನಪದ | ೪೬ |
| ೮ | ತಾಯಿಗೊಂದು ಪತ್ರ | ಸಮಿತಿ ರಚನೆ | ೫೧ |
| ೯ | ಮಹಿಳಾ ದಿನಾಚರಣೆ | ಸಮಿತಿ ರಚನೆ | ೫೮ |
| ೧೦ | ಸರ್ವಜ್ಞನ ತ್ರಿಪದಿಗಳು (ಪದ್ಯ) | ಸರ್ವಜ್ಞ | ೬೪ |
| ೧೧ | ವೀರ ಅಭಿಮನ್ಯು | ಸಮಿತಿ ರಚನೆ | ೬೮ |
| ೧೨ | ಪ್ರವಾಸ ಹೋಗೋಣ | ಸಮಿತಿ ರಚನೆ | ೭೮ |
| ೧೩ | ಬಾವಿಯಲ್ಲಿ ಚಂದ್ರ (ಪದ್ಯ) | ಬಿ.ಎಂ.ಶರ್ಮ | ೮೯ |
| ೧೪ | ಹುತಾತ್ಮ ಬಾಲಕ | ಸಮಿತಿ ರಚನೆ | ೯೫ |
| ೧೫ | ದುಡಿಮೆಯ ಗರಿಮೆ (ಪದ್ಯ) | ವಿ.ಬಿ. ಕುಳಮರ್ವ | ೧೦೨ |
| ೧೬ | ಕನಸುಗಾರ ಕಲಾಂ | ಸಮಿತಿ ರಚನೆ | ೧೦೮ |
| ೧೭ | ಕಾಡಿನಲ್ಲೊಂದು ಸ್ಪರ್ಧೆ | ಸಮಿತಿ ರಚನೆ | ೧೧೭ |
| | ನುಡಿ ಆಟಗಳು | ಸಮಿತಿ ರಚನೆ | ೧೨೮ |


©KTBS Not to be republished

V1T5C2

# ಪಾಠ – ೧
# ಕನ್ನಡಮ್ಮನ ಹರಕೆ (ಪದ್ಯ)

**ಕಲಿಕೆಗೆ ದಾರಿ :**
ಕನ್ನಡ ನಾಡಿನ ಬಗ್ಗೆ ನಿಮಗೆ ತಿಳಿದಿರುವ ಒಂದು ಹಾಡನ್ನು ತರಗತಿಯಲ್ಲಿ ರಾಗವಾಗಿ ಹಾಡಿರಿ.

ಕನ್ನಡಕೆ ಹೋರಾಡು
ಕನ್ನಡದ ಕಂದಾ;
ಕನ್ನಡವ ಕಾಪಾಡು
ನನ್ನ ಆನಂದಾ ।

ಜೋಗುಳದ ಹರಕೆಯಿದು
ಮರೆಯದಿರು, ಚಿನ್ನಾ;
ಮರೆತೆಯಾದರೆ ಅಯ್ಯೊ
ಮರೆತಂತೆ ನನ್ನ ।

ಮೊಲೆಯ ಹಾಲೆಂತಂತೆ
ಸವಿಜೇನು ಬಾಯ್ಗೆ;
ತಾಯಿಯಪ್ಪುಗೆಯಂತೆ
ಬಲುಸೊಗಸು ಮೆಯ್ಗೆ ।

ಗುರುವಿನೊಳ್ನುಡಿಯಂತೆ
ಶ್ರೇಯಸ್ಸು ಬಾಳ್ಗೆ;
ತಾಯ್ನುಡಿಗೆ ದುಡಿದು ಮಡಿ
ಇಹಪರಗಳೇಳ್ಗೆ ।



© KTBS Not to be republished

ದಮ್ಮಯ್ಯ ಕಂದಯ್ಯ
ಬೇಡುವೆನು ನಿನ್ನ;
ಕನ್ನಡಮ್ಮನ ಹರಕೆ,
ಮರೆಯದಿರು, ಚಿನ್ನಾ ।

ಮರೆತೆಯಾದರೆ ಅಯ್ಯೊ;
ಮರೆತಂತೆ ನನ್ನ;
ಹೋರಾಡು ಕನ್ನಡಕೆ
ಕಲಿಯಾಗಿ, ರನ್ನಾ ।

– ಕುವೆಂಪು

ಕಂದ ಕಲಿತರೆ ಕನ್ನಡವ, ಎಂದೆಂದಿಗೂ ಮುನ್ನಡೆವ

## ಪದಗಳ ಅರ್ಥ

ಕಾಪಾಡು – ರಕ್ಷಿಸು, ಪೋಷಿಸು; ದುಡಿ – ಕೆಲಸ ಮಾಡು, ಶ್ರಮಪಡು; ಬೇಡು – ಕೇಳು, ಯಾಚಿಸು; ಮಡಿ – ಸಾವು, ಮರಣ ಹೊಂದು; ಶ್ರೇಯಸ್ಸು– ಏಳಿಗೆ, ಅಭಿವೃದ್ಧಿ; ಹೋರಾಡು – ಸೆಣಸು, ಹೋರಾಟ ಮಾಡು; ಅಪ್ಪುಗೆ – ಆಲಿಂಗನ; ಕಲಿ – ವೀರ, ಶೂರ; ಸವಿ – ರುಚಿ.

## ಟಿಪ್ಪಣಿ

ಇಹಪರ – ಭೂಮಿಯ ಮೇಲಿನ ಬದುಕು, ಮನುಷ್ಯನ ಲೋಕ

ಜೋಗುಳ – ಮಕ್ಕಳನ್ನು ಮಲಗಿಸುವಾಗ ಹಾಡುವ ಪದ, ಲಾಲಿ ಹಾಡು.

ತಾಯ್ನುಡಿ – ತಾಯಿ ಮಾತು, ಮಾತೃಭಾಷೆ, ಮನೆಮಾತು.

ದಮ್ಮಯ್ಯ – ದೀನತೆಯಿಂದ ಬೇಡುವುದು.

## ಅಭ್ಯಾಸ

©KTBS Not to be republished

### ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ

೧. ಕನ್ನಡದ ಕಂದ ಯಾವುದಕ್ಕಾಗಿ ಹೋರಾಡಬೇಕು?

........................................................................................................

೨. ಕನ್ನಡವನ್ನು ಮರೆತರೆ ಯಾರನ್ನು ಮರೆತಂತೆ?

........................................................................................................

೩. ಕನ್ನಡದ ಕಂದ ಯಾವುದನ್ನು ಮರೆಯಬಾರದು?

........................................................................................................

೪. ಕನ್ನಡ ನುಡಿಯ ಸೊಗಸನ್ನು ಯಾವುದಕ್ಕೆ ಹೋಲಿಸಲಾಗಿದೆ?

........................................................................................................

## ಆ. ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದ ಆರಿಸಿ ಖಾಲಿ ಸ್ಥಳದಲ್ಲಿ ಬರೆಯಿರಿ.

೧. ಕನ್ನಡಕೆ ಹೋರಾಡು ಕನ್ನಡದ ..........................................................................

(೧. ವೀರ ೨. ಶೂರ ೩. ಧೀರ ೪. ಕಂದಾ)

೨. ಮರೆತೆಯಾದರೆ .............................. ಮರೆತಂತೆ ನನ್ನ.

(೧. ದಮ್ಮಯ್ಯ ೨. ಅಯ್ಯೊ ೩. ಕಂದಯ್ಯ ೪. ನನ್ನ)

೩. ಮೊಲೆಯ ಹಾಲೆಂತಂತೆ ........................................................ ಬಾಯ್ಗೆ

(೧. ಹೆಜ್ಜೇನು ೨. ಕಿರುಜೇನು, ೩. ಸವಿಜೇನು ೪. ಹಾಲ್ಜೇನು)

೪. ಹೋರಾಡು ಕನ್ನಡಕೆ ............................... ರನ್ನಾ.

(೧. ವೀರನಾಗಿ ೨. ಶೂರನಾಗಿ ೩. ಕಲಿಯಾಗಿ ೪. ಧೀರನಾಗಿ)

## ಇ. ಪದ್ಯದಲ್ಲಿ ಬಿಟ್ಟಿರುವ ಮುಂದಿನ ಸಾಲುಗಳನ್ನು ಬರೆಯಿರಿ

ದಮ್ಮಯ್ಯ ಕಂದಯ್ಯ

...........................................

...........................................

ಮರೆಯದಿರು ಚಿನ್ನಾ ।

ಮರೆತೆಯಾದರೆ ಅಯ್ಯೊ ;

...........................................

...........................................

ಕಲಿಯಾಗಿ ರನ್ನಾ ।

©KTBS Not to be republished

## ಭಾಷಾ ಚಟುವಟಿಕೆ

**ಅ. ಮಾದರಿಯಂತೆ ಕೊಟ್ಟಿರುವ ಪದಗಳಿಗೆ ಪ್ರಾಸ ಪದ ಬರೆಯಿರಿ**

ಮಾದರಿ : ದಮ್ಮಯ್ಯ : ಕಂದಯ್ಯ

ಹೋರಾಡು: ..........................................

ಬಾಯ್ಗೆ : ..........................................

ಬಾಳ್ಗೆ : ..........................................

ಚೆನ್ನಾ : ..........................................

**ಆ. ಕೊಟ್ಟಿರುವ ಪದಗಳಲ್ಲಿ ಬರಹದ ಸರಿಯಾದ ರೂಪವನ್ನು ಆರಿಸಿ ಬರೆಯಿರಿ**

ಓರಾಡು – ಹೋರಾಡು ..........................................

ಹರಕೆ – ಅರಕೆ ..........................................

ಆನಂದ – ಹಾನಂದ ..........................................

ಹಯ್ಯೊ – ಅಯ್ಯೊ ..........................................

ಹಾಲು – ಆಲು ..........................................

ಅಪ್ಪುಗೆ – ಹಪ್ಪುಗೆ ..........................................

**ಇ. ಕೊಟ್ಟಿರುವ ಒತ್ತಕ್ಷರಗಳನ್ನು ಗಮನಿಸಿ. ವೃತ್ತದೊಳಗೆ ಸಜಾತಿ ಒತ್ತಕ್ಷರ ಹಾಗೂ ಚೌಕದಲ್ಲಿ ವಿಜಾತಿ ಒತ್ತಕ್ಷರಗಳನ್ನು ಬರೆಯಿರಿ**

ನ್ನ, ಸ್ನೊ, ಷ್ಟ, ಹ್ರ, ಬ್ಬ, ಯ್ಯ, ಸ್ತ, ಟ್ಟ, ತ್ತ, ಮ್ಮ, ಶ್ರೇ, ಕ್ಷ, ಪ್ಪ, ಶ್ನೆ.

## ಬಳಕೆ ಚಟುವಟಿಕೆ

**ಅ. ಹಿರಿಯರಿಂದ ಜೋಗುಳದ ಪದಗಳನ್ನು ಸಂಗ್ರಹಿಸಿ ಅಭ್ಯಾಸ ಮಾಡಿ**

**ಆ. ಕನ್ನಡದ ಕವಿಗಳ ಭಾವಚಿತ್ರ ಸಂಗ್ರಹಿಸಿ 'ಭಾವಚಿತ್ರ ಕೋಶ' ತಯಾರಿಸಿರಿ**

©KTBS Not to be republished

## ಇ. ಕೊಟ್ಟಿರುವ ಸಾಲುಗಳನ್ನು ವೇಗವಾಗಿ ಉಚ್ಚರಿಸಿ

೧. ಟಗರಿಗೆ ತರಗು ತಂದು ಹಾಕು.

೨. ತರಿಕೆರೆ ಏರಿ ಮೇಲೆ ಮೂರು ಕರಿ ಕುರಿಮರಿ.

೩. ಕಪ್ಪು ಕುಂಕುಮ ಕೆಂಪು ಕುಂಕುಮ.

೪. ಕಾಗೆ ಪುಕ್ಕ ಗೂಬೆ ಪುಕ್ಕ.

## ಈ. ಪದ್ಯದಲ್ಲಿ ನೀವು ಇಷ್ಟಪಡುವ ನಾಲ್ಕು ಸಾಲುಗಳನ್ನು ಬರೆಯಿರಿ

..........................................................................................................

..........................................................................................................

..........................................................................................................

..........................................................................................................

## ಉ. ಈ ಪದ್ಯದ ಮೊದಲ ೧೨ ಸಾಲುಗಳನ್ನು ಕಂಠಪಾಠ ಮಾಡಿ ನಿಮ್ಮದೇ ರಾಗದಲ್ಲಿ ಹಾಡಿರಿ

©KTBS
Not to be republished




ನೀನೀಗ ಕಂಠಪಾಠ ಮಾಡಿದ ಪದ್ಯವನ್ನು ನಿನ್ನದೇ ರಾಗದಲ್ಲಿ ಹಾಡುವ ಸಾಮರ್ಥ್ಯವನ್ನು ಪಡೆದಿರುವೆಯಲ್ಲವೆ?

L2S7I9

# ಪಾಠ – ೨


# ಬುದ್ಧಿವಂತ ರಾಮಕೃಷ್ಣ

ಸಮಿತಿ ರಚನೆ –

**ಕಲಿಕೆಗೆ ದಾರಿ:**

ನೀನು ಓದಿರುವ ಕಥೆ, ಕವನ, ಚುಟುಕು ಅಥವಾ ನಗೆಹನಿಗಳಲ್ಲಿ ಯಾವುದಾದರೊಂದನ್ನು ತರಗತಿಯಲ್ಲಿ ಹೇಳು.

ಒಂದು ಸಲ ವಿದ್ಯಾಸಾಗರನೆಂಬ ಮಹಾನ್ ಪಂಡಿತ ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದನು. ಅವನ ಖ್ಯಾತಿ ಎಲ್ಲ ಕಡೆ ಹಬ್ಬಿತ್ತು. ಸಂಸ್ಕೃತದಲ್ಲಿ ಅವನು ಮಹಾಮೇಧಾವಿಯಾಗಿದ್ದನು. ವಿದ್ಯಾಭಿಮಾನಿಯಾದ ಕೃಷ್ಣದೇವರಾಯ ಅವನನ್ನು ಸ್ವಾಗತಿಸಿ ಸತ್ಕರಿಸಿದನು.



"ಮಹಾಪ್ರಭು ನಾನು ನಿಮ್ಮ ಆಸ್ಥಾನದ ಪಂಡಿತರೊಡನೆ ವಾದ ಮಾಡಲು ಬಂದಿದ್ದೇನೆ" ಎಂದನು ವಿದ್ಯಾಸಾಗರ. ಕೃಷ್ಣದೇವರಾಯ ಅದಕ್ಕೊಪ್ಪಿ ತನ್ನ ಆಸ್ಥಾನದ ಪಂಡಿತರ ಕಡೆ ನೋಡಿದ. ಅವರಾರೂ ವಾದ ಮಾಡಲು ಆಸಕ್ತಿ ತೋರಿಸಲಿಲ್ಲ.


ಎಲ್ಲರೂ ಮೌನವಾಗಿರುವುದನ್ನು ಕಂಡ ವಿದ್ಯಾಸಾಗರ "ಇಂಥ ದೊಡ್ಡ ರಾಜನ ಆಸ್ಥಾನದಲ್ಲಿ ನನ್ನನ್ನು ಸೋಲಿಸುವ ಒಬ್ಬ ಪಂಡಿತನೂ ಇಲ್ಲವೆನ್ನುವುದು ಬೇಸರದ ಸಂಗತಿ. ಈ ವಿಷಯ ಮೊದಲೇ ತಿಳಿದಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ" ಎಂದನು.

ಆಗ ತೆನಾಲಿರಾಮಕೃಷ್ಣ ಎದ್ದು ನಿಂತು "ಇಷ್ಟು ಬೇಗನೆ ನೀವು ಈ ತೀರ್ಮಾನಕ್ಕೆ ಬರಬೇಡಿ" ಎಂದನು. ವಿದ್ಯಾಸಾಗರ ಅವನತ್ತ ನೋಡಿ, "ನೀವು ಯಾರು?" ಎಂದು ಕೇಳಿದನು. "ನಾನು ಒಂದೆರಡು ಗ್ರಂಥಗಳನ್ನು ಬರೆದಿದ್ದೇನೆ. ನನ್ನನ್ನು ತೆನಾಲಿ ರಾಮಕೃಷ್ಣ ಎನ್ನುತ್ತಾರೆ" ಎಂದನು.

ವಿದ್ಯಾಸಾಗರನ ಮುಖ ಅರಳಿತು. "ಹೌದೇನು? ನಾನು ನಿಮ್ಮ ಬುದ್ಧಿವಂತಿಕೆ ಬಗ್ಗೆ ಕೇಳಿದ್ದೇನೆ. ಆದರೆ ಬುದ್ಧಿಚಾತುರ್ಯಕ್ಕಿಂತ ಮುಖ್ಯವಾಗಿ ಆಳವಾದ ಅಧ್ಯಯನ ಮಾಡಿದವರು ಮಾತ್ರ ನನ್ನೊಂದಿಗೆ ವಾದ ಮಾಡಲು ಸಾಧ್ಯ" ಎಂದನು. "ಅದು ನನಗೂ ತಿಳಿದಿದೆ. ನೀವು ಯಾವ ಗ್ರಂಥದ ಮೇಲೆ ವಾದ ಮಾಡುತ್ತೀರಿ?" ಪ್ರಶ್ನಿಸಿದ ರಾಮಕೃಷ್ಣ. ಇದಕ್ಕೆ ವಿದ್ಯಾಸಾಗರ "ನಿಮಗೆ ಇಷ್ಟವಾದ ಯಾವುದೇ ಸಂಸ್ಕೃತ ಗ್ರಂಥವಾಗಬಹುದು" ಎಂದನು. "ಹಾಗಾದರೆ ನಾಳೆ ಸಂಜೆ ಇದೇ ಹೊತ್ತಿಗೆ ನಿಮ್ಮೊಂದಿಗೆ ವಾದ ಮಾಡಲು ಸಿದ್ಧನಾಗಿ ಬರುತ್ತೇನೆ" ಎಂದನು ರಾಮಕೃಷ್ಣ.

ಮಾರನೆಯ ದಿನ ವಿದ್ಯಾಸಾಗರ ಹೆಮ್ಮೆಯಿಂದ ಆಸ್ಥಾನವನ್ನು ಪ್ರವೇಶಿಸಿ ತನ್ನ ಪೀಠದಲ್ಲಿ ಕುಳಿತನು. ಇವನೆಂಥ ವಾದ ಮಾಡುತ್ತಾನೆಂದು ಎಲ್ಲರೂ ಅಚ್ಚರಿಯಿಂದ ಕಾದು ಕುಳಿತಿದ್ದರು. ರಾಮಕೃಷ್ಣ ಸ್ವಲ್ಪ ಹೊತ್ತಿನ ಅನಂತರ ಬಟ್ಟೆಯಲ್ಲಿ ಸುತ್ತಿದ ಕಟ್ಟನ್ನು ಸೇವಕನ ಹತ್ತಿರ ಹಿಡಿಸಿಕೊಂಡು ಸಭೆಗೆ ಬಂದನು. ಆ ಕಟ್ಟಿನಲ್ಲಿ ಏನಿದೆಯೆಂದು ಯಾರಿಗೂ ಊಹೆ ಮಾಡಲಾಗಲಿಲ್ಲ.

© KTBS Not to be republished



ರಾಮಕೃಷ್ಣ ತನ್ನ ಪೀಠದಲ್ಲಿ ಕುಳಿತು ವಿದ್ಯಾಸಾಗರನಿಗೆ ಹೇಳಿದನು. "ನಾನು ಸಿದ್ಧನಾಗಿದ್ದೇನೆ ಸ್ವಾಮಿ." "ನಾನೂ ಸಿದ್ಧ. ಪ್ರಾರಂಭಿಸೋಣ" ಎಂದನು ವಿದ್ಯಾಸಾಗರ. "ವಾದಕ್ಕೆ ಯಾವುದೇ ಗ್ರಂಥವನ್ನು ನಾನು ಆರಿಸಿಕೊಳ್ಳಬಹುದೆಂದು ತಾವು ಹೇಳಿದ್ದಿರಿ" ಎಂದನು ರಾಮಕೃಷ್ಣ. ಇದಕ್ಕೆ ವಿದ್ಯಾಸಾಗರ "ಹೌದು! ಯಾವುದನ್ನು ಬೇಕಾದರೂ ಆರಿಸಿಕೊಳ್ಳಿ" ಎಂದನು. ರಾಮಕೃಷ್ಣ

ತನ್ನ ಎದುರಿಗಿದ್ದ ಕಟ್ಟನ್ನು ತೋರಿಸಿ "ನಾನು ಈಗ ಈ 'ತಿಲಕಾಷ್ಠಮಹಿಷಬಂಧನ'ದ ಮೇಲೆ ವಾದ ಮಾಡುತ್ತೇನೆ. ಆರಂಭಿಸಲೇ?" ಎಂದನು. 'ತಿಲಕಾಷ್ಠಮಹಿಷಬಂಧನ!' ವಿದ್ಯಾಸಾಗರ ಕಣ್ಣರಳಿಸಿ "ಅದು...! ಅದು...!" ಎಂದು ತೊದಲಿದನು.

"ಏಕೆ? ನಿಮಗೆ 'ತಿಲಕಾಷ್ಠಮಹಿಷಬಂಧನ' ತಿಳಿದಿಲ್ಲವೆ? ಇದು ನಮ್ಮೂರಿನಲ್ಲಿ ದನ ಕಾಯುವ ಹುಡುಗರಿಗೂ ಗೊತ್ತು" ಎಂದು ಹೆಮ್ಮೆಯಿಂದ ಹೇಳಿದನು ರಾಮಕೃಷ್ಣ.

ವಿದ್ಯಾಸಾಗರ ತಲೆ ಕೆರೆದುಕೊಂಡನು. ಮುಖ ಮಂಕಾಯಿತು. ಎಷ್ಟು ಯೋಚಿಸಿದರೂ ತಿಲಕಾಷ್ಠಮಹಿಷಬಂಧನ ಗ್ರಂಥ ಅವನ ನೆನಪಿಗೆ ಬರಲಿಲ್ಲ. 'ಇದೊಂದು ಹೇಗೆ ನನ್ನ ಕಣ್ಣು ತಪ್ಪಿಸಿಕೊಂಡಿತು' ಎಂದು ಅವನು ಪೇಚಾಡಿಕೊಂಡನು.

"ಮಹಾಪ್ರಭು, ಏಕೋ ನನ್ನ ದೇಹಾರೋಗ್ಯ ಸರಿಯಿಲ್ಲ. ವಾದವನ್ನು ನಾಳೆ ಆರಂಭಿಸಲು ಅಪ್ಪಣೆ ಕೊಡಿ" ಎಂದು ವಿದ್ಯಾಸಾಗರನು ಮಹಾರಾಜನನ್ನು ಬೇಡಿಕೊಂಡನು. "ಆಗಬಹುದು" ರಾಜ ಅಪ್ಪಣೆ ಕೊಟ್ಟನು. ತಕ್ಷಣ ವಿದ್ಯಾಸಾಗರ ಜಾಗ ಖಾಲಿ ಮಾಡಿದನು. ರಾಮಕೃಷ್ಣನೂ ಏನೂ ಮಾತನಾಡದೆ ಮನೆಗೆ ಹೋದನು.

ಮರುದಿನ ಅದೇ ಸಮಯಕ್ಕೆ ಅದೇ ಕಟ್ಟನ್ನು ತೆಗೆದುಕೊಂಡು ರಾಮಕೃಷ್ಣ ಗಂಭೀರವಾಗಿ ಸಭೆಗೆ ಬಂದನು. ಆದರೆ ಬಹಳ ಹೊತ್ತಾದರೂ ವಿದ್ಯಾಸಾಗರ ಬರಲೇ ಇಲ್ಲ. ಅವನನ್ನು ಕರೆತರಲು ಆಳುಗಳು ಹೋದರು. ಆದರೆ ವಿದ್ಯಾಸಾಗರ ರಾತ್ರೋರಾತ್ರಿ ಅಲ್ಲಿಂದ ಪಲಾಯನ ಮಾಡಿರುವ ವಿಷಯ ತಿಳಿಯಿತು.

ಇಡೀ ಸಭೆ ರಾಮಕೃಷ್ಣನಿಗೆ ಜಯಕಾರ ಹಾಕಿತು. "ನಿನ್ನಿಂದ ನನ್ನ ಆಸ್ಥಾನದ ಮರ್ಯಾದೆ ಉಳಿಯಿತು. ನಾನೂ 'ತಿಲಕಾಷ್ಠಮಹಿಷಬಂಧನ' ಎಂಬ ಗ್ರಂಥವನ್ನು ಕೇಳಿಯೇ ಇಲ್ಲ. ಎಲ್ಲಿ ಅದನ್ನು ಕೊಡು ನೋಡೋಣ" ಎಂದು ಕೃಷ್ಣದೇವರಾಯನು ಮೆಚ್ಚುಗೆಯಿಂದ ನುಡಿದನು. ರಾಮಕೃಷ್ಣನು ಕಟ್ಟನ್ನು ಬಿಚ್ಚಿದನು. ಅದರಲ್ಲಿ ಒಂದಷ್ಟು ಕಟ್ಟಿಗೆಗಳನ್ನು ಒಂದು ಹಗ್ಗದಿಂದ ಕಟ್ಟಲಾಗಿತ್ತು. ರಾಜ ಆಶ್ಚರ್ಯದಿಂದ "ಇದೇನಿದು?" ಎಂದನು.

ಆಗ ರಾಮಕೃಷ್ಣನು "ಇದು ಎಳ್ಳಿನ ಕಡ್ಡಿಗಳು, ಅಂದರೆ ತಿಲಕಾಷ್ಠ. ಇದು ಎಮ್ಮೆ ಕಟ್ಟುವ ಹಗ್ಗ. ಅಂದರೆ ಮಹಿಷಬಂಧನ. ಅದೇ 'ತಿಲಕಾಷ್ಠಮಹಿಷಬಂಧನ'. ಇದಾವುದೋ ಮಹಾಗ್ರಂಥವಿರಬೇಕೆಂದು ಹೆದರಿ ಪಾಪ ವಿದ್ಯಾಸಾಗರ ಓಡಿಹೋದನು" ಎಂದನು. ಎಲ್ಲರ ನಗು ಬಹಳ ಹೊತ್ತು ಸಭಾಸ್ಥಾನವನ್ನು ತುಂಬಿತು. ರಾಮಕೃಷ್ಣನ ಬುದ್ಧಿವಂತಿಕೆಯನ್ನು ಮೆಚ್ಚಿದ ಕೃಷ್ಣದೇವರಾಯ ಅವನನ್ನು ಸನ್ಮಾನಿಸಿದನು.

**ವಿದ್ಯೆ ವಿನಯವನ್ನು ಕಲಿಸುತ್ತದೆ. ಬುದ್ಧಿ ವಿವೇಕವನ್ನು ಕಲಿಸುತ್ತದೆ.**

©KTBS Not to be republished

## ಪದಗಳ ಅರ್ಥ

ಸತ್ಕರಿಸು – ಉಪಚರಿಸು; ವಾದ – ಚರ್ಚೆ; ಪೇಚಾಡು – ಪರದಾಡು; ಅಪ್ಪಣೆ – ಒಪ್ಪಿಗೆ; ಪಂಡಿತ –ವಿದ್ವಾಂಸ; ಪೀಠ– ಆಸನ, ಗದ್ದುಗೆ.

## ಟಿಪ್ಪಣಿ

ಪಲಾಯನ – ಯಾರಿಗೂ ತಿಳಿಸದಂತೆ ಹಾಗೂ ಕಾಣದಂತೆ ಆ ಜಾಗ ಬಿಟ್ಟು ಹೋಗುವುದು.
ಪಕ್ಷಪಾತಿ – ಒಬ್ಬರಿಗೊಂದು ಮತ್ತೊಬ್ಬರಿಗೊಂದು ಮಾಡುವವನು, ಭೇದಭಾವ ತೋರುವವನು.
ಮುಖ ಅರಳಿತು – ಮುಖದಲ್ಲಿ ನಗು ತುಂಬಿದ್ದು ಸಂತೋಷ ಎದ್ದು ಕಾಣುವುದು.

## ಅಭ್ಯಾಸ

### ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ

೧. ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದವರು ಯಾರು?

..............................................................................................

೨. ವಿದ್ಯಾಸಾಗರನು ಕೃಷ್ಣದೇವರಾಯನಿಗೆ ಹಾಕಿದ ಸವಾಲು ಯಾವುದು?

..............................................................................................

೩. ವಿದ್ಯಾಸಾಗರನೊಂದಿಗೆ ವಾದ ಮಾಡಲು ಒಪ್ಪಿಕೊಂಡವರು ಯಾರು?

..............................................................................................

೪. ತೆನಾಲಿ ರಾಮಕೃಷ್ಣನು ವಾದಕ್ಕೆ ಯಾವ ಗ್ರಂಥವನ್ನು ಆರಿಸಿಕೊಂಡನು?

..............................................................................................

### ಆ. ಎರಡು/ಮೂರು ವಾಕ್ಯಗಳ ಉತ್ತರ ಬರೆಯಿರಿ

೧. ವಿದ್ಯಾಸಾಗರನು ಕೃಷ್ಣದೇವರಾಯನ ಆಸ್ಥಾನಕ್ಕೆ ಏಕೆ ಬಂದನು?

..............................................................................................

..............................................................................................

..............................................................................................

©KTBS Not to be republished

೨. ವಿದ್ಯಾಸಾಗರನ ಮುಖ ಏಕೆ ಅರಳಿತು?

..........................................................................................

..........................................................................................

..........................................................................................

೩. ತಿಲಕಾಷ್ಠಮಹಿಷಬಂಧನ ಎಂದರೇನು?

..........................................................................................

..........................................................................................

..........................................................................................

## ಇ. ಕೊಟ್ಟಿರುವ ಮಾತನ್ನು ಯಾರು? ಯಾರಿಗೆ ಹೇಳಿದರು?

೧. 'ಈ ವಿಷಯ ಮೊದಲೇ ತಿಳಿದಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ.'

ಯಾರು?: ..........................................................................

ಯಾರಿಗೆ?: ..........................................................................

೨. 'ಯಾವುದನ್ನು ಬೇಕಾದರೂ ಆರಿಸಿಕೊಳ್ಳಿ.'

ಯಾರು?: ..........................................................................

ಯಾರಿಗೆ?: ..........................................................................

೩. 'ಇದು ನಮ್ಮೂರಿನ ದನಕಾಯುವ ಹುಡುಗರಿಗೂ ಗೊತ್ತು.'

ಯಾರು?: ..........................................................................

ಯಾರಿಗೆ?: ..........................................................................

೪. 'ಮಹಾಪ್ರಭು ಏಕೋ ನನ್ನ ದೇಹಾರೋಗ್ಯ ಸರಿಯಿಲ್ಲ.'

ಯಾರು?: ..........................................................................

ಯಾರಿಗೆ?: ..........................................................................

©KTBS Not to be republished




## ಅ. ಮಾದರಿಯಂತೆ ಕೂಡಿಸಿ ರಚಿಸಿ – ಬರೆಯಿರಿ.

**ಮಾದರಿ** : ಎಮ್ಮೆ + ಗಳು – ಎಮ್ಮೆಗಳು

೧. ಕಟ್ಟಿಗೆ + ಗಳು – ..................................................

೨. ಮುಖ + ಗಳು – ..................................................

೩. ಗ್ರಂಥ + ಗಳು – ..........................................................

೪. ಕಣ್ಣು + ಗಳು – ..........................................................

**ಆ. ಈ ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.**

೧. ನಾವು ಶಾಲೆಗೆ ಹೋಗುತ್ತೇನೆ.

..........................................................................

೨. ಶೀಲಾ ಕಥೆ ಬರೆಯುತ್ತಾನೆ.

..........................................................................

೩. ಇಂದು ಮಳೆ ಬರುವ ಸಾಧ್ಯತೆ ಇವೆ.

..........................................................................

೪. ನಮ್ಮ ತರಗತಿಯಲ್ಲಿ ಹುಡುಗ ಇದ್ದಾರೆ.

..........................................................................

೫. ಕಾಡಿನಲ್ಲಿ ಮರಗಳು ಇದೆ.

..........................................................................




©KTBS Not to be republished

**ಅ. ಕವನ ಓದಿ, ಇದಕ್ಕೊಂದು ಹೆಸರು ಸೂಚಿಸಿ.**

....................................................

ಕೋತಿಯೊಂದು ಬಂದಿತು
ಮಡಕೆಯನು ತಂದಿತು॥

ಅಂಗಡಿಗೆ ಹೋಯಿತು
ಬೇಳೆ ಬೆಲ್ಲ ತಂದಿತು॥

ಒಲೆಯ ಮೇಲೆ ಇಟ್ಟಿತು
ಪಾಯಸವನು ಮಾಡಿತು॥

ಸೌಟು ಇಲ್ಲದಾಯಿತು
ಬಾಲ ಹಾಕಿ ತಿರುವಿತು॥

ಬಾಲ ಸುಟ್ಟು ಹೋಯಿತು
ತಾನು ಅಳುತ ಕುಳಿತಿತು ॥

## ಆ. ಸಂಭಾಷಣೆ ಓದಿ, ಇದನ್ನು ಕಥೆಯ ರೂಪದಲ್ಲಿ ಬರೆಯಿರಿ

ಮಂತ್ರಿ : ಸೈನಿಕರೆ, ಸೆರೆಮನೆಯಲ್ಲಿರುವ ಖೈದಿಗಳನ್ನು ನೋಡಲು ಬಂದಿದ್ದೇನೆ.

ಸೈನಿಕ : ಅಪ್ಪಣೆ ಪ್ರಭು, ಇತ್ತ ಬನ್ನಿ. ಪ್ರತಿಯೊಬ್ಬರನ್ನೂ ತೋರಿಸುತ್ತೇನೆ.

ಮಂತ್ರಿ : ಈ ಯುವಕ ಯಾರು?

ಸೈನಿಕ : ನಿನ್ನೆ ತಾನೆ ಬಂದ ಅಪರಾಧಿ, ಪ್ರಭುಗಳೆ.

ಮಂತ್ರಿ : ಅಯ್ಯಾ! ನೀನು ಮಾಡಿದ ಅಪರಾಧ ಏನು?

ಯುವಕ : ಸ್ವಾಮಿ! ನಾನು ಬೀದಿಯಲ್ಲಿ ಬರುವಾಗ ನೆಲದ ಮೇಲೆ ಬಿದ್ದಿದ್ದ ಹಗ್ಗದ ತುಂಡನ್ನು ಕಂಡೆ. ಯಾರಿಗೂ ಅದು ಬೇಕಿಲ್ಲವೆಂದು ತಿಳಿದು ಕೈಗೆತ್ತಿಕೊಂಡು ಮನೆಗೆ ನಡೆದೆ.

ಮಂತ್ರಿ : ಏನಯ್ಯಾ? ಹಗ್ಗದ ತುಂಡನ್ನು ತೆಗೆದುಕೊಂಡಿದ್ದಕ್ಕೆ ಇಂತಹ ಶಿಕ್ಷೆಯೇ?

ಸೈನಿಕ : ಸ್ವಾಮಿ! ಹಗ್ಗದ ತುದಿಯಲ್ಲಿ ಏನಿತ್ತೆಂದು ಅವನನ್ನೇ ಕೇಳಿ.

ಯುವಕ : ನನ್ನ ಗ್ರಹಚಾರ ಸ್ವಾಮಿ. ಹಗ್ಗದ ತುದಿಯಲ್ಲಿ ಹಸುವನ್ನು ಕಟ್ಟಿತ್ತು.

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

©KTBS Not to be republished

## ಇ. ಪತ್ರಿಕೆಗಳಲ್ಲಿ ಬರುವ ಮಕ್ಕಳ ವಿಭಾಗದಿಂದ ಕಥೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಶಿಕ್ಷಕರ ಸಹಾಯದಿಂದ ಓದಿ.




ನೀನು ಮಕ್ಕಳ ನಿಯತಕಾಲಿಕೆಗಳನ್ನು ಓದಿ ಅರ್ಥೈಸಿಕೊಳ್ಳಬಲ್ಲೆಯಲ್ಲವೇ?




# ಪಾಠ – ೩
# ವೀರಮಾತೆ ಜೀಜಾಬಾಯಿ



ಸಮಿತಿ ರಚನೆ –

**ಕಲಿಕೆಗೆ ದಾರಿ:**

ಇವರ ಹೆಸರನ್ನು ಬರೆಯಿರಿ.


















KTBS
Not to be republished

"ಮಾತಾಜಿಯವರಿಗೆ ನನ್ನ ಪ್ರಣಾಮಗಳು" ಚಿಗುರು ಮೀಸೆಯ ವೀರಬಾಲಕ ನಮ್ರತೆಯಿಂದ ನುಡಿದನು. ಹುಸಿನಗೆ ಬೀರುತ್ತಾ ಅವನ ತಾಯಿ "ಬಾ ಕಂದ ಇಲ್ಲಿ ಕುಳಿತುಕೊ". "ಆಗಲಿ ತಾಯಿ" ಎಂದು ಬಾಲಕ ಕುಳಿತುಕೊಂಡನು.

"ಅಮ್ಮಾ ನನ್ನನ್ನು ಕರೆಸಿದ ಕಾರಣವೇನು? ನನ್ನಿಂದ ಏನಾಗಬೇಕು ಕೇಳು ತಾಯಿ?" ಎಂದನು ಬಾಲಕ. "ನಾನು ಕೇಳಿದ್ದನ್ನು ಕೊಡುವೆಯಾ ಮಗನೆ?" ಎಂದು ತಾಯಿ ಅಭಿಮಾನದಿಂದ ನುಡಿದಳು.

"ಆಗಲಿ ಮಾತಾಜಿ... ಭವಾನಿ ತಾಯಿಯ ಮೇಲೆ ಆಣೆ. ನೀನು ಕೇಳಿದ್ದನ್ನು ಕೊಡುವೆ" ಎಂದನು ಮಗ.

ತಾಯಿ ಮನಸ್ಸಿನಲ್ಲೆ ಯೋಚಿಸುತ್ತಾ "ಕುಮಾರ, ಆಡಿದ ಮಾತಿನಂತೆ ನಾನು ಕೇಳಿದ್ದನ್ನು ಕೊಡಬೇಕು" ಎಂದಳು.

"ಕೇಳು ತಾಯಿ ಅಗತ್ಯವಾಗಿ ನೀಡುತ್ತೇನೆ" ಎಂದನು ಮಗ ಸಂತೋಷದಿಂದ. "ನಾನು ಧನ್ಯ ಕಂದಾ, ಈಗ ಹೇಳುವೆನು ಕೇಳು. ಕೊಂಡಾಣದುರ್ಗವು ಮೊಘಲರ ವಶದಲ್ಲಿದೆ. ಅದನ್ನು ನೀನು ಗೆದ್ದು ನನಗೆ ಬಹುಮಾನವಾಗಿ ಕೊಡಬೇಕು" ಎಂದಳು ಹೆಮ್ಮೆಯಿಂದ ಮಗನನ್ನು ನೋಡುತ್ತಾ ತಾಯಿ.




©KTBS Not to be republished

ಈ ರೀತಿ ಸಂಭಾಷಣೆ ನಡೆಸಿದ ತಾಯಿಮಗ ಯಾರು ಗೊತ್ತೇ? ಇವರೇ ಭಾರತದ ಇತಿಹಾಸದಲ್ಲಿ ಶಾಶ್ವತ ಸ್ಥಾನ ಪಡೆದಿರುವ ವೀರಮಾತೆ ಜೀಜಾಬಾಯಿ ಹಾಗೂ ಅವಳ ಪುತ್ರ ಮರಾಠ ಸಾಮ್ರಾಜ್ಯದ ಉನ್ನತಿಗೆ ಕಾರಣನಾದ 'ಛತ್ರಪತಿ ಶಿವಾಜಿ'.

ಜೀಜಾಬಾಯಿ ಕ್ರಿ.ಶ. ೧೫೯೪ರಲ್ಲಿ ಲಖೂಜಿ ಜಾಧವರಾವ್ ಅವರ ಮಗಳಾಗಿ ಜನಿಸಿದಳು. ಕ್ರಿ.ಶ. ೧೬೦೫ರಲ್ಲಿ ಷಹಾಜಿಯನ್ನು ವಿವಾಹವಾದಳು. ಷಹಾಜಿಯು ಬಿಜಾಪುರದ ಆದಿಲ್ ಶಾಹಿಯಲ್ಲಿ ಉದ್ಯೋಗ ಮಾಡುತ್ತಿದ್ದನು. ಕ್ರಿ.ಶ. ೧೬೩೦ರಲ್ಲಿ ಶಿವನೇರಿ ದುರ್ಗದಲ್ಲಿ ಈ ದಂಪತಿಗಳ ಮಗನಾಗಿ ಶಿವಾಜಿಯು ಜನಿಸಿದನು. ಷಹಾಜಿಯು ಮಗ ಶಿವಾಜಿಯನ್ನು ಗುರುವಾದ ದಾದಾಜಿಕೊಂಡದೇವನಲ್ಲಿ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದನು. ಗುರು ದಾದಾಜಿಕೊಂಡದೇವನು ಶಿವಾಜಿಗೆ ಕತ್ತಿವರಸೆ, ಕುದುರೆ ಸವಾರಿ ಮುಂತಾದ ಯುದ್ಧಕಲೆಗಳನ್ನು ಕಲಿಸಿದನು.

ಷಹಾಜಿ ಅನಿವಾರ್ಯವಾಗಿ ತನ್ನಿಂದ ದೂರವಾದಾಗ ಜೀಜಾಬಾಯಿ ಬಹಳ ನೊಂದುಕೊಂಡಳು. ಆದರೂ ಎದೆಗುಂದದೆ ಸ್ವತಂತ್ರವಾಗಿ ಬದುಕಲು ಪ್ರಾರಂಭಿಸಿದಳು.

ಮಗನನ್ನು ಓರ್ವ ವೀರಯೋಧನನ್ನಾಗಿ ಬೆಳೆಸುವ ಹೊಂಗನಸಿನೊಂದಿಗೆ ಪುಣೆಗೆ ಬಂದು ಅವನೊಂದಿಗೆ ನೆಲೆಸಿದಳು. ಜೀಜಾಬಾಯಿ ಚಾಣಾಕ್ಷ ಹೆಣ್ಣುಮಗಳು. ಕೇವಲ ಓರ್ವ ಸಾಮಾನ್ಯ ಮಹಿಳೆಯಂತೆ ಬದುಕಿನ ಆಗುಹೋಗುಗಳನ್ನು ನೆನೆದು ದುಃಖಿಸುವ ಹೆಣ್ಣಾಗಿರಲಿಲ್ಲ. ಅಖಂಡ ಭಾರತದಲ್ಲಿ ಮೊಘಲರ ಆಳ್ವಿಕೆಯನ್ನು ಕೊನೆಗೊಳಿಸಲು ಪಣತೊಟ್ಟಳು. ಭಾರತದಾದ್ಯಂತ ಮರಾಠ ಸಾಮ್ರಾಜ್ಯದ ವಿಜಯ ಪತಾಕೆಯನ್ನು ಹಾರಿಸಬೇಕು ಎಂದು ತೀರ್ಮಾನಿಸಿದಳು. ಪರಕೀಯರ ಗುಲಾಮಗಿರಿಯಿಂದ ಹೊರಬಂದು ಸ್ವತಂತ್ರವಾಗಿ ಬಾಳಬೇಕು ಎಂದು ನಿರ್ಧರಿಸಿದಳು.



ಶಿವಾಜಿಗೆ ಪ್ರತಿನಿತ್ಯ ರಾಮಾಯಣ – ಮಹಾಭಾರತ ಮುಂತಾದ ಪುರಾಣ ಪುಣ್ಯಕಥೆಗಳನ್ನು ಹೇಳುತ್ತಿದ್ದಳು. ನ್ಯಾಯ–ನೀತಿ, ಸ್ತ್ರೀಯರಲ್ಲಿ ಗೌರವ, ಕಷ್ಟಸಹಿಷ್ಣುತೆ ಇತ್ಯಾದಿ ಗುಣಗಳನ್ನು ಚಿಕ್ಕಂದಿನಿಂದಲೇ ಮಗನಲ್ಲಿ ಬೆಳೆಸಿದಳು. ಶಿವಾಜಿಗೆ ವೀರಪುರುಷರ ಕಥೆಗಳನ್ನು ಕೇಳುವ, ಸಾಹಸಿ ಕೆಲಸಗಳನ್ನು ಮಾಡುವ ಆದರ್ಶಗಳನ್ನು ಬಾಲ್ಯದಿಂದಲೇ ಬಿತ್ತಿದಳು. ಹೀಗೆ ಜೀಜಾಬಾಯಿ ಮಗನಲ್ಲಿ ಧೈರ್ಯ, ಸ್ವಾಭಿಮಾನ, ಸಾಹಸ, ಸೇವೆ, ತ್ಯಾಗ ಮುಂತಾದ ಮೌಲ್ಯಗಳನ್ನು ಬಾಲ್ಯದಲ್ಲಿಯೇ ತುಂಬಿದಳು. ಅವನನ್ನು ಉತ್ತಮ ದೇಶಭಕ್ತನನ್ನಾಗಿ ಬೆಳೆಸಿದಳು. ಅಖಂಡ ಮರಾಠ ಸಾಮ್ರಾಜ್ಯದ ಉನ್ನತಿಗೆ ದಾರಿದೀಪವಾದಳು.

©KTBS Not to be republished

ಮುಂದೆ ಶಿವಾಜಿಯು ಪ್ರಬಲ ಮೊಘಲ ಸಾಮ್ರಾಟ ಔರಂಗಜೇಬನ ವಿರುದ್ಧ ಹೋರಾಡಿ ಜಯಗಳಿಸಿದನು. ಜೀಜಾಬಾಯಿ ಮಗನ ವಿಜಯೋತ್ಸವಕ್ಕೆ ಬಹಳ ಸಂತೋಷಪಟ್ಟಳು. ರಾಯಗಡದಲ್ಲಿ ಶಿವಾಜಿಯ ಪಟ್ಟಾಭಿಷೇಕವು ಅತ್ಯಂತ ವೈಭವದಿಂದ ನಡೆಯಿತು. ಸ್ವಾಮಿ ರಾಮದಾಸರು ಬಂದು ತಮ್ಮ ಹಸ್ತದಿಂದ ಶಿವಾಜಿಗೆ ಮುಕುಟ ಧಾರಣೆ ಮಾಡಿದರು. ಜೀಜಾಬಾಯಿ ಶಿವಾಜಿಯು ಬಾಲ್ಯದಲ್ಲಿದ್ದಾಗ ತಾನು ಕಂಡ ಕನಸು ನನಸಾಯಿತು ಎಂದು ಖುಷಿಪಟ್ಟು ಶಿವಾಜಿಯನ್ನು ಆಶೀರ್ವದಿಸಿದಳು. ಅಂದು ಅವಳೂ ಸಹ ರಾಜಮಾತೆ ಎನಿಸಿಕೊಂಡಳು. ಈ ಸಂತೋಷದ ದಿನಗಳನ್ನು ಅನುಭವಿಸಲು ಹೆಚ್ಚು ಅವಕಾಶ ಜೀಜಾಬಾಯಿಗೆ ಲಭಿಸಲಿಲ್ಲ. ಶಿವಾಜಿ ಗದ್ದಿಗೆಯನ್ನೇರಿದ ಕೆಲವೇ ದಿನಗಳಲ್ಲಿ ಹಾಸಿಗೆ ಹಿಡಿದಳು.

ಸುಮಾರು ಎಂಬತ್ತು ವರ್ಷಗಳ ಕಾಲ ಜೀವಿಸಿದ್ದ ಜೀಜಾಬಾಯಿ ಮರಾಠರ ಅಭ್ಯುದಯ ಕಂಡಳು. ಅನಂತರ ರಾಯಗಡದ ಬಳಿಯಿರುವ ಪಾಚಾಡ ಎಂಬ ಹಳ್ಳಿಯಲ್ಲಿ ಕ್ರಿ.ಶ. ೧೬೭೪ರಲ್ಲಿ ನಿಧನ ಹೊಂದಿದಳು.

| |
|---|
| ಮನೆಯೇ ಮೊದಲ ಪಾಠಶಾಲೆ, ಜನನಿ ತಾನೇ ಮೊದಲ ಗುರುವು. ಜನನಿಯಿಂದ ಪಾಠ ಕಲಿತ ಜನರೇ ಧನ್ಯರು. |

## ಪದಗಳ ಅರ್ಥ

ಪ್ರಣಾಮ – ನಮಸ್ಕಾರ, ವಂದನೆ; ನಮ್ರತೆ – ವಿನಯದಿಂದ ಕೂಡಿದ; ಗದ್ದಿಗೆ – ಪೀಠ; ಪ್ರಾರಂಭ – ಮೊದಲು, ಆರಂಭ; ಅಂತಿಮ – ಕೊನೆ; ಶಾಶ್ವತ – ನಾಶ ಹೊಂದದ; ಸ್ವಾಭಿಮಾನ – ಆತ್ಮಗೌರವ, ತನ್ನ ಬಗೆಗೆ ಇರುವ ಅಭಿಮಾನ; ಉದ್ಯೋಗ – ವೃತ್ತಿ; ಉನ್ನತಿ – ಹಿರಿಮೆ, ಏಳಿಗೆ; ಎದೆಗುಂದದೆ – ಭಯವಿಲ್ಲದೆ, ಅಂಜದೆ, ಅಳುಕಿಲ್ಲದೆ, ತಳಮಳಗೊಳ್ಳದೆ; ನಿರ್ಧಾರ – ನಿಶ್ಚಯ, ತೀರ್ಮಾನ; ಹೊಂಗನಸು – ಸುಂದರ ಸ್ವಪ್ನ, ಹಿತಕರವಾದ ಕನಸು; ಚಾಣಾಕ್ಷ – ಸೂಕ್ಷ್ಮದೃಷ್ಟಿಯುಳ್ಳವನು, ವ್ಯವಹಾರ ಚತುರ; ಪಣ – ಪ್ರತಿಜ್ಞೆ; ಪತಾಕೆ – ಧ್ವಜ, ಬಾವುಟ; ಪರಕೀಯ – ಬೇರೆಯ, ಅನ್ಯ; ಗುಲಾಮಗಿರಿ – ಅಡಿಯಾಳುತನ, ದಾಸ್ಯ, ಪರಾಧೀನತೆ; ವೈಭವ – ಆಡಂಬರ; ಮುಕುಟ – ಕಿರೀಟ; ಅಭ್ಯುದಯ – ಅಭಿವೃದ್ಧಿ.

## ಟಿಪ್ಪಣಿ

ವಿಜಯೋತ್ಸವ – ಗೆಲುವು ಸಿಕ್ಕಿದಾಗ ಆಚರಿಸುವ ಸಂತೋಷ ಸಮಾರಂಭ.

ಸಾಮ್ರಾಜ್ಯ – ಸಾರ್ವಭೌಮ ಅಧಿಕಾರವುಳ್ಳ ರಾಷ್ಟ್ರ, ಚಕ್ರಾಧಿಪತ್ಯ.

ಪಟ್ಟಾಭಿಷೇಕ – (ರಾಜನಾಗುವವನಿಗೆ) ವಿಧ್ಯುಕ್ತವಾಗಿ ಪವಿತ್ರಜಲಗಳಿಂದ ಅಭಿಷೇಕ ಮಾಡುವಿಕೆ. ಪಟ್ಟಕಟ್ಟುವಿಕೆ

©KTBS Not to be republished

## ಅಭ್ಯಾಸ

**ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ತಾಯಿಗೆ ಮಗನು ಏನೆಂದು ಕೇಳಿದನು?

........................................................................................

೨. ಕೊಂಡಾಣದುರ್ಗ ಯಾರ ವಶದಲ್ಲಿತ್ತು?

........................................................................................

೩. ಜೀಜಾಬಾಯಿಯ ತಂದೆ ಹೆಸರೇನು?

..........................................................................................................

೪. ಶಿವಾಜಿಯ ಗುರುವಿನ ಹೆಸರೇನು?

..........................................................................................................

**ಆ. ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.**

(ಮಹಾಭಾರತ, ಜೀಜಾಬಾಯಿ, ರಾಯಗಡ, ಷಹಾಜಿ, ರಾಮಾಯಣ)

೧. ಛತ್ರಪತಿ ಶಿವಾಜಿ ತಾಯಿಯ ಹೆಸರು ..............................................

೨. ಜೀಜಾಬಾಯಿ ...................................... ಎಂಬುವವನನ್ನು ವಿವಾಹವಾದಳು.

೩. ಜೀಜಾಬಾಯಿ ಶಿವಾಜಿಗೆ ಪ್ರತಿನಿತ್ಯ ......................... ಮತ್ತು ......................... ಕಥೆಗಳನ್ನು ಹೇಳುತ್ತಿದ್ದಳು.

೪. ಶಿವಾಜಿ ಪಟ್ಟಾಭಿಷೇಕವು ................................. ದಲ್ಲಿ ನಡೆಯಿತು.

**ಇ. ಕೊಟ್ಟಿರುವ ಪದ ಗಮನಿಸಿ ವಿರುದ್ಧಾರ್ಥಕ ಪದ ಬರೆಯಿರಿ.**

ಧೈರ್ಯ × .......................................

ಜಯ × .......................................

ಗೌರವ × .......................................

ನೀತಿ × .......................................

**ಈ. ಮಾದರಿಯಂತೆ ಕೊಟ್ಟಿರುವ ಪದ ಗಮನಿಸಿ ಎರಡೆರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಸಾಗರ : ಸಮುದ್ರ, ಕಡಲು

ಪುತ್ರ : ...................................... ......................................

ರಾಜ : ...................................... ......................................

ಯುದ್ಧ : ...................................... ......................................

©KTBS Not to be republished

## ಉ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ಬರೆಯಿರಿ.

ಬಹುಮಾನ : ..........................................................................................

ಉದ್ಯೋಗ : ..........................................................................................

ಗುಲಾಮಗಿರಿ: ..........................................................................................

ವೈಭವ : ..........................................................................................

ಆಶೀರ್ವಾದ: ..........................................................................................

## ಊ. ಕೊಟ್ಟಿರುವ ಮಾತನ್ನು ಯಾರು? ಯಾರಿಗೆ ಹೇಳಿದರು?

೧. 'ಮಾತಾಜಿಯವರಿಗೆ ನನ್ನ ಪ್ರಣಾಮಗಳು'

ಯಾರು? ..........................................................................................

ಯಾರಿಗೆ ? ..........................................................................................

೨. 'ನೀನು ಗೆದ್ದು ನನಗೆ ಬಹುಮಾನವಾಗಿ ಕೊಡಬೇಕು'.

ಯಾರು? ..........................................................................................

ಯಾರಿಗೆ ? ..........................................................................................

## ಋ. ಪದಗಳನ್ನು ಸರಿ ಜೋಡಿಸಿ ವಾಕ್ಯ ರಚಿಸಿ ಬರೆಯಿರಿ.

೧. ತಾಯಿ ನೀಡುತ್ತೇನೆ ಕೇಳು ಅಗತ್ಯವಾಗಿ.

..........................................................................................

೨. ಚಾಣಾಕ್ಷ ಜೀಜಾಬಾಯಿ ಹೆಣ್ಣುಮಗಳು.

..........................................................................................

೩. ಪಟ್ಟಾಭಿಷೇಕವು ಅತಿ ಶಿವಾಜಿಯ ನಡೆಯಿತು ವೈಭವದಿಂದ.

..........................................................................................

©KTBS Not to be republished




## ಅ. ಮಾದರಿಯಲ್ಲಿ ಸೂಚಿಸಿರುವಂತೆ ಸೂಕ್ತ ಪದ ರಚಿಸಿ ಬರೆಯಿರಿ.

೧. **ಮಾದರಿ :** ಬರು + ಅಂತೆ = ಬರುವಂತೆ

೧. ಹೋಗು + ಅಂತೆ = ........................................

೨. ನೋಡು + ಅಂತೆ = .........................................

೩. ಮಗು + ಅಂತೆ = ........................................

೨. **ಮಾದರಿ :** ಹುಡುಗ + ಆಟ = ಹುಡುಗಾಟ

೧. ಬಂದು + ಆಗ = ....................................

೨. ಕಾಡು + ಆನೆ = ....................................

೩. ಬಾಯಿ + ಆರಿಕೆ = ....................................

## ಆ. ಕೊಟ್ಟಿರುವ ಪದಗಳನ್ನು ಗಮನಿಸಿ ಓದಿ.

ಪದೇ – ಪದೇ

ಸಣ್ಣ – ಸಣ್ಣ

ಓಡಿ – ಓಡಿ

## ಇ. ಆವರಣದಲ್ಲಿರುವ ಪದಗಳನ್ನು ಗಮನಿಸಿ. ಅವುಗಳ ಸಹಾಯದಿಂದ ಗಾದೆಗಳನ್ನು ಪೂರ್ಣ ಮಾಡಿ.

(ಪರರಿಗೆ ಉಪಕಾರಿ, ಬಾಳಿಯಾರು, ಮೌನ ಬಂಗಾರ, ಬಾಯಿ ಮೊಸರು)

೧. ತಾಳಿದವರು ............................................................

೨. ಕೈ ಕೆಸರಾದರೆ ............................................................

೩. ಮಾತು ಬೆಳ್ಳಿ ............................................................

೪. ಮನೆಗೆ ಮಾರಿ ...........................................................

©KTBS Not to be republished

## ಬಳಕೆ ಚಟುವಟಿಕೆ

೧. ನೀನು ಜೀಜಾಬಾಯಿಯ ಯಾವ ಗುಣವನ್ನು ಇಷ್ಟಪಡುವೆ? ಏಕೆ?

..........................................................................................................

..........................................................................................................

..........................................................................................................

..........................................................................................................

೨. ನಿನಗೆ ಗೊತ್ತಿರುವ ವೀರಮಹಿಳೆಯರ ಹೆಸರುಗಳನ್ನು ಸಂಗ್ರಹಿಸಿ, ಪಟ್ಟಿ ಮಾಡಿ.

..........................................................................................................

..........................................................................................................

..........................................................................................................

..........................................................................................................

©KTBS Not to be republished

೩. ನಿನ್ನ ಮತ್ತು ತಾಯಿಯ ನಡುವೆ ಬೆಳಗ್ಗೆ ಶಾಲೆಗೆ ಹೊರಡುವ ಸಮಯದಲ್ಲಿ ನಡೆಯುವ ಸಂಭಾಷಣೆಯನ್ನು ಊಹಿಸಿ ಬರೆದು, ಸೂಕ್ತ ಲೇಖನ ಚಿಹ್ನೆಗಳನ್ನು ಹಾಕು.

ಮಗ/ಳು : ..........................................................................................

..........................................................................................

..........................................................................................

ಅಮ್ಮ : ..........................................................................................

..........................................................................................

..........................................................................................

ಮಗ/ಳು : ..........................................................................................

..........................................................................................

..........................................................................................

ಅಮ್ಮ : ..............................................................................................
..............................................................................................
..............................................................................................

ಮಗ/ಳು : ..............................................................................................
..............................................................................................
..............................................................................................

ಅಮ್ಮ : ..............................................................................................
..............................................................................................
..............................................................................................

೪. ಈ ಗದ್ಯದಲ್ಲಿ ಬರುವ ಶಿವಾಜಿ ಮತ್ತು ಜೀಜಾಬಾಯಿ ಅವರ ಸಂಭಾಷಣೆಗಳನ್ನು ತರಗತಿಯಲ್ಲಿ ಗೆಳೆಯರೊಂದಿಗೆ ಸೇರಿ ಅಭಿನಯದ ಮೂಲಕ ಪ್ರದರ್ಶಿಸಿ.

©KTBS not to be republished




ನೀನೀಗ ಸೂಚನೆಗಳನ್ನು ಅನುಸರಿಸಿ ಲೇಖನ ಚಿಹ್ನೆ ಸಹಿತ ಪರಿಚ್ಛೇದಗಳನ್ನು ಬರೆಯುವ ಸಾಮರ್ಥ್ಯವನ್ನು ಪಡೆದಿರುವಿಯಲ್ಲವೇ?

# ಪಾಠ – ೪
# ಮಳೆ (ಪದ್ಯ)

R5I5P9

**ಕಲಿಕೆಗೆ ದಾರಿ:**
ಕಾಮನಬಿಲ್ಲು ಎಲ್ಲಿ? ಯಾವಾಗ? ಹೇಗೆ ಕಾಣಿಸುತ್ತದೆ ಎಂದು ಶಿಕ್ಷಕರ ಮಾರ್ಗದರ್ಶನದಲ್ಲಿ ತರಗತಿಯಲ್ಲಿ ಚರ್ಚಿಸಿ.


ಬಿಸಿಲ ಝಳಕೆ ಕಡಲ ನೀರು
ಆವಿಯಾಯಿತು ।
ಆವಿಯಾಗಿ ನೆಲದ ಕಡೆಗೆ
ಬೀಸಿ ಬಂದಿತು ॥೧॥

ನೆಲದ ಮೇಲೆ ಗುಡ್ಡಬೆಟ್ಟ
ಅಡ್ಡವಾಯಿತು ।
ತಡೆದು ನಿಂತ ಮೋಡವೆಲ್ಲ
ಮೇಲಕೇರಿತು ॥೨॥

ಘಳಿಗೆಯೊಳಗೆ ಬಾನು ತುಂಬ
ಮೋಡ ಕವಿಯಿತು ।
ಮಿಂಚು ಮಿಂಚಿ ಜಗವು ಬೆಳಗಿ
ಗುಡುಗು ಗುಡುಗಿತು ॥೩॥

ಮೋಡ ಮೇಲಕೇರಿದಾಗ
ತಂಪು ತಗುಲಿತು ।
ಆವಿ ತಣಿದು ಭಾರವಾಗಿ
ಕುಸಿಯತೊಡಗಿತು ॥೪॥

©KTBS Not to be republished



ಮುತ್ತಿನಂಥ ಮಳೆಯ ನೀರು
ಕೆಳಗೆ ಸುರಿಯಿತು ।
ಕೆರೆಯು ತೊರೆಯು ಹಳ್ಳ ಹೊಳೆಯು
ತುಂಬಿ ಹರಿಯಿತು ॥೫॥


– ಪಳಕಳ ಸೀತಾರಾಮ ಭಟ್ಟ

ಅಂತರ್ಜಲ ಸಂರಕ್ಷಿಸು – ಜೀವಕುಲ ಉಳಿಸು



## ಪದಗಳ ಅರ್ಥ


ಕಡಲು–ಸಮುದ್ರ ; ಅಡ್ಡ–ತಡೆ; ಬೆಳಗು – ಪ್ರಕಾಶಿಸು; ಕವಿಯಿತು – ಆವರಿಸಿತು; ನೆಲ – ಭೂಮಿ; ಜಗ – ಲೋಕ; ಸುರಿ – ಕೆಳಕ್ಕೆ ಬೀಳು, ಧಾರೆಯಾಗಿ ಬೀಳು; ತಣಿದು – ತಂಪಾಗಿ.



## ಟಿಪ್ಪಣಿ

ಮಿಂಚು : ಗುಡುಗಿಗಿಂತ ಮುಂಚೆ ಆಕಾಶದಲ್ಲಿ ಕಂಡುಬರುವ ಬೆಳಕಿನ ಬಳ್ಳಿ.
ಘಳಿಗೆ : ೨೪ ನಿಮಿಷಗಳ ಅವಧಿ.

©KTBS Not to be republished



## ಅಭ್ಯಾಸ

### ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಬಿಸಿಲ ಝಳಕೆ ನೀರು ಏನಾಯಿತು?

........................................................................................................

೨. ಮಳೆ ಸುರಿದಿದ್ದರಿಂದ ಏನೇನು ತುಂಬಿ ಹರಿಯಿತು?

........................................................................................................

೩. ಮೋಡ ಯಾವಾಗ ಭಾರವಾಯಿತು?

........................................................................................................

## ಆ. ಕೊಟ್ಟಿರುವ ಪದಗಳಲ್ಲಿ ಸರಿಯಾದುದನ್ನು ಆಯ್ದು ಬಿಟ್ಟ ಸ್ಥಳದಲ್ಲಿ ಬರೆಯಿರಿ.

(ತಂಪು, ಮಳೆಯ, ಗುಡ್ಡಬೆಟ್ಟ, ಮೋಡ, ಗುಡುಗು)

೧. ಮುತ್ತಿನಂಥ ...................................... ನೀರು ಕೆಳಗೆ ಸುರಿಯಿತು.

೨. ನೆಲದ ಮೇಲೆ ...................................... ಅಡ್ಡವಾಯಿತು.

೩. ಘಳಿಗೆಯೊಳಗೆ ಬಾನು ತುಂಬ ................................ ಕವಿಯಿತು.

೪. ಮೋಡ ಮೇಲಕೇರಿದಾಗ ................................ ತಗುಲಿತು.

## ಇ. ಪದ್ಯದಲ್ಲಿ ಬಿಟ್ಟಿರುವ ಸಾಲುಗಳನ್ನು ಬರೆಯಿರಿ.

ನೆಲದ ಮೇಲೆ ಗುಡ್ಡ ಬೆಟ್ಟ

..................................................

.................................. ಮೋಡವೆಲ್ಲ

ಮೇಲಕೇರಿತು.

## ಈ. ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ.

©KTBS Not to be republished

೧. ಕೆರೆ, ಕಟ್ಟೆ, ಸಮುದ್ರ, ಸೂರ್ಯ : ................................................................

೨. ಮಿಂಚು, ಭೂಮಿ, ಮಳೆ, ಗುಡುಗು : ................................................................

೩. ಸರೋವರ, ಪರ್ವತ, ಬೆಟ್ಟ, ಗುಡ್ಡ : ................................................................

೪. ನೊಗ, ಕುಂಟೆ, ನೇಗಿಲು, ಮಂಚ : ................................................................

## ಉ. ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

೧. ಕಾಡು : ..................... ......................... ........................

೨. ಸೂರ್ಯ : ..................... ......................... ........................

೩. ಭೂಮಿ : ..................... ......................... ........................




## ಅ. ಅಕ್ಷರ ಬಳಸಿ ಪದ ರಚಿಸು, ತಿರುಗಿಸಿ ಓದಿ ಆನಂದಿಸಿ.

ಮಾದರಿ : ವಿ ಕ ಕ ಟ ವಿ – ವಿಕಟ ಕವಿ

೧. ಕಕನ ; ..................................................

೨. ಮನನ; ..................................................

೩. ರಸುರಸುರ; ..................................................

೪. ಜೀವವನನ; ..................................................

೫. ದ್ರಾಮನಸಿಮಸಿದ್ರಾ; ..................................................

## ಆ. ಸೂಚನೆಗಳನ್ನು ಅರ್ಥೈಸಿಕೊಂಡು ಪದಬಂಧ ಪೂರ್ಣಗೊಳಿಸಿ. ಪದಗಳನ್ನು ಓದಿ

| | | | | | | | | | | |
|---|---|---|---|---|---|---|---|---|---|---|
| ೧ ಘ | | | | | ೨ ಜ | | ತ್ತು | | ೩ | ಟ್ಟೆ |
| | | | | ೪ ನೆ | | | | | | |
| | ೫ ಇ | | | | | | ೬ | | ಲು | |
| ೭ ಮ | | | ೮ ಮು | | | | | | | |
| | | ೯ ಹೊ | | | | | | | | |

©KTBS
Not to be republished

### ಎಡದಿಂದ ಬಲಕ್ಕೆ

೧. ೨೪ ನಿಮಿಷಗಳನ್ನು ಹೀಗೆ ಹೇಳುತ್ತಾರೆ. (೩ ಅಕ್ಷರ)

೨. ಜೀವ ರಾಶಿ ನೆಲೆಸಿರುವ ಪ್ರಪಂಚ. (೩ ಅಕ್ಷರ)

೩. ಕೆರೆ ಜೊತೆಯಲ್ಲಿರುವ ಜೋಡಿ ಪದ. (೨ ಅಕ್ಷರ)

೪. ನಾವು ನಿಂತಿರುವ ಸ್ಥಳ. (೨ ಅಕ್ಷರ)

೬. ಬೇಸಿಗೆ ಕಾಲದ ಪ್ರಭಾವವಿದು. (೩ ಅಕ್ಷರ)

೭. ಮೋಡ ಕರಗಿ ಬೀಳುವುದು. (೨ ಅಕ್ಷರ)

೮. ಮೇಲೆ ನೋಡಿದಾಗ ಕಾಣುವುದು. (೩ ಅಕ್ಷರ)

೯. ಈ ಸಮಯ ಮುತ್ತಿನಂಥದು. (೨ ಅಕ್ಷರ)

**ಮೇಲಿನಿಂದ ಕೆಳಕ್ಕೆ**

೧. ಗಟ್ಟಿಯಾದ ಪದಾರ್ಥ ಇದು (೨ ಅಕ್ಷರ)
೨. ನೀರಿಗೆ ಮತ್ತೊಂದು ಹೆಸರು. (೨ ಅಕ್ಷರ)
೩. ಇದರೊಳಗಿರುವುದು ಉಪ್ಪಿನ ನೀರು. (೩ ಅಕ್ಷರ)
೪. ಭೂಮಿಗೆ ಇರುವ ಇನ್ನೊಂದು ಹೆಸರು. (೨ ಅಕ್ಷರ)
೫. ಮಲ್ಲಿಗೆಯ ಬಣ್ಣ. (೨ ಅಕ್ಷರ)
೬. ವಾಸ ಮಾಡಲು ಇದು ಬೇಕು. (೨ ಅಕ್ಷರ)
೭. ಕಪ್ಪೆ ಚಿಪ್ಪಿನಲ್ಲಿರುವುದು. (೨ ಅಕ್ಷರ)

**ಇ. ಮಾದರಿಯಂತೆ ಪ್ರಾಸ ಪದಗಳನ್ನು ಬರೆಯಿರಿ.**

ಮಾದರಿ : ಸುರಿಯಿತು – ಹರಿಯಿತು

ತಗುಲಿತು ................................

ಕವಿಯಿತು ................................

ಅಡ್ಡವಾಯಿತು ................................

**ಈ. ಮಾದರಿಯಂತೆ ಜೋಡುನುಡಿಗಳನ್ನು ಬರೆಯಿರಿ.**

©KTBS Not to be republished

ಮಾದರಿ : ಬೆಟ್ಟ – ಬೆಟ್ಟಗುಡ್ಡ

ಕೆರೆ ......................................


ಗುಡುಗು ......................................

ಕಸ ......................................

ಮುತ್ತು ......................................




**ಅ. ಚಿತ್ರ ಗಮನಿಸು, ಕೊಟ್ಟಿರುವ ಪದ ಬಳಸಿ ಕವನ ರಚಿಸಿ:**



(ಕವಿಯಿತು, ಮಳೆ, ಇಳೆಗೆ, ಹೊಳೆ, ಬೆಳೆಯು,
ಮೋಡ, ಬೆಳೆಯಿತು, ಬಂದಿತು, ಇಳಿಯಿತು,
ತುಂಬಿತು)

..........................................................................................................

..........................................................................................................

..............................................................................................................

..............................................................................................................

..............................................................................................................

..............................................................................................................

## ಆ. ಕಾಲದ ಬಗ್ಗೆ ಓದಿ ಆನಂದಿಸಿ.

ಬಂತಪ್ಪ ಬಂತು ಮಳೆಗಾಲ
ಬೀಜವ ಬಿತ್ತುವ ಈ ಕಾಲ
ಭೂಮಿ ಹಸಿರಾಗುವ ಈ ಕಾಲ
ಬೆಳೆಯನು ಬೆಳೆಯುವ ಈ ಕಾಲ ॥

ಬಂತಪ್ಪ ಬಂತು ಚಳಿಗಾಲ
ಎಲೆಗಳು ಉದುರುವ ಈ ಕಾಲ
ಗಡಗಡ ನಡುಗುವ ಈ ಕಾಲ
ಕಂಬಳಿ ಹೊದೆಯುವ ಈ ಕಾಲ ॥

ಬಂತಪ್ಪ ಬಂತು ಬೇಸಿಗೆ ಕಾಲ
ನೀರನು ಕುಡಿಯುವ ಈ ಕಾಲ
ಮಾವು ಚಿಗುರುವ ಈ ಕಾಲ
ಕೋಗಿಲೆ ಕೂಗುವ ಈ ಕಾಲ ॥

©KTBS Not to be republished

## ಇ. ಯೋಚಿಸಿ ಬರೆಯಿರಿ.

೧. ಮಳೆ ಹೆಚ್ಚಾಗುವುದರಿಂದ ಆಗುವ ಪರಿಣಾಮಗಳಾವುವು?

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

೨. ಬೇಸಿಗೆಯಲ್ಲಿ ಸಾಮಾನ್ಯವಾಗಿ ಗಿಡಮರಗಳು ಒಣಗುತ್ತವೆ. ಕಾರಣವೇನು?

........................................................................................................

........................................................................................................

........................................................................................................

........................................................................................................

........................................................................................................

........................................................................................................

೩. ಮಳೆ ಬರುವ ಮುನ್ನ ಆಕಾಶದಲ್ಲಿ ಉಂಟಾಗುವ ಬದಲಾವಣೆಗಳನ್ನು ಗಮನಿಸಿ ಬರೆ.

........................................................................................................

........................................................................................................

........................................................................................................

........................................................................................................

........................................................................................................

........................................................................................................

೪. ಮಳೆಯೇ ಬರದಿದ್ದರೆ ಏನಾಗುತ್ತಿತ್ತು? ಯೋಚಿಸಿ ಬರೆಯಿರಿ.

........................................................................................................

........................................................................................................

........................................................................................................

........................................................................................................

........................................................................................................

........................................................................................................

©KTBS Not to be republished




ನೀನೀಗ ಪದ್ಯವನ್ನು ಓದಿದ ಅನಂತರ ಅದರಲ್ಲಿನ ವಿಚಾರ ಸರಣಿ ಮತ್ತು ಘಟನಾವಳಿಗಳಿಗೆ ಇರುವ ಸರಳ ಕಾರ್ಯ ಕಾರಣ ಸಂಬಂಧಗಳನ್ನು ಗುರುತಿಸಿ ಹೇಳಬಲ್ಲೆಯಲ್ಲವೆ?

## ಪಾಠ – ೫

# ಅಜ್ಜಿಯ ತೋಟದಲ್ಲಿ ಒಂದು ದಿನ

Z9R9H2

ಸಮಿತಿ ರಚನೆ –

**ಕಲಿಕೆಗೆ ದಾರಿ:**

ಈ ಬೆಳೆಗಳ ಹೆಸರೇನೆಂದು ನಿಮಗೆ ಗೊತ್ತೆ? ಗುರುತಿಸಿ ಹೇಳಿ.



ಮಲೆನಾಡ ತಪ್ಪಲಿನಲ್ಲಿರುವ ಒಂದು ಊರು ಕಣಬೂರು. ಅಲ್ಲೊಂದು ಹಿರಿಯ ಪ್ರಾಥಮಿಕ ಶಾಲೆ. ಆ ಶಾಲೆಯ ಮಕ್ಕಳು ಕಿಶೋರನ ಅಜ್ಜಿಯ ತೋಟಕ್ಕೆ ಗುರುಗಳೊಂದಿಗೆ ಹೊರ ಸಂಚಾರ ಹೊರಟರು. ಕಿಶೋರನ ಅಜ್ಜಿಯ ಮನೆ ಬೆಟ್ಟದ ತಪ್ಪಲಿನಲ್ಲಿದೆ. ಮನೆಯ ಹಿಂದಿನ ಗುಡ್ಡದಲ್ಲಿ ಗೇರು ಮರಗಳಿವೆ. ಅಡಿಕೆ ತೋಟ ದಾಟಿ ಮುಂದೆ ಹೋದರೆ ಭತ್ತದ ಗದ್ದೆಗಳಿವೆ. ಮಕ್ಕಳೆಲ್ಲರೂ ಗದ್ದೆಯ ಹತ್ತಿರ ಬಂದು ತಲುಪಿದರು.

"ಇದು ಯಾವ ಬೆಳೆ?" ಎಂದು ಪೀಟರ್ ಪ್ರಶ್ನಿಸಿದ. "ಇದು ಭತ್ತದ ಬೆಳೆ" ಎಂದರು ಗುರುಗಳು. "ಓ ಇದೇನಾ! ಭತ್ತದ ಪೈರು?" ತೆನೆಗಳನ್ನು ಕೈಯಿಂದ ಮುಟ್ಟಿ ಪ್ರಶ್ನಿಸಿದ ಪೀಟರ್. ಒಂದು ಭತ್ತದ ತೆನೆಯನ್ನು ಕಿತ್ತುಕೊಟ್ಟು "ತಗೋ ಇದನ್ನು ಬಿಡಿಸಿನೋಡು" ಎಂದರು ಗುರುಗಳು. ಶೀಲಾ ತಾನು ಒಂದು ತೆನೆ ಕೀಳಲು ಬಾಗಿದಾಗ ಒಂದು ಕಪ್ಪೆ ಚಂಗನೆ ಕುಪ್ಪಳಿಸಿತು. ಸರಸರ ಒಂದು ಹಾವು ಹತ್ತಿರದಲ್ಲೆ ಸರಿದು ಹೋಯಿತು. ಮಕ್ಕಳು ಭಯದಿಂದ ಹಿಂದೆ ನೆಗೆದರು. "ಹೆದರಬೇಡಿ, ಅವು ನಮಗೆ ಏನು ಮಾಡುವುದಿಲ್ಲ. ಹಾವು, ಕಪ್ಪೆ, ಕೀಟ, ಹಕ್ಕಿ, ಮೊಲ, ಹಂದಿ, ಮುಂಗುಸಿ ಮುಂತಾದ ಪ್ರಾಣಿಗಳು ಸಾಮಾನ್ಯವಾಗಿ ತೋಟದ ಸುತ್ತಮುತ್ತ ಇರುತ್ತವೆ" ಎಂದರು ಗುರುಗಳು.

© KTBS Not to be republished

ಮಕ್ಕಳು ಮಾತನಾಡುತ್ತಾ ಗದ್ದೆಯ ಬದುವಿನಲ್ಲಿ ನಡೆದು ತೋಡು ದಾಟಿ ಅಡಿಕೆ ತೋಟಕ್ಕೆ ಬಂದರು. ತೋಟದ ನಡುವೆ ಬಿದ್ದಿದ್ದ ಒಂದು ಹಣ್ಣನ್ನು ಹೆಕ್ಕಿದ ಮೇರಿ "ಓ! ಇಲ್ಲಿ ನೋಡಿ ಸೌತೆ ಕಾಯಿ!" ಎಂದಳು. "ಅಲ್ಲಲ್ಲ! ಅದು ಹೀರೆಕಾಯಿ" ಎಂದನು ರಫೀಕ್. "ಎರಡೂ ಅಲ್ಲ. ಅದು ಕೊಕೊ ಹಣ್ಣು. ಇದನ್ನು ಚಾಕಲೇಟು ತಯಾರಿಸಲು ಬಳಸುತ್ತಾರೆ. ಯಾವುದೋ ಪ್ರಾಣಿ ಅದನ್ನು ಕಿತ್ತು ಹಾಕಿದೆ. ಬಹುಶಃ ಅಳಿಲೇ ಇರಬೇಕು" ಎಂದರು ಗುರುಗಳು.


©KTBS Not to be republished

ಅಷ್ಟರಲ್ಲಿ ಅಜ್ಜಿ ತೋಟದಲ್ಲಿ ಏನೋ ಮಾಡುತ್ತಿರುವುದನ್ನು ಕಂಡ ಮಕ್ಕಳು ಅಲ್ಲಿಗೆ ಓಡಿದರು. "ನಿಧಾನವಾಗಿ ಬನ್ನಿ. ಮುಳ್ಳುಗಳು ಇರಬಹುದು" ಎಂದು ಎಚ್ಚರಿಸಿದರು ಅಜ್ಜಿ. "ಇದೇನು? ಇಷ್ಟೊಂದು ಗುಂಡಿ ತೋಡಿದ್ದೀರಿ?" ಎಂದು ಮಹೇಶ ಪ್ರಶ್ನಿಸಿದನು. "ನೀವೆಲ್ಲಾ ನಿಮ್ಮ ಕೈಯಾರೆ ಒಂದೊಂದು ಹಣ್ಣಿನ ಗಿಡ ಇದರಲ್ಲಿ ನೆಡಬೇಕು" ಎಂದು ಅಜ್ಜಿ ಉತ್ತರಿಸಿದರು. "ಬೇಡಪ್ಪ, ನಮ್ಮ ಕೈ ಕೊಳೆಯಾಗುತ್ತದೆ. ನನ್ನ ಅಮ್ಮ ಬೈಯ್ಯುತ್ತಾಳೆ" ಎಂದಳು ಅಶ್ವಿನಿ. "ಚೊಕ್ಕದ ಚಿಕ್ಕಮ್ಮ ಬಾರೆ" ಎಂದು ತಮಾಷೆ ಮಾಡಿದ ಮಹಮ್ಮದ್, "ಕೈ ಕೆಸರಾದರೆ ಬಾಯಿ ಮೊಸರು" ಎಂದು ಹೇಳುತ್ತಾ ಒಂದು ಗಿಡ ತೆಗೆದುಕೊಂಡು ನೆಡಲು ಆರಂಭಿಸಿದನು. ಅಂತೆಯೇ ಎಲ್ಲಾ ಮಕ್ಕಳು ಒಂದೊಂದು ಗಿಡ ನೆಟ್ಟರು. ಕೈ ತೊಳೆದು ಅಜ್ಜಿ ಕೊಟ್ಟ ಹಣ್ಣನ್ನು ತಿಂದು ತೋಟದಲ್ಲೆಲ್ಲಾ ಸುತ್ತಾಡಿದರು. ತೋಟದಲ್ಲಿದ್ದ ಬಾಳೆ, ಅಡಿಕೆ, ತೆಂಗು, ಕಾಳುಮೆಣಸು, ಕಾಫಿ, ಏಲಕ್ಕಿ ಮೊದಲಾದ ಗಿಡಗಳನ್ನು ನೋಡಿದರು.



©KTBS Not to be republished

"ಅಜ್ಜೀ! ಹಾವಿನಮರಿ" ಎಂದು ಕಿರುಚಿದಳು ಶೀಲಾ. "ಅದು ಹಾವಲ್ಲ, ಎರೆಹುಳು. ಇದನ್ನು ರೈತನ ಮಿತ್ರ ಎಂದು ಕರೆಯುತ್ತಾರೆ. ಇದರ ಸಹಾಯದಿಂದ ಎರೆ ಗೊಬ್ಬರ ತಯಾರಿಸುತ್ತಾರೆ" ಎಂದರು ಗುರುಗಳು. "ನಾನು ರಾಸಾಯನಿಕ ಗೊಬ್ಬರ ಬಳಸುವುದಿಲ್ಲ. ಎರೆಗೊಬ್ಬರ, ಹಟ್ಟಿಗೊಬ್ಬರ, ಕೋಳಿಗೊಬ್ಬರ ಮೊದಲಾದ ಸಾವಯವ ಗೊಬ್ಬರ ಬಳಸಿ ಉತ್ತಮ ಬೆಳೆಗಳನ್ನು ಬೆಳೆಯುತ್ತೇವೆ" ಎಂದರು ಅಜ್ಜಿ. ಎಲ್ಲವನ್ನು ಗಮನಿಸುತ್ತಿದ್ದ ಶರಣಪ್ಪ "ಸರ್ ನಮ್ಮ ಊರು ಬಳ್ಳಾರಿ. ಅಲ್ಲಿ ಜೋಳ, ಮೆಣಸು, ಶೇಂಗಾ ಮತ್ತು ತೊಗರಿ ಬೆಳೆಯುತ್ತಾರೆ" ಎಂದನು. "ಹೌದು ಮಣ್ಣಿನ ಗುಣ ಹಾಗೂ ಹವಾಮಾನಕ್ಕೆ ಅನುಗುಣವಾಗಿ ಬೇರೆ ಬೇರೆ ಬೆಳೆ ಬೆಳೆಯುತ್ತಾರೆ" ಎಂದರು ಶಿಕ್ಷಕರು.

"ನಮ್ಮ ಊರು ಪಶ್ಚಿಮ ಘಟ್ಟದ ತಪ್ಪಲಿನಲ್ಲಿದೆ. ಬೆಟ್ಟಗುಡ್ಡ ಮರಗಳಿಂದ ಕೂಡಿರುವ ಪ್ರದೇಶವಾದುದರಿಂದ ಇಲ್ಲಿ ಹೇರಳವಾಗಿ ಮಳೆ ಬೀಳುತ್ತದೆ. ಆದುದರಿಂದ ಹೆಚ್ಚು ನೀರು ಬೇಕಾದ ಬೆಳೆಗಳನ್ನು ನಾವು ಬೆಳೆಯುತ್ತೇವೆ. ನಿಮ್ಮ ಊರಿನ ಕಡೆ ಮಳೆ ಕಡಿಮೆ ಬೀಳುವುದರಿಂದ ಆ ಬೆಳೆಗಳನ್ನು ಬೆಳೆಯುತ್ತಾರೆ" ಎಂದರು ಅಜ್ಜಿ.

ಅಷ್ಟು ಹೊತ್ತಿಗೆ ಅಜ್ಜಿಯ ಮನೆಯಲ್ಲಿ ಮಕ್ಕಳಿಗಾಗಿ ರುಚಿಯಾದ ಅಡುಗೆ ಸಿದ್ಧವಾಗಿತ್ತು. "ಕೈ ಕಾಲು ತೊಳೆದು ಊಟಕ್ಕೆ ಬನ್ನಿ" ಎಂದು ಅಜ್ಜಿ ಕರೆದಳು. ಮಕ್ಕಳು ಅಜ್ಜಿಯ ಜೊತೆ ಊಟಕ್ಕೆ ಹೊರಟರು.

ಅಜ್ಜಿಯ ಮನೆಯ ಅಂಗಳದಲ್ಲಿದ್ದ ಯಂತ್ರವನ್ನು ಕಂಡ ಶೀಲಾ "ಇದೇನು ಗುರುಗಳೇ?" ಎಂದಳು. "ಇದು ಗದ್ದೆ ಉಳುವ ಯಂತ್ರ. ಹಿಂದೆ ನೇಗಿಲು, ನೊಗ, ಎತ್ತು, ಕೋಣ ಬಳಸಿ ಹೊಲ ಉಳುತ್ತಿದ್ದರು. ಈಗ ಹೊಸ ಸಾಧನಗಳು ಬಂದಿವೆ" ಎಂದರು ಗುರುಗಳು.

ಎಲ್ಲರೂ ರುಚಿ ರುಚಿಯಾದ ಊಟ ಮುಗಿಸಿದರು. ಕೈ ತೊಳೆಯಲು ಹೋದ ಅಶ್ವಿನಿ "ಇದೋ ನೋಡಿ. ಇಲ್ಲೂ ಸಣ್ಣ ಸಣ್ಣ ಗುಂಡಿಗಳು ಇವೆ" ಎಂದಳು. "ಇವು ಇಂಗು ಗುಂಡಿಗಳು. ಈ ಗುಂಡಿಗಳ ಮೂಲಕ ಮಳೆಯ ನೀರನ್ನು ಇಂಗಿಸುತ್ತೇವೆ. ಇದು ಅಂತರ್ಜಲ ಹೆಚ್ಚಿಸುತ್ತದೆ. ಇದರಿಂದ ನಮ್ಮ ಬಾವಿಯಲ್ಲಿ ನೀರು ಎಂದೂ ಕಡಿಮೆ ಆಗಿಲ್ಲ" ಎಂದರು ಅಜ್ಜಿ.

"ಮಕ್ಕಳೇ, ನಾವು ಮಳೆ ಕೊಯ್ಲು ಮತ್ತು ಅಂತರ್ಜಲದ ಬಗ್ಗೆ ತರಗತಿಯಲ್ಲಿ ಚರ್ಚಿಸೋಣ. ಈಗ ಅಜ್ಜಿಗೆ ಧನ್ಯವಾದ ಹೇಳಿ ಹೊರಡೋಣ" ಎಂದರು ಗುರುಗಳು. ಅಷ್ಟರಲ್ಲಿ ಅಜ್ಜಿ ಎಲ್ಲರಿಗೂ ಗೋಡಂಬಿ ಹಂಚಿದರು. ಮಕ್ಕಳು ತಿನ್ನುತ್ತಾ ಶಾಲೆ ಕಡೆ ಹೆಜ್ಜೆ ಹಾಕಿದರು.

**ರೈತ ನಮ್ಮೆಲ್ಲರ ಅನ್ನದಾತ**

## ಪದಗಳ ಅರ್ಥ

ಧನ್ಯವಾದ – ಕೃತಜ್ಞತೆ ಅರ್ಪಿಸುವುದು; ಚರ್ಚಿಸು – ವಾದಮಾಡು, ಚರ್ಚೆಮಾಡು; ವಿಶಾಲ – ವಿಸ್ತಾರ; ಪ್ರಕೃತಿ – ನಿಸರ್ಗ; ವಿಧಾನ – ರೀತಿ, ಮಾರ್ಗ; ಹೆಕ್ಕು – ಆರಿಸು; ಬಹುಶಃ – ಬಹುತೇಕ, ಬಹಳಮಟ್ಟಿಗೆ; ಹಬ್ಬು – ಹರಡು, ವ್ಯಾಪಿಸು; ತೋಡು – ಕಾಲುವೆ.

©KTBS Not to be republished

## ಟಿಪ್ಪಣಿ

ಮಲೆನಾಡು – ಪಶ್ಚಿಮ ಘಟ್ಟಗಳಿಂದ ಕೂಡಿದ ಕರ್ನಾಟಕದ ಭೂಭಾಗ.

ಪೈರು – ತೆನೆ ಕೊಡುವ ಬೆಳೆ.

ನೊಗ – ನೇಗಿಲನ್ನು ಎಳೆಯಲು ಎತ್ತಿನ ಕತ್ತಿನ ಮೇಲೆ ಇಡುವ ಉದ್ದವಾದ ಮರದ ದಿಂಡು.

ನೇಗಿಲು – ಭೂಮಿಯನ್ನು ಉಳುವ ಸಾಧನ.

ಯಂತ್ರ – ಕೆಲಸ ಮಾಡುವ ಸಾಧನ.


ಸೂಕ್ಷ್ಮ – ಅತ್ಯಂತ ಚಿಕ್ಕದಾಗಿರುವಂತಹುದು.

ತೋಟಗಾರಿಕೆ – ತೋಟವನ್ನು ಬೆಳೆಸುವುದು.

ಅಂತರ್ಜಲ – ಭೂಮಿ ಒಳಗಿನ ನೀರು.

ಬದು – ಹೊಲಗದ್ದೆಗಳ ಅಂಚಿನಲ್ಲಿ ರಚಿಸಿದ ಮಣ್ಣಿನ ದಂಡೆ.

ಹೊಂಡ – ನೀರು ತುಂಬಿದ ತಗ್ಗು ಪ್ರದೇಶ.




**ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಮಕ್ಕಳು ಎಲ್ಲಿಗೆ ಹೊರ ಸಂಚಾರ ಹೊರಟರು?

೨. ಸಾಮಾನ್ಯವಾಗಿ ಹೊಲವನ್ನು ಯಾವುದರಿಂದ ಉಳುತ್ತಾರೆ?

೩. ಎರೆಗೊಬ್ಬರವನ್ನು ಯಾವುದರಿಂದ ತಯಾರಿಸುತ್ತಾರೆ?

೪. ತೋಟದಲ್ಲಿ ಹೆಚ್ಚಾಗಿ ಯಾವ ಗೊಬ್ಬರವನ್ನು ಬಳಸುತ್ತಿದ್ದರು?

೫. ಶೀಲಾ ಅಜ್ಜಿಯ ಮನೆಯ ಅಂಗಳದಲ್ಲಿ ಯಾವ ಯಂತ್ರವನ್ನು ನೋಡಿದಳು?

©KTBS Not to be republished

**ಆ. ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಅಜ್ಜಿಯ ತೋಟದಲ್ಲಿ ಯಾವ ಯಾವ ಗಿಡಗಳಿದ್ದವು?

೨. ಉಳುಮೆಯ ಬಗ್ಗೆ ಗುರುಗಳು ನೀಡಿದ ವಿವರಣೆ ಏನು?

೩. ಇಂಗು ಗುಂಡಿಯ ಪ್ರಯೋಜನಗಳೇನು?

..............................................................................................................

..............................................................................................................

..............................................................................................................

**ಇ. ವಾಕ್ಯದಲ್ಲಿ ಬಿಟ್ಟಿರುವ ಸ್ಥಳಕ್ಕೆ ಸರಿಯಾದ ಪದ ತುಂಬಿ.**

೧. ಕಿಶೋರನ ಅಜ್ಜಿಯ ಮನೆ .......................................... ತಪ್ಪಲಿನಲ್ಲಿದೆ.

೨. ಮನೆಯ ಹಿಂದಿನ ಗುಡ್ಡದಲ್ಲಿ .......................................... ತೋಟಗಳಿವೆ.

೩. ಮಳೆಯ ನೀರನ್ನು .......................................... ಮೂಲಕ ಇಂಗಿಸುತ್ತೇವೆ.

೪. ಅಜ್ಜಿ ಎಲ್ಲರಿಗೂ .......................................... ಹಂಚಿದರು.

**ಈ. ಹೊಂದಿಸಿ ಬರೆಯಿರಿ.**

| ಅ | ಆ | |
|---|---|---|
| ೧. ಎರೆಹುಳ | ಹಿರೇಕಾಯಿ | ...................................... |
| ೨. ಕೊಕೊ | ಭತ್ತ | ...................................... |
| ೩. ತೆನೆ | ಚಾಕಲೇಟು | ...................................... |
| ೪. ಮಳೆಕೊಯ್ಲು | ರೈತನಮಿತ್ರ | ...................................... |
| ೫. ಹಟ್ಟಿಗೊಬ್ಬರ | ಅಂತರ್ಜಲ | ...................................... |
| | ಸಾವಯವ ಗೊಬ್ಬರ | |

©KTBS Not to be republished

## ಭಾಷಾ ಚಟುವಟಿಕೆ

**ಅ. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.**

೧. ಕಿರುಚು : ..............................................................................................

೨. ಹೊರಸಂಚಾರ : ..............................................................................................

೩. ಆರೈಕೆ : ..............................................................................................

೪. ಹುಲುಸಾಗಿ : ..............................................................................................

## ಆ. ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ.

೧. ತೆಂಗು, ಅಡಿಕೆ, ಬಾಳೆ, ಭತ್ತ ..............................................................

೨. ಮೊಲ, ಹಂದಿ, ಮುಂಗುಸಿ, ಚಿಟ್ಟೆ ..............................................................

೩. ಸೀಬೆಕಾಯಿ, ಸಪೋಟ, ಅನಾನಸು, ಕೊಕೊ ..............................................

## ಇ. ಕೆಳಗಿನವುಗಳನ್ನು ಕೂಡಿಸಿ ಬರೆಯಿರಿ.

ಉದಾ : ಒಂದು + ಆದ = ಒಂದಾದ

ಇಲ್ಲಿ + ಒಂದು = ....................................................

ಹೇರಳ + ಆಗಿ = ....................................................

ಹದ + ಆಗಿತ್ತು = ....................................................




©KTBS Not to be republished

## ಅ. ಕೆಳಗಿನ ಮನೆಗಳಿಂದ ಅಕ್ಷರಗಳನ್ನು ಆರಿಸಿ ನೀರಿನ ಮೂಲಗಳನ್ನು ಕಂಡುಹಿಡಿದು ಬರೆಯಿರಿ.

| | | | | | | |
|---|---|---|---|---|---|---|
| ಕೊ | ಳ | ತೊ | ಸು | ರಂ | ಗ | ಬಿ |
| ಳ | ಕೆ | ರೆ | ಸ | ರೋ | ವ | ರ |
| ವೆ | ಹೊ | ಳೆ | ಮು | ಹ | ಳ್ಳ | ತೆ |
| ಬಾ | ನ | ದಿ | ದ್ರ | ಕ | ಡ | ಲು |
| ವಿ | ಸಾ | ಗ | ರ | ಟ್ಟೆ | ಮ | ಳೆ |

.................................................... ....................................................

.................................................... ....................................................

.................................................... ....................................................

.................................................... ....................................................

ಆ. ನಿಮ್ಮ ಶಾಲಾ ಕೈತೋಟದಲ್ಲಿ ಏನೇನು ಬೆಳೆಯಬೇಕು? ಹೇಗೆ ಬೆಳೆಸಬೇಕು? ಎಂದು ತರಗತಿಯಲ್ಲಿ ಚರ್ಚಿಸಿ. ನಿಮ್ಮ ತೀರ್ಮಾನವನ್ನು ಕೆಳಗೆ ಬರೆಯಿರಿ.

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

ಇ. ನಿಮ್ಮ ಶಾಲೆಯಲ್ಲಿ ರೈತನೊಬ್ಬನನ್ನು ಸನ್ಮಾನಿಸುವ ಸಮಾರಂಭದ ಮುಖ್ಯ ಅತಿಥಿಯಾಗಿ ನೀನು ಮಾಡುವ ಭಾಷಣವನ್ನು ಇಲ್ಲಿ ಬರೆ. ಅನಂತರ ತರಗತಿಯಲ್ಲಿ ಶಿಕ್ಷಕರೆದುರು ಭಾಷಣ ಮಾಡು.

© KTBS Not to be republished

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

## ಈ. ಗೆಳೆಯರೊಂದಿಗೆ ಚರ್ಚಿಸಿ ಉತ್ತರಿಸಿರಿ.

೧. ನಿನ್ನ ಶಾಲೆಗೆ ಜಮೀನು ಕೊಟ್ಟರೆ ನೀನೇನು ಮಾಡುವಿ?

..........................................................................................

..........................................................................................

..........................................................................................

..........................................................................................

..........................................................................................

೨. ರೈತರು ಕೈ ಕೆಸರಾಗುತ್ತದೆ ಎಂದು ಸುಮ್ಮನೆ ಕುಳಿತರೆ ಏನಾಗಬಹುದು?

..........................................................................................

..........................................................................................

..........................................................................................

..........................................................................................

..........................................................................................

## ಉ. ಆಟ ಆಡೋಣ ಬಾ (ಅನುಕರಣೆ ಆಟ)

**ಸೂಚನೆ : ಶಿಕ್ಷಕರ ಜೊತೆ ಸೇರಿ ಕೆಳಗಿನ ಆಟ ಆಡು.**

ಶಿಕ್ಷಕ : "ಕಾಗೆ ಹಾರುವುದು ನೋಡಿದ್ದೀರಾ"

ಮಕ್ಕಳು : ವೃತ್ತದಲ್ಲಿ ಕಾ ! ಕಾ ! ಎಂದು ಶಬ್ದಮಾಡುತ್ತಾ ರೆಕ್ಕೆಬಡಿದಂತೆ ನಟಿಸುತ್ತಾ ವೃತ್ತಾಕಾರದಲ್ಲಿ ಸುತ್ತುವುದು.

ಶಿಕ್ಷಕ : ಕಪ್ಪೆ ಕುಪ್ಪಳಿಸುವುದನ್ನು ನೋಡಿದ್ದೀರಾ?

ಮಕ್ಕಳು : ಕರಕರ, ವಟವಟ ಎಂದು ಕುಪ್ಪಳಿಸುವುದು.

ಶಿಕ್ಷಕ : ಗೂಬೆ ಕೂಗುವುದು ಕೇಳಿದ್ದೀರಾ...? (ಹೀಗೇ ಮುಂದುವರೆಸಬಹುದು)

## ಊ. ಒಗಟು ಓದಿ ಆನಂದಿಸಿ:

೧. ಅಕ್ಕ ಅಕ್ಕ ಗಿಡ ನೋಡು, ಗಿಡದ ಮೇಲೆ ಕಾಯಿ ನೋಡು. ಕಾಯಿ ತಿಂದೋರ ಬಾಯಿ ನೋಡು.

೨. ಅಡ್ಡ ಮರದಲ್ಲಿ ಬೊಡ್ಡ ಕುಳಿತಿದ್ದಾನೆ.

೩. ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ.

೪. ಮಣ್ಣು ಕೊರೆದೆ ಕಲ್ಲು ಸಿಕ್ಕಿತು, ಕಲ್ಲು ಕೊರೆದೆ ಬೆಳ್ಳಿ ಸಿಕ್ಕಿತು, ಬೆಳ್ಳಿ ಕೊರೆದೆ ನೀರು ಸಿಕ್ಕಿತು. (ಹಲಸಿನ ಹಣ್ಣು, ತೆಂಗಿನಕಾಯಿ, ಮಲ್ಲಿಗೆ, ಏಲಕ್ಕಿ)

**(ನೀವು ಸಸ್ಯಗಳಿಗೆ ಸಂಬಂಧಿಸಿದ ಇಂತಹ ಒಗಟುಗಳನ್ನು ಸಂಗ್ರಹಿಸಿ)**

©KTBS Not to be republished

## ೩೫. ಈ ಹಾಡನ್ನು ರಾಗವಾಗಿ ಹಾಡಲು ಪ್ರಯತ್ನಿಸಿ.

ಬೀಜವನ್ನು ಬಿತ್ತುವ
ಗಿಡಗಳನ್ನು ಬೆಳೆಸುವ ।
ಸುಜಲಭರಿತ ದೇಶವನ್ನು
ಸುಫಲವಾಗಿ ಮಾಡುವ ॥

ತೆಂಗು ಕಂಗು ಸಸಿಗಳ
ತಾಳೆ ಬಾಳೆ ಮರಗಳ ।
ಭಂಗವಿಲ್ಲದಂತೆ ಬೆಳೆಸಿ
ಅಧಿಕ ಫಲವ ಪಡೆಯುವ ॥

ಮಾವು ಹಲಸು ನೇರಳೆ
ಲಿಂಬೆ ದ್ರಾಕ್ಷಿ ಪೇರಳೆ ।
ಸೇಬು ಚಿಕ್ಕು ಕಿತ್ತಳೆಗಳ
ನಾವು ನಾವೆ ಬೆಳೆಸುವ ॥


ಬದನೆ ಸೌತೆ ಕುಂಬಳ
ಹೀರೆಕಾಯಿ ಪಡುವಲ ।
ಮುದದಿ ನಾವು ಗೆಣಸು ಮೆಣಸು
ಹರಿವೆಗಳನು ಬೆಳೆಸುವ ॥

ವಿವಿಧ ಧಾನ್ಯ ಬೆಳೆಗಳ
ಕಾಯಿ ಪಲ್ಲೆ ಸಸಿಗಳ ।
ವಿವಿಧ ರೀತಿಯಲ್ಲಿ ಬೆಳೆಸಿ
ಅಧಿಕ ಫಲವ ಪಡೆಯುವ ॥

ಅಧಿಕವಾಗಿ ಬಿತ್ತುವ
ಅಧಿಕವಾಗಿ ಬೆಳೆಸುವ ।
ಅಧಿಕ ಫಲವ ಪಡೆಯುತೆಲ್ಲ
ತೃಪ್ತಿಯಿಂದ ಬಾಳುವ ॥

– ಅಮ್ಮೆಂಬಳ ಅನಂತಯ್ಯ ನಾವಡ

©KTBS
Not to be republished




ನೀನೀಗ ತರಗತಿಯಲ್ಲಿ ನಡೆಯುವ ಎಲ್ಲ ಸರಳ ಸಂವಾದ ಮತ್ತು ವಿವಿಧ ಚರ್ಚೆಗಳಲ್ಲಿ ಭಾಗವಹಿಸುವಿಯಲ್ಲವೇ?

# ಪಾಠ–೬
# ದೊಡ್ಡವರು ಯಾರು?

K8S1M7


ಸಮಿತಿ ರಚನೆ –

**ಕಲಿಕೆಗೆ ದಾರಿ:**


**ಕುಂಬಳಕಾಯಿ, ಪಡುವಲಕಾಯಿ ಮತ್ತು ಹಾಗಲಕಾಯಿ ನಡುವೆ ದೊಡ್ಡವರು ಯಾರು ಎಂಬ ಬಗ್ಗೆ ವಾದ ನಡೆಯಿತು. ಅವರ ನಡುವೆ ಏನು ವಾದ ನಡೆದಿರಬಹುದು ಎಂದು ಊಹಿಸಿಕೊಂಡು ತರಗತಿಯಲ್ಲಿ ಸ್ನೇಹಿತರ ಜೊತೆ ಸೇರಿ ಚರ್ಚಿಸಿ.**





ಒಂದು ಊರು, ಅಲ್ಲೊಂದು ಇಲಿಗಳ ಸಂಸಾರ. ಆ ಸಂಸಾರದಲ್ಲಿ ಒಬ್ಬ ಮಗಳಿದ್ದಳು.




ಮಗಳಿಗೆ ತಕ್ಕ ವರನನ್ನು ಹುಡುಕಬೇಕೆಂದು ತಂದೆ ತಾಯಿ ಇಲಿಗಳು ಯೋಚಿಸಿದವು.







ಜಗತ್ತನ್ನೇ ಬೆಳಗುವ ಸೂರ್ಯ ಬಹಳ ದೊಡ್ಡವನು. ಅವನೇ ನಮ್ಮ ಮಗಳಿಗೆ ತಕ್ಕ ವರ, ಎಂದು ತಾಯಿ ಇಲಿ ಹೇಳಿತು.




ಸೂರ್ಯನ ಬಳಿಗೆ ಇಲಿಗಳು ಹೋದವು. ಮದುವೆ ವಿಚಾರ ತಿಳಿಸಿದವು. ಈ ವಿಚಾರವನ್ನು ಕೇಳಿದ ಸೂರ್ಯನು ನನಗಿಂತಲೂ ದೊಡ್ಡವನು ಇನ್ನೊಬ್ಬನಿದ್ದಾನೆ. ಅವನನ್ನು ಕೇಳಿ ಎಂದು ಹೇಳಿದನು.

©KTBS Not to be republished


| | |
|---|---|
|   |   |
| ಹಾಗಾದರೆ 'ಅವನು ಯಾರು?' ಎಂದು ತಂದೆ ಇಲಿ ಕೇಳಿತು. ಅದಕ್ಕೆ ಸೂರ್ಯನು 'ಮೋಡ ನನಗಿಂತಲೂ ದೊಡ್ಡವನು' ಎಂದು ಹೇಳಿದನು. ಎಲ್ಲರೂ ಸೇರಿ ಮೋಡದ ಬಳಿಗೆ ಹೋದವು | ಮದುವೆ ವಿಚಾರ ಕೇಳಿದ ಮೋಡವು 'ಇಲ್ಲಾ! ಇಲ್ಲಾ! ನನಗಿಂತ ದೊಡ್ಡವನು ಬೆಟ್ಟದ ರಾಜನಿದ್ದಾನೆ. ಅವನಲ್ಲಿ ಹೋಗಿ' ಎಂದು ಹೇಳಿತು. |
|   |   |
| ಬೆಟ್ಟದ ರಾಜನ ಬಳಿಗೆ ಇಲಿಗಳು ಹೋಗಿ ವಿಷಯ ತಿಳಿಸಿದವು. ಆಗ ಬೆಟ್ಟದ ರಾಜ 'ನನಗಿಂತಲೂ ದೊಡ್ಡವನು ಮತ್ತೊಬ್ಬನಿದ್ದಾನೆ. ಅವನೇ ಇಲಿರಾಯ ಅವನಲ್ಲಿಗೆ ಹೋಗಿ' ಎಂದನು. | 'ನಮ್ಮಲ್ಲೆ ವರನನ್ನು ಇಟ್ಟುಕೊಂಡು ಸುಮ್ಮನೆ ಪರದಾಡಿದೆವು' ಎಂದು ತಂದೆ ಇಲಿ ಹೇಳಿತು. 'ನಮ್ಮ ಮಗಳಿಗೆ ಇಲಿರಾಯನೇ ತಕ್ಕ ವರ' ಎಂದು ತೀರ್ಮಾನಿಸಿ, ಮಗಳನ್ನು ಇಲಿರಾಯನಿಗೆ ಕೊಟ್ಟು ವೈಭವದಿಂದ ಮದುವೆ ಮಾಡಿದವು. |

©KTBS Not to be republished

ಅಂಗೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕಾಗಿ ಊರು ಅಲೆದಂತೆ.

## ಪದಗಳ ಅರ್ಥ

ಸಂಸಾರ – ಪರಿವಾರ, ಕುಟುಂಬ; ವರ – ಮದುವೆಯಾಗುವ ಹುಡುಗ, ಮದುಮಗ; ಜಗತ್ತು – ಲೋಕ, ವಿಶ್ವ; ತಕ್ಕ – ಯೋಗ್ಯವಾದ, ಸಮರ್ಥ; ಸೂರ್ಯ – ರವಿ; ಬೆಟ್ಟ – ಪರ್ವತ, ಗಿರಿ; ಸಂಭ್ರಮ – ಉತ್ಸಾಹ, ಸಡಗರ; ವಿಚಾರ – ವಿಷಯ, ಸಂಗತಿ; ಬಹಳ – ಹೆಚ್ಚು, ಅಧಿಕ; ಮದುವೆ – ಲಗ್ನ, ವಿವಾಹ, ಕಲ್ಯಾಣ.



## ಅಭ್ಯಾಸ

### ಅ. ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆ.

೧. ಇಲಿಗಳ ಸಂಸಾರ ಎಲ್ಲಿ ವಾಸವಾಗಿತ್ತು?

..............................................................................................

೨. ತಂದೆ-ತಾಯಿ ಇಲಿಗಳು ಏನೆಂದು ಯೋಚಿಸಿದವು?

..............................................................................................

೩. ತಾಯಿ ಇಲಿ ಏನೆಂದು ಹೇಳಿತು?

..............................................................................................

೪. ಜಗತ್ತನ್ನು ಬೆಳಗುವವರು ಯಾರು?

..............................................................................................

೫. ಸೂರ್ಯನಿಗೆ ಇಲಿಗಳು ಯಾವ ವಿಚಾರ ತಿಳಿಸಿದವು?

..............................................................................................

೬. ಯಾರ ಜೊತೆಯಲ್ಲಿ ಇಲಿಯ ಮದುವೆಯಾಯಿತು?

..............................................................................................

©KTBS
Not to be republished

### ಆ. ಕೊಟ್ಟಿರುವ ಮಾತನ್ನು ಯಾರು? ಯಾರಿಗೆ ಹೇಳಿದರು?

೧. "ಜಗತ್ತನ್ನೇ ಬೆಳಗುವ ಸೂರ್ಯ ಬಹಳ ದೊಡ್ಡವನು."

ಯಾರು ? ..............................................................................

ಯಾರಿಗೆ ?..............................................................................

೨. "ಇಲ್ಲಾ! ಇಲ್ಲಾ! ನನಗಿಂತಲೂ ದೊಡ್ಡವನು ಬೆಟ್ಟದ ರಾಜನಿದ್ದಾನೆ."

ಯಾರು ? ..............................................................................

ಯಾರಿಗೆ ?..............................................................................

೩. "ನಮ್ಮ ಮಗಳಿಗೆ ಇಲಿರಾಯನೇ ತಕ್ಕ ವರ."

ಯಾರು ? ..............................................................................

ಯಾರಿಗೆ ?..............................................................................

ಇ. ವಾಕ್ಯಗಳನ್ನು ಗಮನಿಸಿ. ಸರಿ/ತಪ್ಪುಗಳನ್ನು ಗುರುತಿಸು, ತಪ್ಪಿದ್ದರೆ ಸರಿಪಡಿಸಿ ಬರೆಯಿರಿ.

೧. ಒಂದು ಊರು, ಅಲ್ಲೊಂದು ಹುಲಿಗಳ ಸಂಸಾರ ಇತ್ತು.

..........................................................................................

೨. ಮಗನಿಗೆ ಸರಿಯಾದ ವರ ಬೇಕೆಂದು ಇಲಿಗಳು ಯೋಚಿಸಿದವು.

..........................................................................................

೩. ಬೆಟ್ಟದ ರಾಜನ ಬಳಿಗೆ ಇರುವೆಗಳು ಹೋದವು.

..........................................................................................

ಈ. ಕೊಟ್ಟಿರುವ ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸಿ.

೧. ತಂದೆ ಇಲಿಗಳು ಯೋಚಿಸಿದವು ತಾಯಿ

..........................................................................................

೨. ಬೆಳಗುವ ಬಹಳ ಸೂರ್ಯ ದೊಡ್ಡವನು ಜಗತ್ತನ್ನೇ

..........................................................................................

೩. ಇಲಿಗಳು ಬೆಟ್ಟದ ಹೋದವು ಬಳಿಗೆ ರಾಜನ

..........................................................................................

ಉ. ಈ ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.

೧. ಯೋಚಿಸು ..........................................................................

೨. ತೀರ್ಮಾನಿಸು ......................................................................

೩. ಸಮರ್ಥ ............................................................................

೪. ಮದುವೆ ...........................................................................

©KTBS Not to be republished

# ಭಾಷಾ ಚಟುವಟಿಕೆ

**ಅ. ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ**

(ಬುದ್ಧಿವಂತ, ಸುಂದರವಾದ, ಇಂಪಾಗಿ, ಚೆನ್ನಾಗಿ)

೧. ನವಿಲು ....................................... ಪಕ್ಷಿ.

೨. ಪಲ್ಲವಿ ಬಹಳ .................................. ವಿದ್ಯಾರ್ಥಿನಿ.

೩. ಕೋಗಿಲೆ ........................................... ಹಾಡುತ್ತದೆ.

೪. ಮೋಹನ ........................................ ನೃತ್ಯ ಮಾಡುತ್ತಾನೆ.

**ಆ. ಕೊಟ್ಟಿರುವ ಅಕ್ಷರಗಳನ್ನು ಬಳಸಿ, ಪ್ರಾಣಿಗಳ ಹೆಸರು ಪಟ್ಟಿ ಮಾಡಿ.**

| | | | | |
|---|---|---|---|---|
| ಬ | ಹ | ಸು | ಸ | ಮ |
| ಡ | ಇ | ರ | ಕ | ತ್ತೆ |
| ಹು | ಲಿ | ಬ | ರ | ಎ |
| ತೋ | ಕ | ನ | ಡಿ | ಮ್ಮೆ |
| ಬ | ಳ | ನ | ರಿ | ಡ |

©KTBS Not to be republished

**ಮಾದರಿ:** ಹಸು

.................... .................... .................... .................... ....................

.................... .................... .................... .................... ....................

**ಇ. ಪ್ರಾಣಿ–ಪಕ್ಷಿಗಳ ಕೂಗನ್ನು ಅನುಸರಿಸಿ ಸೂಕ್ತವಾದುದಕ್ಕೆ ಗೆರೆ ಎಳೆದು ಹೊಂದಿಸಿ.**

| ಅ | ಬ |
|---|---|
| ೧. ಕೋಳಿ | ಮೀಯಾಂವ್, ಮೀಯಾಂವ್ |
| ೨. ಕಾಗೆ | ಬೌ ಬೌ |
| ೩. ಬೆಕ್ಕು | ಕಾ ಕಾ |
| ೪. ನಾಯಿ | ಕುಹೂ ಕುಹೂ |
| ೫. ಕೋಗಿಲೆ | ಕೊಕ್ಕೊ ಕ್ಕೋ |

## ಈ. ಕೊಟ್ಟಿರುವ ಪದಗಳಲ್ಲಿ ಸರಿಯಾದ ರೂಪವನ್ನು ಗುರುತಿಸಿ ಬರೆ.

ಹೆಣ್ಣು – ಎಣ್ಣು : .....................................

ತಾಇ – ತಾಯಿ : .....................................

ಮೋಡ – ಮೋಢ : .....................................


ಸೂರ್ಯ – ಸೂರಿಯ : .....................................

ವರ – ಒರ : .....................................

ಬೆಟ್ಟ – ಬೆಟ್ಠ : ....................................

## ಉ. ಈ ಕೆಳಗಿನ ಪದಗಳನ್ನು ಓದಿ ಬರೆ.

©KTBS Not to be republished




ಮಾದರಿ: ಸಲಿಗೆ ........................... ........................... ...........................

........................... ........................... ...........................

# ಬಳಕೆ ಚಟುವಟಿಕೆ

ಅ. ಈ ಕೆಳಗಿನ ವಾಕ್ಯಗಳ ಮಾದರಿಗಳನ್ನು ನಕಲುಮಾಡಿ.

ಪ್ಲಾಸ್ಟಿಕ್ ಬಳಕೆ ಪರಿಸರಕ್ಕೆ ಹಾನಿಕರ.

.................................................................................

ಪ್ಲಾಸ್ಟಿಕ್ ಬಳಕೆ ಪರಿಸರಕ್ಕೆ ಹಾನಿಕರ.

.................................................................................

**ಪ್ಲಾಸ್ಟಿಕ್ ಬಳಕೆ ಪರಿಸರಕ್ಕೆ ಹಾನಿಕರ.**

.................................................................................

**ಪ್ಲಾಸ್ಟಿಕ್ ಬಳಕೆ ಪರಿಸರಕ್ಕೆ ಹಾನಿಕರ.**

.................................................................................

©KTBS Not to be republished


ಆ. "ದೊಡ್ಡವರು ಯಾರು?" ಪಾಠದಲ್ಲಿ ಬರುವ ಪಾತ್ರಗಳ ಸಂಭಾಷಣೆಯನ್ನು ಶಾಲೆಯಲ್ಲಿ ಗೆಳೆಯರೊಂದಿಗೆ ಸೇರಿ ಅಭಿನಯಿಸು.

ಇ. ಪತ್ರಿಕೆಗಳಲ್ಲಿ ಬರುವ ವಿವಿಧ ಚಿತ್ರ ಕಥೆಗಳನ್ನು ಸಂಗ್ರಹಿಸಿ, ಚಿತ್ರಕಥಾ ಕೋಶ ತಯಾರಿಸು.

ಈ. ನಿಮ್ಮ ಶಾಲೆಯಲ್ಲಿ ನಡೆಸುವ 'ಗಣರಾಜ್ಯೋತ್ಸವ' ಕಾರ್ಯಕ್ರಮದ ಪ್ರಚಾರಕ್ಕಾಗಿ ಒಂದು ಭಿತ್ತಿ ಪತ್ರವನ್ನು ಶಿಕ್ಷಕರ ಸಹಾಯದಿಂದ ಸಿದ್ಧಪಡಿಸು.




ನೀನೀಗ ವಿವಿಧ ವಿನೋದ ಚಿತ್ರಸರಣಿಗಳನ್ನು ಮತ್ತು ಭಿತ್ತಿಪತ್ರಗಳನ್ನು ಓದಿ ಅರ್ಥೈಸಿಕೊಳ್ಳಬಲ್ಲೆಯಲ್ಲವೇ?



## ಪಾಠ – ೭

# ಬೀಸೋಕಲ್ಲಿನ ಪದ (ಪದ್ಯ)



N7X8T6

**ಕಲಿಕೆಗೆ ದಾರಿ:**

ಜೋಗುಳ ಹಾಡು, ಗೀಗೀ ಪದ, ಸೋಬಾನೆ ಪದ, ಇವುಗಳಲ್ಲಿ ನಿನಗೆ ಗೊತ್ತಿರುವ ಯಾವುದಾದರೊಂದು ಹಾಡನ್ನು ತರಗತಿಯಲ್ಲಿ ಗೆಳೆಯರೊಡಗೂಡಿ ಹಾಡು.

ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯ
ಜಲ್ಲಜಲ್ಲಾನೆ ಉದುರಮ್ಮ। ನಾ ನಿನಗೆ
ಬೆಲ್ಲಾದಾರತಿಯಾ ಬೆಳಗೇನು ॥

ಅಂದುಳ್ಳ ಅಡಿಗಲ್ಲು ಚಂದುಳ್ಳ ಮೇಗಲ್ಲು
ಚಂದ್ರಮತಿಯೆಂಬ ಹಿಡಿಗೂಟ । ಹಿಡುಕೊಂಡು
ತಂದೆ ತಾಯಿಗಳ ನೆನೆದೇನ ॥



©KTBS Not to be republished

ರಾಗಿಯು ಮುಗಿದಾವು ರಾಜಾನ್ನ ಹೆಚ್ಚ್ಯಾವು
ನಾನ್ಹಿಡಿದ ಕೆಲಸ ವದಗ್ಯಾವು। ರಾಗೀಕಲ್ಲೆ
ನಾ ತೂಗಿ ಬಿಡುತೀನಿ ಬಲದೋಳು ॥

ಕಲ್ಲು ಬಿಟ್ಟೇನೆಂದು ಸಿಟ್ಯಾಕೆ ಸರಸತಿಯೇ
ಕುಕ್ಕೇಲಿ ರಾಗಿ ಬೆಳೆಯಾಲಿ । ತಕ್ಕೊಂಡು
ಮತ್ತೆ ರಾತ್ರೀಗೆ ಬರುತೀನಿ ॥


ಕಲ್ಲು ಕೊಟ್ಟಮ್ಮಗೆ ಎಲ್ಲಾ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ । ಆ ಮನೆಗೆ
ಮಲ್ಲಿಗೆ ಮುಡಿಯೋ ಸೊಸಿ ಬರಲಿ ॥

–ಜನಪದ

ಜನವಾಣಿ ಬೇರು, ಕವಿವಾಣಿ ಹೂವು.


## ಪದಗಳ ಅರ್ಥ

ಪಲ್ಲಕ್ಕಿ – ಮೇನೆ, ಡೋಲಿ; ಉದುರು – ಕೆಳಗೆ ಬೀಳು; ಕುಕ್ಕೆ – ಬಿದಿರಿನ ಬುಟ್ಟಿ ;



## ಟಿಪ್ಪಣಿ

ರಾಜಾನ್ನ – ಸುವಾಸನೆಯುಳ್ಳ ಅಕ್ಕಿ. ಸೊಸಿ – ಸೊಸೆ, ಮಗನ ಹೆಂಡತಿ.



## ಅಭ್ಯಾಸ

### ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ರಾಗಿ ಹೇಗೆ ಉದುರುತ್ತದೆ?

..........................................................................................

೨. ಬೀಸುವ ಕಲ್ಲಿನ ಹಿಡಿಗೂಟ ಹಿಡಿದು ಯಾರನ್ನು ನೆನೆಯುತ್ತಾರೆ?

..........................................................................................

೩. ಸರಸತಿಗೆ ಸಿಟ್ಟು ಬಂತು ಏಕೆ?

..........................................................................................

©KTBS Not to be republished

### ಆ. ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಕಲ್ಲು ಕೊಟ್ಟಮ್ಮನನ್ನು ಏನೆಂದು ಹರಸುವಳು?

..........................................................................................

..........................................................................................

..........................................................................................

೨. ಸಿಟ್ಟುಗೊಂಡ ಸರಸತಿಯನ್ನು ಸಮಾಧಾನ ಮಾಡಿದ ಬಗೆ ಹೇಗೆ?

..........................................................................................

..........................................................................................

..........................................................................................

## ಇ. ಪದ್ಯದ ಮೊದಲರ್ಧ ಸಾಲಿಗೆ ಎರಡನೆಯ ಅರ್ಧ ಸಾಲನ್ನು ಹೊಂದಿಸಿ ಬರೆಯಿರಿ.

| ಅ | ಬ | |
|---|---|---|
| ೧. ಬೆಲ್ಲಾದಾರುತಿಯಾ | ಬರುತೀನಿ | ................................... |
| ೨. ಮತ್ತೆ ರಾತ್ರೀಗೆ | ಬೆಳಗೇನು | ................................... |
| ೩. ರಾಗಿಯು ಮುಗಿದಾವು | ನಡಿಸೇನು | ................................... |
| ೪. ಅಂದುಳ್ಳ ಅಡಿಗಲ್ಲು | ರಾಜಾನ್ನ ಹೆಚ್ಚ್ಯಾವು | ................................... |
| | ಚಂದುಳ್ಳ ಮೇಗಲ್ಲು | |

## ಈ. ಮಾದರಿಯಂತೆ ಕೊಟ್ಟಿರುವ ಪದಗಳಿಗೆ ಭಿನ್ನ ಅರ್ಥದಲ್ಲಿ ಸ್ವಂತ ವಾಕ್ಯ ಬರೆಯಿರಿ.

ಮಾದರಿ : ಅತ್ತೆ – ನಾನು ಕಾಲಿಗೆ ಮುಳ್ಳು ಚುಚ್ಚಿದಾಗ ಅತ್ತೆನು.

ಅತ್ತೆ – ನಮ್ಮ ಅತ್ತೆ ನನಗೆ ಹೊಸ ಬಟ್ಟೆ ತಂದರು.

೧. ತಂದೆ : ...........................................................................................

ತಂದೆ : ...........................................................................................

೨. ಕಳೆ : ...........................................................................................

ಕಳೆ : ...........................................................................................

೩. ಆಡು : ...........................................................................................

ಆಡು : ...........................................................................................

©KTBS Not to be republished




## ಅ. ಆಡುಮಾತು ಮತ್ತು ಬರೆಹದ ಮಾತಿನ ನಡುವಿನ ವ್ಯತ್ಯಾಸ ಗಮನಿಸಿ.

| ಆಡುಮಾತು | | ಬರೆಹದ ರೂಪ |
|---|---|---|
| ಬರ್ತಾನೆ | ______________ | ಬರುತ್ತಾನೆ |
| ಯಿಲ್ಲ | ______________ | ಇಲ್ಲ |
| ಅರಕೆ | ______________ | ಹರಕೆ |
| ಅತ್ತಿರ | ______________ | ಹತ್ತಿರ |
| ಕರೆವೋಲೆ | ______________ | ಕರೆಯೋಲೆ |

## ಆ. ಅಕ್ಷರ ಬಳಸಿ ಪದ ಬರೆ.

ಕ

ಸಿ | ಠಿ | ಸ | ದ | ರೆ

ಮ

ಣ್ಣು | ಗ್ಗ | ಠ | ಟ್ಟ | ಡ್ಡ

________________ ________________

________________ ________________

________________ ________________

________________ ________________

________________ ________________

## ಇ. ಕೆಳಗಿನ ಆಡುನುಡಿಗಳನ್ನು ಮಾದರಿಯಂತೆ ಬರೆಹದ ಭಾಷೆಯಲ್ಲಿ ಬರೆಯಿರಿ

ಮಾದರಿ : ಹೆಚ್ಚ್ಯಾವು – ಹೆಚ್ಚಾದವು

ವದಗ್ಯಾವು : ..........................................................

ಮುಗಿದಾವು : ..........................................................

ಸಿಟ್ಟ್ಯಾಕೆ : ..........................................................

ಬೆಳೆಯಾಲಿ : ..........................................................

©KTBS Not to be republished




## ಅ. ಒಗಟು ಬಿಡಿಸಿ.

೧. ಅವ್ವನ ಹಾಸಿಗೆ ಸುತ್ತಾಕಾಗೋಲ್ಲ, ಅಪ್ಪನ ದುಡ್ಡು ಎಣಿಸಾಕಾಗೋಲ್ಲ.

..........................................................................................

೨. ಕರಿ ಸೀರಿ ಉಟ್ಟಾಳ, ಕಾಲುಂಗುರ ಇಟ್ಟಾಳ, ಮೇಲೆ ಹೋಗತಾಳ, ಕೆಳಗೆ ಬರತಾಳ.

..........................................................................................

೩. ಅಪ್ಪಾ ಎಂದರೆ ಮುಚ್ಚುತಾವ, ಅವ್ವ ಎಂದರೆ ತೆರಿತಾವ.

..........................................................................................

## ಆ. ಕೊಟ್ಟಿರುವ ಕತೆ ಓದಿ, ಇದಕ್ಕೆ ಸಂಬಂಧಿಸಿದ ಗಾದೆಗಳನ್ನು ಬರೆಯಿರಿ.

ಒಂದು ಊರಿನಲ್ಲಿ ಒಬ್ಬ ರೈತನಿದ್ದನು. ಅವನಿಗೆ ಇಬ್ಬರು ಸೋಮಾರಿ ಮಕ್ಕಳಿದ್ದರು. ಅನಾರೋಗ್ಯದಿಂದ ರೈತ ಹಾಸಿಗೆ ಹಿಡಿದನು. ಮಕ್ಕಳನ್ನು ಹತ್ತಿರ ಕರೆದು "ಮಕ್ಕಳೇ ನಾನು ಸಂಪಾದಿಸಿದ ಸಂಪತ್ತನ್ನು ನಿಮಗಾಗಿ ಹೊಲದಲ್ಲಿ ಹೂತಿಟ್ಟಿದ್ದೇನೆ" ಎಂದು ಹೇಳಿದನು. ಮಕ್ಕಳಿಬ್ಬರು ಹಾರೆ ಗುದ್ದಲಿ ಹಿಡಿದು ಹೊಲಕ್ಕೆ ಹೋದರು. ಅಗೆದು ಅಗೆದು ನಿಧಿಗಾಗಿ ಹುಡುಕಿದರು. ನಿಧಿ ಸಿಗಲಿಲ್ಲ. ಅದೇ ದಿನ ಮಳೆ ಸುರಿಯಿತು. ಇನ್ನೇನು ಮಾಡುವುದು ಎಂದು ಧಾನ್ಯ ಬಿತ್ತಿದರು. ಉತ್ತಮ ಬೆಳೆ ಬಂತು. ಕೈ ತುಂಬ ಹಣ ಸಂಪಾದಿಸಿದರು. ರೈತ ಮಕ್ಕಳನ್ನು ಕರೆದು "ಇದೇ ನಾನು ಹೊಲದಲ್ಲಿ ಹೂತಿಟ್ಟ ಸಂಪತ್ತು" ಎಂದು ಹೇಳಿದನು.

..........................................................................................................

..........................................................................................................

..........................................................................................................

## ಇ. ಕೊಟ್ಟಿರುವ ಗಾದೆ ಮಾತನ್ನು ಬರೆಹದ ಭಾಷೆಗೆ ಬದಲಾಯಿಸಿ.

* ಒಡಾಡ್ಕೊಂಡು ದನ ಕಾದ್ರೆ ಬೇಗ್ನೆ ಹೊತ್ತು ಮುಳುಗುತ್ತಾ?

  ..........................................................................................

* ಕಡ್ಲೆ ಇದ್ದಾಗ ಹಲ್ಲಿಲ್ಲ, ಹಲ್ಲಿದ್ದಾಗ ಕಡ್ಲಿಲ್ಲ.

  ..........................................................................................

* ಕುಟ್ಟಾಕ ಬರದೋಳು ಕೇರಿ ಕೇರಿ ನೋಡಿದಳಂತ.

  ..........................................................................................

©KTBS Not to be republished

## ಈ. ಕೆಳಗಿನ ಆಡುನುಡಿಗಳನ್ನು ಓದಿ ಬರೆಯಿರಿ.

ಅ. ರವಿ ಶಾಲೆಗೆ ಹೋದನು ..........................................................

ರವಿ ಸಾಲಿಗೆ ಹೋದ ..........................................................

ರವಿ ಸಾಲಿಗೆ ಹೊಗ್ಯಾನ್ರೀ ..........................................................

ಆ. ಕಿರಣ ತಿಂಡಿ ತಿನ್ನುತ್ತಿದ್ದಾನೆ. ..........................................................

ಕಿರಣ ತಿಂಡಿ ತಿಂತಾನ ..........................................................




ನೀನೀಗ ಆಡುಭಾಷೆ ಹಾಗೂ ಬರೆಹದ ಭಾಷೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬಲ್ಲೆಯಲ್ಲವೇ?

ಸಮಿತಿ ರಚನೆ –



## ಪಾಠ –೮

# ತಾಯಿಗೊಂದು ಪತ್ರ



V3W7Q8

**ಕಲಿಕೆಗೆ ದಾರಿ:**
ನಿನಗಿಷ್ಟವಾದ ಒಂದು ಪ್ರಾಣಿಯ ಬಗ್ಗೆ ನಾಲ್ಕೈದು ವಾಕ್ಯ ಬರೆದು ಸ್ನೇಹಿತನಿಂದ ಓದಿಸು.

ಕ್ಷೇಮ ಶ್ರೀ ೬ನೆಯ ಅಕ್ಟೋಬರ್–೨೦೧೭

ಬಸವನ ಬಾಗೇವಾಡಿ

ಪ್ರೀತಿಯ ಅಮ್ಮನಿಗೆ ನಿಮ್ಮ ಮಗನಾದ ಉಲ್ಲಾಸ್ ಬೇಡುವ ಆಶೀರ್ವಾದಗಳು. ನಾನು, ಅಜ್ಜ, ಅಜ್ಜಿ, ಮಾವಂದಿರು ತೇಜಸ್ವಿನಿ ಹಾಗೂ ಧನುಷ್ ಎಲ್ಲರೂ ಕ್ಷೇಮವಾಗಿದ್ದೇವೆ. ನಿಮ್ಮೆಲ್ಲರ ಕ್ಷೇಮ ಸಮಾಚಾರಕ್ಕಾಗಿ ಈ ಕಾಗದ ತಲುಪಿದ ಕೂಡಲೇ ಕಾಗದ ಬರೆಯುತ್ತೀರೆಂದು ನಂಬಿರುತ್ತೇನೆ.

ಅಮ್ಮ, ಈ ದಸರೆ ರಜೆಯಲ್ಲಿ ಅಜ್ಜ ನಮ್ಮನ್ನು ಮೈಸೂರು ದಸರೆಗೆ ಕರೆದುಕೊಂಡು ಹೋಗಿದ್ದರು. ದಸರೆ ಮೆರವಣಿಗೆಯಲ್ಲಿನ ಸ್ತಬ್ಧ ಚಿತ್ರಗಳು, ಕಲಾ ತಂಡಗಳ ಪ್ರದರ್ಶನಗಳು ಆಕರ್ಷಕವಾಗಿದ್ದವು. ಆನೆ ಮೇಲೆ ಅಂಬಾರಿಯಲ್ಲಿದ್ದ ಚಾಮುಂಡೇಶ್ವರಿ ದೇವಿ ನೋಡಿ ತುಂಬಾ ಸಂತೋಷವಾಯಿತು. ಸಂಜೆ ನೋಡಿದ ಪಂಜಿನ ಕವಾಯತು ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ದಸರೆ ಮುಗಿದ ಮರುದಿನ ಚಾಮುಂಡಿಬೆಟ್ಟಕ್ಕೆ ಹೋಗಿ ದೇವಿಗೆ ಪೂಜೆ ಮಾಡಿಸಿದೆವು. ಅಜ್ಜಿ ನನಗೆ ಮತ್ತು ಧನುಷ್‌ಗೆ ಆಟದ ಸಾಮಾನು ಕೊಡಿಸಿದರು. ತೇಜಸ್ವಿನಿ ಅಕ್ಕನಿಗೆ ಸರ, ಬಳೆ ಕೊಡಿಸಿದರು. ಅಲ್ಲಿಂದ  ನಗರ ಸಾರಿಗೆ ಬಸ್ ಹತ್ತಿ ಪ್ರಾಣಿ ಸಂಗ್ರಹಾಲಯಕ್ಕೆ ಬಂದೆವು. ಶ್ರೀ ಜಯಚಾಮರಾಜೇಂದ್ರ ಮೃಗಾಲಯದಲ್ಲಿ ವಿವಿಧ ರೀತಿಯ ಪಕ್ಷಿಗಳನ್ನು ನೋಡಿದೆವು. ಬಣ್ಣ ಬಣ್ಣದ ಹಕ್ಕಿಗಳು ಅವುಗಳ 'ಚಿಂವ್ ಚಿಂವ್' ಧ್ವನಿ ಕೇಳಲು ಸುಮಧುರವಾಗಿತ್ತು. ಅಲ್ಲಿಂದ ಮುಂದೆ ಕೆಂಪು ಮತ್ತು ಕಪ್ಪು ಮುಖದ ಕೋತಿಗಳನ್ನು ಕಂಡೆವು. ಧನುಷ್ ಅವುಗಳಿಗೆ ತಿಂಡಿ ಪದಾರ್ಥ ಕೊಡುವುದನ್ನು ನೋಡಿದ ಕಾವಲುಗಾರ 'ಹಾಗೆ ಮಾಡಬಾರದು' ಎಂದನು. ಅಲ್ಲಲ್ಲಿ ಬರೆದು ಹಾಕಿರುವ 'ಮುಟ್ಟಬೇಡಿ', 'ಪ್ರಾಣಿಗಳಿಗೆ ತಿಂಡಿ ಪದಾರ್ಥ ಕೊಡಬೇಡಿ' ಎಂಬ ಸೂಚನಾ ಫಲಕಗಳನ್ನು ನೋಡಿ ಎಂದು ತೋರಿಸಿದನು. ಅದೇ ಸಮಯದಲ್ಲಿ ಸಿಂಹ ಘರ್ಜಿಸಿ ನಮ್ಮನ್ನು ಆ ಕಡೆಗೆ ಸೆಳೆಯಿತು. ಮಾವನವರು 'ಗಲಾಟೆ ಮಾಡದೆ ಮೌನವಾಗಿ ಬನ್ನಿ' ಎಂದರು.

©KTBS Not to be republished

ನಾವು ಶೇಂಗಾ ತಿನ್ನುತ್ತಾ ಒಂದು ಕಡೆಯಿಂದ ಆನೆ, ಜಿಂಕೆ ಹಿಂಡು, ಹುಲಿ, ಚಿರತೆ, ಸಿಂಹ, ಘೇಂಡಾಮೃಗ ನೋಡಿ ಖುಷಿಪಟ್ಟೆವು. ಪಕ್ಕದ ಮರದ ಕೊಂಬೆಯ ಮೇಲೆ ಕಾಡು ಮನುಷ್ಯ ನಮ್ಮ ಹಾಗೇ ನಡೆದಾಡುತ್ತಿತ್ತು. ಮುಂದೆ ಹಾವುಗಳ ಸಾಮ್ರಾಜ್ಯ. ಅಲ್ಲಿ ಕಾಳಿಂಗ ಸರ್ಪ, ಹೆಬ್ಬಾವು ಮುಂತಾದ ಬೇರೆಬೇರೆ ಜಾತಿಯ ಹಾವುಗಳನ್ನು ಕಂಡು ಮೈ ಜುಮ್! ಎಂದಿತು. ‘ಈ ಹಾವುಗಳನ್ನು ಎಲ್ಲಿಂದ ತಂದದ್ದು?’ ಎಂದಾಗ, ಅಲ್ಲಿದ್ದ ಕಾವಲುಗಾರ ‘ಬಂಡೀಪುರದ ಕಾಡಿನಿಂದ’ ಎಂದನು. ಅಲ್ಲಿಂದ ಮುಂದೆ ಜಿರಾಫೆ ನೋಡಿದೆವು. ಅದು ತನ್ನ ಮರಿಗೆ ಹಾಲು ಉಣಿಸುತ್ತಿತ್ತು. ಜಿರಾಫೆಯ ಕತ್ತು ನೋಡಿ ಆಶ್ಚರ್ಯವಾಯಿತು. ಅಲ್ಲಿಯೇ ಇದ್ದ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದೆವು. ಅಲ್ಲಿಟ್ಟಿದ್ದ ಪ್ರಾಣಿಗಳ ಮಾದರಿಗಳು ನಿಜವಾದ ಪ್ರಾಣಿಗಳೇ ಎಂಬಂತಿದ್ದವು. ಇವೆಲ್ಲವನ್ನು ನೋಡುವಷ್ಟರಲ್ಲಿ ಸಂಜೆ ಆಯಿತು. ಆಮೇಲೆ ಅರಮನೆಯನ್ನು ನೋಡಿಕೊಂಡು ಊರಿಗೆ ಹಿಂದಿರುಗಿದೆವು.

ಅಮ್ಮ, ಬಹಳ ಸಂತೋಷವಾಯಿತು. ನಾನು ಊರಿಗೆ ಬಂದಾಗ ಎಲ್ಲರೂ ಮತ್ತೊಮ್ಮೆ ಮೈಸೂರಿಗೆ ಹೋಗೋಣ.

ತುಂಬಾ ಖುಷಿಯಿಂದ ಈ ಕಾಗದ ಬರೆದಿರುತ್ತೇನೆ. ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ.

ಇತಿ ನಿಮ್ಮ ಪ್ರೀತಿಯ ಮಗ

ಉಲ್ಲಾಸ್

ಇವರಿಗೆ,

ಶ್ರೀಮತಿ ಸಂಪಿಗೆ

ಕಸ್ತೂರಿ ನಿವಾಸ

ಯಳಂದೂರು ತಾಲೂಕು–೫೭೧೪೪೧

©KTBS Not to be republished

ಓದು ಬರೆಹ ಕಲಿಯಿರಿ, ಜ್ಞಾನ ದೀಪ ಬೆಳಗಿರಿ



## ಪದಗಳ ಅರ್ಥ

ಸಮಾಚಾರ–ವಿಷಯ, ಸಂಗತಿ; ಸ್ತಬ್ಧಚಿತ್ರ–ನಿಶ್ಚಲವಾದ ಚಿತ್ರ; ಆಕೃತಿ. ತಂಡ–ಗುಂಪು, ಸಮೂಹ; ಧ್ವನಿ–ದನಿ, ಸ್ವರ; ಸುಮಧುರ–ಇಂಪಾದ; ಉದ್ಯಾನವನ–ಕೈತೋಟ; ಗರ್ಜನೆ–ಗಟ್ಟಿಯಾಗಿ ಕೂಗು, ಆರ್ಭಟಿಸು; ಶೇಂಗಾ–ಕಡ್ಲೆಕಾಯಿ, ನೆಲಗಡಲೆ.

## ಟಿಪ್ಪಣಿ

ದಸರೆ–ಶುಕ್ಲಪಕ್ಷ ಪಾಡ್ಯದಿಂದ ದಶಮಿಯವರೆಗಿನ ಹತ್ತು ದಿನಗಳ ಹಬ್ಬ.
ಅಂಬಾರಿ–ಆನೆಯ ಮೇಲೆ ಕುಳಿತುಕೊಳ್ಳಲು ಹಾಕುವ ಮಂಟಪದಂತಹ ಭದ್ರಾಸನ.
ಪಂಜು–ಕೋಲಿಗೆ ದಪ್ಪ ಬಟ್ಟೆ ಸುತ್ತಿ ಎಣ್ಣೆ ಅಥವಾ ತುಪ್ಪ ಸುರಿದು ಉರಿಸುವ ದೀಪ.
ಕವಾಯತು–ಸೈನಿಕರು, ಪೊಲೀಸರು, ಗೃಹರಕ್ಷಕರು ಮಾಡುವ ಕಸರತ್ತು.
ಫಲಕ–ಲೋಹ, ಮರ, ಗಾಜು ಮುಂತಾದವುಗಳ ತೆಳುವಾದ ಹಾಳೆ.
ಪಂಜರ–ಹಕ್ಕಿ, ಪ್ರಾಣಿ ಮುಂತಾದವುಗಳನ್ನು ಇಡುವ ಗೂಡು.

©KTBS Not to be republished

## ಅಭ್ಯಾಸ

**ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಅಜ್ಜ ಮಕ್ಕಳನ್ನು ಎಲ್ಲಿಗೆ ಕರೆದುಕೊಂಡು ಹೋಗಿದ್ದರು?

..............................................................................................

೨. ಅಜ್ಜಿ ಮಕ್ಕಳಿಗೆ ಏನೇನು ಕೊಡಿಸಿದರು?

..............................................................................................

೩. ಮಕ್ಕಳು ಏನು ನೋಡಿ ಆಶ್ಚರ್ಯಪಟ್ಟರು?

..............................................................................................

೪. ಅಮ್ಮನಿಗೆ ಕಾಗದ ಬರೆದವರು ಯಾರು?

..............................................................................................

## ಆ. ಎರಡು – ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಮೈಸೂರು ದಸರೆಯಲ್ಲಿ ಉಲ್ಲಾಸ್ ಏನೇನು ನೋಡಿದನು?

..........................................................................................................

..........................................................................................................

..........................................................................................................

೨. ಪ್ರಾಣಿ ಸಂಗ್ರಹಾಲಯದಲ್ಲಿ ಯಾವ ಯಾವ ಪ್ರಾಣಿಗಳು ಇದ್ದವು?

..........................................................................................................

..........................................................................................................

..........................................................................................................

೩. ಉಲ್ಲಾಸನಿಗೆ ಸಂತೋಷವಾಗಲು ಕಾರಣವೇನು?

..........................................................................................................

..........................................................................................................

..........................................................................................................

©KTBS
Not to be republished

## ಇ. ಖಾಲಿ ಬಿಟ್ಟಿರುವ ಜಾಗದಲ್ಲಿ ಸರಿಯಾದ ಪದ ತುಂಬಿ.

೧. ಅಜ್ಜ ನಮ್ಮನ್ನು ಮೈಸೂರು ................................ ಗೆ ಕರೆದುಕೊಂಡು ಹೋಗಿದ್ದರು.

೨. ಆನೆಯ ಮೇಲಿನ ಅಂಬಾರಿಯಲ್ಲಿ ...................................... ಇಟ್ಟಿದ್ದರು.

೩. ಮೈಸೂರಿನಲ್ಲಿ .................................... ಮೃಗಾಲಯವಿದೆ.

೪. ಸಿಂಹದ ...................................... ನಮ್ಮ ಗಮನ ಸೆಳೆಯಿತು.

೫. ಕೊಂಬೆಯ ಮೇಲೆ .................................... ನಮ್ಮ ಹಾಗೆಯೇ ನಡೆಯುತ್ತಿತ್ತು.

**ಈ. ಕೊಟ್ಟಿರುವ ವಾಕ್ಯಗಳು ಸರಿ ಇದ್ದರೆ ☑ ತಪ್ಪು ಇದ್ದರೆ ☒ ಗುರುತು ಹಾಕಿ.**

೧. ಉಲ್ಲಾಸನು ತನ್ನ ತಂದೆಗೆ ಕಾಗದ ಬರೆದನು. ☐


೨. ಕೆಂಪು ಮತ್ತು ಕಪ್ಪು ಬಣ್ಣದ ಕೋತಿಗಳು 'ಚಿಂವ್ ಚಿಂವ್' ಎಂದು ಶಬ್ದ ಮಾಡುತ್ತಿದ್ದವು. ☐

೩. ದಸರೆ ಮುಗಿದ ಮರುದಿನ ಚಾಮುಂಡಿಬೆಟ್ಟಕ್ಕೆ ಹೋದೆವು. ☐

೪. ಜಿರಾಫೆ ತನ್ನ ಮರಿಗೆ ಹಾಲು ಉಣಿಸುತ್ತಿತ್ತು. ☐

೫. ಮೃಗಾಲಯದಲ್ಲಿದ್ದ ಹಾವುಗಳನ್ನು ಬಂಡೀಪುರದ ಕಾಡಿನಿಂದ ತರಲಾಗಿದೆ. ☐

೬. ದಸರೆ ಹಬ್ಬ ಆರು ದಿನ ನಡೆಯುತ್ತದೆ. ☐




**ಅ. ಮಾದರಿಯಂತೆ ಲಿಂಗ ಬದಲಿಸಿ ಬರೆಯಿರಿ.**

ಮಾದರಿ : ಅಜ್ಜ – ಅಜ್ಜಿ

ತಂದೆ : ......................

ಮಾವ : ......................

ಚಿಕ್ಕಪ್ಪ : ......................

ಮಗಳು : ......................

ತಮ್ಮ : ......................

©KTBS Not to be republished

**ಆ. ಮಾದರಿಯಲ್ಲಿ ಸೂಚಿಸಿರುವಂತೆ ಸೂಕ್ತ ಪದ ಬರೆಯಿರಿ.**

ಮಾದರಿ : ನಮ್ಮ–ನಮ್ಮದು–ನಮ್ಮವರು

ನನ್ನ ...................... ......................

ನಿನ್ನ ...................... ......................

ನಿಮ್ಮ ...................... ......................

ತಮ್ಮ ...................... ......................

## ಇ. ಗುಂಪಿಗೆ ಸೇರದ ಪದ ಆರಿಸಿ ಬರೆ.

೧. ಶೇಂಗಾ, ಮಾವು, ಗೆಣಸು, ಆಲೂಗಡ್ಡೆ

..........................................................

೨. ಕಾಗೆ, ಗೂಬೆ, ಕೋಗಿಲೆ, ಘೇಂಡಾಮೃಗ

..........................................................

೩. ಬಾಳೆಹಣ್ಣು, ಇಡ್ಲಿ, ವಡೆ, ದೋಸೆ

..........................................................

೪. ಚಿರತೆ, ಗಿಳಿ, ಸಿಂಹ, ಹುಲಿ

..........................................................

## ಈ. ಈ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸು.


೧. ಕ್ಷೇಮ : ..........................................................................................

೨. ಪ್ರಾಣಿ ಸಂಗ್ರಹಾಲಯ : ...........................................................................

೩. ಉದ್ಯಾನವನ : ...................................................................................

೪. ಸೂಚನಾ ಫಲಕ : .................................................................................

©KTBS Not to be republished





ಅ. ನಿನಗೆ ಇಷ್ಟವಾದ ಒಂದು ವಿಷಯ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಪತ್ರವನ್ನು (ನಿನ್ನ ಬರೆವಣಿಗೆ ಪುಸ್ತಕದಲ್ಲಿ) ಬರೆದು, ನಿನ್ನ ಗೆಳೆಯ / ಗೆಳತಿಗೆ ಓದಲು ಕೊಡು.

ಆ. ನಿನಗೆ ತಿಳಿದಿರುವ ಕವಿಗಳ ಕೈಬರೆಹಗಳನ್ನು ಸಂಗ್ರಹಿಸು.


ಇ. ನಿನಗೆ ಗೊತ್ತಿರುವ ವ್ಯಕ್ತಿಗಳ ಕೈಬರೆಹಗಳನ್ನು ಸಂಗ್ರಹಿಸು.

ಈ. ಶಿಕ್ಷಕರ ಸಹಾಯ ಪಡೆದು ದೊಡ್ಡ/ಸಣ್ಣ ಲಕೋಟೆಗಳನ್ನು ತಯಾರಿಸು.



ಉ. ವಿವಿಧ ಪತ್ರಗಳ ಪರಿಚಯವನ್ನು ಶಿಕ್ಷಕರ ಹತ್ತಿರ ಕೇಳಿ ತಿಳಿದುಕೊ.





©KTBS
Not to be republished




ನೀನೀಗ ಕೈಬರೆಹದ ಪತ್ರಗಳನ್ನು ಮತ್ತು ಇತರರ ಬರೆವಣಿಗೆಯನ್ನು ಓದಿ ಅರ್ಥೈಸಿಕೊಳ್ಳುವಿಯಲ್ಲವೆ?



# ಪಾಠ – ೯
# ಮಹಿಳಾ ದಿನಾಚರಣೆ

B7N1F8

**ಸಮಿತಿ ರಚನೆ –**

**ಕಲಿಕೆಗೆ ದಾರಿ:**
**ನೀನು ಆಲಿಸಿರುವ ಯಾವುದಾದರೊಂದು ಭಾಷಣದ ಮುಖ್ಯಾಂಶವನ್ನು ಹೇಳು.**

ಅಂದು ಬೆಳಗ್ಗೆ ಶಾಲಾ ಬಯಲಿನಲ್ಲಿ ಮಕ್ಕಳೆಲ್ಲರೂ ಬಹಳ ಸಡಗರ ಸಂಭ್ರಮದಿಂದ ಓಡಾಡುತ್ತಿದ್ದರು. ಮುಖ್ಯಶಿಕ್ಷಕರು ಮಕ್ಕಳನ್ನು ಕುರಿತು "ಮಕ್ಕಳೇ! ಎಲ್ಲರೂ ಬೇಗ ಇಲ್ಲಿ ಬನ್ನಿರಿ" ಎಂದರು.

ಮುಖ್ಯಶಿಕ್ಷಕರು : ಮಕ್ಕಳೇ, ಈ ದಿನದ ವಿಶೇಷ ನಿಮಗೀಗಾಗಲೆ ತಿಳಿದಿದೆಯಲ್ಲವೇ?

ಮಕ್ಕಳು : (ಒಟ್ಟಾಗಿ) ಹೌದು ಗುರುಗಳೇ. ಹೌದು ಇಂದು ಮಹಿಳಾ ದಿನಾಚರಣೆ ಎಂದು ನಿನ್ನೆ ನೀವೇ ಹೇಳಿದ್ದಿರಲ್ಲ.

ಶಿಕ್ಷಕಿ : ಮಕ್ಕಳೇ! ಇಂದು ಆಗಬೇಕಾದ ಕೆಲಸದ ಬಗ್ಗೆ ನಿನ್ನೆಯೇ ನಿಮಗೆ ತಿಳಿಸಿದ್ದೆ. ಅದರಂತೆ ನೀವೆಲ್ಲ ಕಾರ್ಯ ನಿರ್ವಹಿಸಿದ್ದೀರಿ ಅಲ್ಲವೇ.

ಮಕ್ಕಳು : ಹೌದು ಮೇಡಂ. ನೀವು ಹೇಳಿದಂತೆ ಶಾಲಾ ಆವರಣ ಸ್ವಚ್ಛ ಮಾಡಿದ್ದೇವೆ. ತಳಿರು ತೋರಣ ಕಟ್ಟಿ ರಾಷ್ಟ್ರಕ್ಕಾಗಿ ದುಡಿದ ಅನೇಕ ಮಹಿಳೆಯರ ಭಾವಚಿತ್ರಗಳಿಗೆ ಹೂಮಾಲೆ ಹಾಕಿ ಸಿಂಗರಿಸಿದ್ದೇವೆ.

ಮುಖ್ಯಶಿಕ್ಷಕರು : ಹಾಗಾದರೆ ನಾವೆಲ್ಲ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಹೋಗಿ ಅತಿಥಿಗಳನ್ನು ಸ್ವಾಗತಿಸೋಣ ಬನ್ನಿ.

ಮಕ್ಕಳೆಲ್ಲರೂ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬಂದು ಆಸೀನರಾದರು. ಐದನೆಯ ತರಗತಿ ವಿದ್ಯಾರ್ಥಿ ಶೇಖರ್ ಕಾರ್ಯಕ್ರಮ ನಿರೂಪಣೆ ಮಾಡಿದನು. ಸಭೆಗೆ ಆಗಮಿಸಿದ ಅತಿಥಿಗಳಿಗೆ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಲು ವಿನಂತಿಸಿದನು. ನಾಲ್ಕನೆಯ ತರಗತಿ ವಿದ್ಯಾರ್ಥಿನಿಯರಾದ ಕುಸುಮ ಮತ್ತು ಮೇರಿ ಪ್ರಾರ್ಥನೆ ಮಾಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಗಣ್ಯರನ್ನು ಸುಮತಿ ಸ್ವಾಗತಿಸಿದಳು. ಮುಖ್ಯಶಿಕ್ಷಕರು ಪ್ರಾಸ್ತಾವಿಕವಾಗಿ ಈ ದಿನದ ಮಹತ್ವವನ್ನು ಸಭೆಗೆ ತಿಳಿಸಿದರು.

ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀಮತಿ ಮಹಾಲಕ್ಷ್ಮಿಯವರು ಮಹಿಳಾ ದಿನಾಚರಣೆ ಕುರಿತು ಮಾತನಾಡಲು ಪ್ರಾರಂಭಿಸಿದರು.

"ಮಕ್ಕಳೇ, ೧೮೫೭ರ ಮಾರ್ಚ್ ೮ರಂದು ನ್ಯೂಯಾರ್ಕಿನಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಮಾಡಿದ ಹೋರಾಟದಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಜಾರಿಗೆ ಬಂದಿತು. ೧೯೭೫ರಲ್ಲಿ ಅಂತಾರಾಷ್ಟ್ರೀಯ ಮಹಿಳಾ ವರ್ಷಾಚರಣೆಯನ್ನು ಆರಂಭಿಸಲಾಯಿತು.

©KTBS Not to be republished

೧೯೭೫ರಿಂದ ೮೫ರವರೆಗೆ ವಿಶ್ವಸಂಸ್ಥೆಯ ಕರೆಯಂತೆ ಮಹಿಳೆಯರ ವಿರುದ್ಧ ನಡೆಯುವ ಎಲ್ಲ ಬಗೆಯ ಅಸಮಾನತೆಗಳನ್ನು ತೊಡೆದುಹಾಕಲು 'ಮಹಿಳಾ ದಶಕ'ದ ಆಚರಣೆಯನ್ನು ಘೋಷಿಸಲಾಯಿತು. ಇಂದು ಹೆಣ್ಣುಮಕ್ಕಳಿಗೆ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚುಹೆಚ್ಚು ಅವಕಾಶಗಳನ್ನು ಕಲ್ಪಿಸಬೇಕಾಗಿದೆ. 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ನಾಣ್ಣುಡಿ ಇದೆ. ಹೆಣ್ಣು ಆದರ್ಶ ಸಮಾಜದ ನಿರ್ಮಾಣಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದಾಳೆ. ಮಕ್ಕಳ ಪಾಲನೆ ಪೋಷಣೆಯಿಂದ ಹಿಡಿದು ಅಂತಾರಾಷ್ಟ್ರೀಯ ಮಟ್ಟದವರೆಗೂ ಹಲವು ಸಾಧನೆಗಳನ್ನು ಮಾಡಿದ್ದಾಳೆ.




ನಮ್ಮ ನಾಡಿನಲ್ಲಿ ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಬೆಳವಡಿ ಮಲ್ಲಮ್ಮ ಮುಂತಾದ ಅನೇಕ ವೀರನಾರಿಯರ ಹೆಸರು ಅಜರಾಮರವಾಗಿವೆ. ಈ ಸಂದರ್ಭದಲ್ಲಿ ಒನಕೆ ಓಬವ್ವಳ ಬಗ್ಗೆ ಕಿರು ಪರಿಚಯ ಮಾಡಿಕೊಳ್ಳೋಣ.

ಹಿಂದೆ ಚಿತ್ರದುರ್ಗವನ್ನು ಮದಕರಿನಾಯಕ ಪಾಳೇಗಾರನು ಆಳುತ್ತಿದ್ದನು. ಒಮ್ಮೆ ದುರ್ಗದ ಕೋಟೆಗೆ ಹೈದರಾಲಿ ಸೈನಿಕರು ಮುತ್ತಿಗೆ ಹಾಕಿದರು. ಹೈದರಾಲಿ ಸೈನಿಕರು ಕೊಳದ ಸಮೀಪ ಇದ್ದ ಕಳ್ಳಗಿಂಡಿಯ ಮೂಲಕ ಕೋಟೆಯನ್ನು ಪ್ರವೇಶಿಸಲು ಹೊಂಚು ಹಾಕಿದ್ದರು. ಆ ಕಳ್ಳಗಿಂಡಿಯ ಮೂಲಕ ಒಬ್ಬೊಬ್ಬರೇ ಕೋಟೆಯ ಒಳಗೆ ಹೋಗಲು ಸಿದ್ಧರಾದರು.

ಓಬವ್ವ ಕೋಟೆಯ ಒಬ್ಬ ಕಾವಲುಗಾರನ ಹೆಂಡತಿ. ಆಕೆ ತಣ್ಣೀರು ಕೊಳದ ಹತ್ತಿರ ನೀರು ತರಲು ಕೊಡವನ್ನು ಹಿಡಿದು ಬಂದಳು. ಆಗ ಕಳ್ಳಗಿಂಡಿಯ ಹತ್ತಿರ ಪಿಸುಗುಟ್ಟುವ ಧ್ವನಿ ಕೇಳಿಸಿತು. ಶತ್ರು ಸೈನಿಕರು ಕೋಟೆಯೊಳಗೆ ನುಸುಳಲು ಹವಣಿಸುತ್ತಿದ್ದರು. ಇದನ್ನು ಅರಿತ ಓಬವ್ವ ತನ್ನ ಗುಡಿಸಲಿಗೆ ಹೋಗಿ ಒನಕೆಯನ್ನು ತಂದಳು. ಕೈಯಲ್ಲಿ ಒನಕೆ ಹಿಡಿದು ಆ ಕಳ್ಳಗಿಂಡಿಯ ಮಗ್ಗುಲಿಗೆ ನಿಂತುಕೊಂಡಳು. ಒಳ ನುಸುಳಿ ಬರುತ್ತಿದ್ದ ಹೈದರಾಲಿ ಸೈನಿಕರನ್ನು ಒನಕೆಯಿಂದ ಹೊಡೆದು ಹೊಡೆದು ಸಾಯಿಸಿದಳು.

ಹೀಗೆ ನೂರಾರು ಸೈನಿಕರು ಹತರಾದರು. ಆಗ ಮದಕರಿ ನಾಯಕನು ದಂಡಿನೊಡನೆ ಆ ಸ್ಥಳಕ್ಕೆ ಬಂದನು. ಓಬವ್ವಳ ಸಾಹಸಕ್ಕೆ ಬೆರಗಾದನು. ದುರ್ಗವನ್ನು ರಕ್ಷಿಸಿದ ಓಬವ್ವಳನ್ನು ಕೊಂಡಾಡಿದನು.

ಒನಕೆ ಓಬವ್ವಳನ್ನು ಕನ್ನಡ ನಾಡಿನ ಜನರು ಮರೆಯುವಂತಿಲ್ಲ. ಆಕೆಯ ಸಾಹಸದಿಂದ ಯುದ್ಧದಲ್ಲಿ ದುರ್ಗಕ್ಕೆ ಜಯ ಲಭಿಸಿತು. ಹೀಗೆ ಅನೇಕ ಮಹಿಳೆಯರು ತಮ್ಮ ಪ್ರಾಣದ ಹಂಗನ್ನು ತೊರೆದು ಸಾಧನೆಗೈದಿರುವರು. ನಾವೂ ಸಹ ಇಂತಹ ಸಾಧಕ ಮಹಿಳೆಯರ ಆದರ್ಶಗಳನ್ನು ಪಾಲಿಸಿಕೊಂಡು ಈ ದೇಶದ ಉತ್ತಮ ಪ್ರಜೆಗಳಾಗಿ ಬಾಳೋಣ" ಎಂದರು.

ಮಕ್ಕಳೆಲ್ಲರೂ ಉತ್ಸಾಹದಿಂದ ಭಾಷಣವನ್ನು ಆಲಿಸುವುದರಲ್ಲಿ ಮೈ ಮರೆತಿದ್ದರು. ವಿದ್ಯಾರ್ಥಿನಿ ಫಾತಿಮಾಳು ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದಳು. ಕಾರ್ಯಕ್ರಮ ರಾಷ್ಟ್ರಗೀತೆಯೊಂದಿಗೆ ಮುಕ್ತಾಯವಾಯಿತು. ಎಸ್.ಡಿ.ಎಂ.ಸಿ.ಯವರ ಸಹಕಾರದಿಂದ ಎಲ್ಲರಿಗೂ ಸಿಹಿ ಹಂಚಲಾಯಿತು.

©KTBS Not to be republished

**ಹೆಣ್ಣು ಸಂಸಾರದ ಕಣ್ಣು**




ಸಂಭ್ರಮ – ಸಡಗರ, ಉತ್ಸಾಹ; ಕಾರ್ಯ – ಕೆಲಸ, ಕಾಯಕ; ಸಿಂಗರಿಸು – ಅಲಂಕರಿಸು, ಅಲಂಕಾರ ಮಾಡು; ನಿರೂಪಣೆ – ವಿವರಿಸು; ಗಣ್ಯ – ಮನ್ನಣೆಗೆ ತಕ್ಕ, ಪ್ರಮುಖ; ಪೋಷಣೆ – ರಕ್ಷಣೆ, ಪಾಲನೆ; ನಿದರ್ಶನ – ಉದಾಹರಣೆ, ದೃಷ್ಟಾಂತ; ಸಂದರ್ಭ – ಸಮಯ, ವೇಳೆ, ಕಾಲ; ಮುತ್ತಿಗೆ – ಎರಗು, ಆಕ್ರಮಿಸು; ಪಿಸುಗುಟ್ಟು – ಮೆಲ್ಲನೆ ಮಾತು; ಶತ್ರು – ಹಗೆ, ವೈರಿ; ಹವಣಿಸು – ಅಣಿಯಾಗು, ಸಿದ್ಧವಾಗು; ದಂಡು – ಸೈನ್ಯ, ಗುಂಪು, ಪಡೆ, ಸಮೂಹ; ಪಾಲಿಸು – ಅನುಸರಿಸು, ಆಚರಿಸು; ಉತ್ಸಾಹ – ಹುರುಪು, ಆಸಕ್ತಿ; ವಂದನೆ – ನಮಸ್ಕಾರ, ನಮನ; ಮುಕ್ತಾಯ – ಕೊನೆ, ಅಂತ್ಯ; ಸಹಕಾರ – ಸಹಾಯ, ನೆರವು.

## ಟಿಪ್ಪಣಿ

| | | |
|---|---|---|
| ತಳಿರು ತೋರಣ | – | ಚಿಗುರೆಲೆಗಳ ಮಾಲೆ. |
| ಹೊಂಚುಹಾಕು | – | ಅಡಗಿಕೊಂಡು ಕಾಯುವುದು. |
| ಪರಂಪರೆ | – | ಸಂಪ್ರದಾಯ, ಅನೂಚಾನವಾಗಿ ಬಂದಿರುವುದು. |
| ಎಸ್.ಡಿ.ಎಂ.ಸಿ. | – | ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ. |
| ಅತಿಥಿ | – | ಆಮಂತ್ರಣವನ್ನು ಪಡೆದು ಅಥವಾ ಪಡೆಯದೆಯೆ ಮನೆಗೆ ಬಂದ ವ್ಯಕ್ತಿ. |
| ಆಸನ | – | ಕುಳಿತುಕೊಳ್ಳಲು ಉಪಯೋಗಿಸುವ ಪೀಠ. |
| ಕೊಡ | – | ಮಣ್ಣು ಅಥವಾ ಲೋಹದಿಂದ ಮಾಡಿದ ಬಾಯಿ ಕಿರಿದಾದ ಪಾತ್ರೆ. |

## ಅಭ್ಯಾಸ

**ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆ.**

೧. ಅಂತಾರಾಷ್ಟ್ರೀಯ ಮಹಿಳಾ ವರ್ಷಾಚರಣೆಯನ್ನು ಯಾವಾಗ ಪ್ರಾರಂಭಿಸಲಾಯಿತು?

.................................................................................................

೨. ಮಕ್ಕಳು ಯಾರ ಭಾವಚಿತ್ರಗಳನ್ನು ಸಿಂಗರಿಸಿದ್ದರು?

.................................................................................................

೩. ನಮ್ಮ ನಾಡಿನ ಪ್ರಸಿದ್ಧ ಮಹಿಳೆಯರು ಯಾರು?

.................................................................................................

೪. ಒನಕೆ ಓಬವ್ವಳನ್ನು ಕುರಿತು ಮಾತನಾಡಿದವರು ಯಾರು?

.................................................................................................

**ಆ. ವಾಕ್ಯಗಳನ್ನು ಗಮನಿಸಿ ಸರಿ/ತಪ್ಪು ಗುರುತಿಸು–ತಪ್ಪಿದ್ದರೆ ಸರಿಪಡಿಸಿ ಬರೆ.**

೧. ಮಕ್ಕಳೆಲ್ಲರು ಬಹಳ ಸಡಗರ ಸಂಭ್ರಮದಿಂದ ತೇಲಾಡುತ್ತಿದ್ದರು. ☐

.................................................................................................

೨. ಪುರುಷರ ಭಾವಚಿತ್ರಗಳಿಗೆ ಹೂಮಾಲೆ ಹಾಕಿ ಸಿಂಗರಿಸಿದರು. ☐

.................................................................................................

©KTBS Not to be republished

೩. ಮಕ್ಕಳೆಲ್ಲರೂ ಶಾಲಾ ಕೊಠಡಿಗೆ ಹೋಗಿ ಕುಳಿತರು. ☐

..........................................................................................................

೪. ಓಬವ್ವ ತನ್ನ ಗುಡಿಸಿಲಿಗೆ ಹೋಗಿ ಕೊಡಲಿಯನ್ನು ತಂದಳು. ☐

..........................................................................................................

**ಇ. ವಾಕ್ಯದಲ್ಲಿ ಬಿಟ್ಟಿರುವ ಸ್ಥಳದಲ್ಲಿ ಸರಿಯಾದ ಪದ ಬರೆದು ವಾಕ್ಯ ಪೂರ್ಣಗೊಳಿಸು.**

೧. ಹೆಣ್ಣೊಂದು ಕಲಿತರೆ ........................................

೨. ತೊಟ್ಟಿಲು ತೂಗುವ ಕೈ ........................................

೩. ಓಬವ್ವ ಒಬ್ಬ ಕಾವಲುಗಾರನ ........................................

**ಈ. ಕೊಟ್ಟಿರುವ ಪದ ಗಮನಿಸಿ ವಿರುದ್ಧಾರ್ಥಕ ಪದ ಬರೆ**

೧. ಹಗಲು x ........................................

೨. ಹಿಂದೆ x ........................................

೩. ಜಯ x ........................................

೪. ಒಳಗೆ x ........................................




©KTBS Not to be republished

**ಅ. ಕೊಟ್ಟಿರುವ ಪದಗಳಿಗೆ ಸ್ತ್ರೀರೂಪ ಬರೆ.**

೧. ವಿದ್ಯಾರ್ಥಿ : ........................................

೨. ಗಂಡು : ........................................

೩. ಅಧ್ಯಕ್ಷ : ........................................

೪. ಗಂಡ : ........................................

**ಆ. ಮಾದರಿಯಂತೆ ಬರೆ.**

ಮಾದರಿ: ಮರ – ಮರಗಳು

೧. ಅಂಗಡಿ – ........................................

೨. ಚಿತ್ರ – ........................................

೩. ಶಾಲೆ – ........................................

೪. ಪ್ರಜೆ – ........................................


## ಇ. ಗುಂಪಿಗೆ ಸೇರದ ಪದ ಗುರುತಿಸಿ ಬರೆ.

೧. ಮಹಿಳೆ, ಹೆಣ್ಣು, ಹೆಂಗಸು, ಇಳೆ: ..........................................

೨. ಆಸನ, ಪೀಠ, ಗದ್ದುಗೆ, ಕಿರೀಟ: ..........................................

೩. ಚಾಂದ್‌ಬೀಬಿ, ಬೆಳವಡಿ ಮಲ್ಲಮ್ಮ, ಓನಕೆ ಓಬವ್ವ, ರಾಣಿ ಚೆನ್ನಮ್ಮ:..............................

೪. ಜಯ, ವಿಜಯ, ಭಯ, ಯಶಸ್ಸು: ..........................................




೧. ನಿಮ್ಮ ಶಾಲೆಯಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಪಟ್ಟಿ ಸಿದ್ಧಪಡಿಸು.

..............................................................................................................

..............................................................................................................

..............................................................................................................

..............................................................................................................

©KTBS Not to be republished


೨. ಶಾಲೆಯಲ್ಲಿ ನಡೆಯುವ ನಾಟಕ ಪ್ರದರ್ಶನದ ಪ್ರಚಾರಕ್ಕಾಗಿ ಒಂದು ಭಿತ್ತಿ ಪತ್ರವನ್ನು ನಿಮ್ಮ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಒಟ್ಟಾಗಿ ಶಿಕ್ಷಕರ ಮಾರ್ಗದರ್ಶನದಲ್ಲಿ ತಯಾರಿಸಿ.

೩. ಈ ಗದ್ಯದಲ್ಲಿ ಬರುವ ಒನಕೆ ಓಬವ್ವನ ಪಾತ್ರವನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ತರಗತಿಯಲ್ಲಿ ಅಭಿನಯಿಸಿ.

೪. ನಿಮ್ಮ ಶಾಲೆಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರ ಹೆಸರುಗಳನ್ನು ನಿನ್ನ ನೋಟ್ ಪುಸ್ತಕದಲ್ಲಿ ಪಟ್ಟಿಮಾಡು.




ನೀನೀಗ ಪರಿಚಿತ ಸನ್ನಿವೇಶಗಳಲ್ಲಿ ಸರಳ ಭಾಷಣಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದನ್ನು ತಿಳಿದುಕೊಂಡಿರುವೆಯಲ್ಲವೇ?



## ಪಾಠ – ೧೦ (ಪದ್ಯ)
# ಸರ್ವಜ್ಞನ ತ್ರಿಪದಿಗಳು



E6T8L7

**ಕಲಿಕೆಗೆ ದಾರಿ:**

ಹಿಂದಿನ ತರಗತಿಯಲ್ಲಿ ಕಂಠಪಾಠ ಮಾಡಿದ ಯಾವುದಾದರೊಂದು ಹಾಡನ್ನು ಸ್ನೇಹಿತರ ಜೊತೆ ಸೇರಿ ಹಾಡು.

ಅನ್ನವನು ಇಕ್ಕುವುದು । ನನ್ನಿಯನು ನುಡಿಯುವುದು ।
ತನ್ನಂತೆ ಪರರ ಬಗೆದೊಡೆ ಕೈಲಾಸ ।
ಬಿನ್ನಾಣವಕ್ಕು ಸರ್ವಜ್ಞ

ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಂಗೆ
ಕೊಟ್ಟಿದ್ದು ಕೆಟ್ಟಿತ್ತೆನಬೇಡ ಮುಂದಕ್ಕೆ ।
ಕಟ್ಟಿಹುದು ಬುತ್ತಿ । ಸರ್ವಜ್ಞ



©KTBS
Not to be republished

ಜಾತಿಹೀನನ ಮನೆಯ । ಜ್ಯೋತಿ ತಾ ಹೀನವೇ ।
ಜಾತಿ ವಿಜಾತಿಯೆನಬೇಡ – ದೇವನೊಲಿ ।
ದಾತನೇ ಜಾತ ಸರ್ವಜ್ಞ

ಆಗ ಬಾ । ಈಗ ಬಾ । ಹೋಗಿ ಬಾ । ಎನ್ನದಲೆ ।
ಆಗಲೇ ಕರೆದು ಕೊಡುವನ ಧರ್ಮ ।
ಹೊನ್ನಾಗದೆ ಬಿಡದು । ಸರ್ವಜ್ಞ

ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು ।
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ।
ನಡುವೆ ಎತ್ತಣದು? ಸರ್ವಜ್ಞ

ಕೋಪವೆಂಬುದು ತಾನು । ಪಾಪದಾ ನೆಲೆಗಟ್ಟು ।
ಆಪತ್ತು ಸುಖವು ಸರಿಯೆಂದು ಕಾಂಬವಗೆ ।
ಪಾಪವೆಲ್ಲಿಹುದು ಸರ್ವಜ್ಞ

– ಸರ್ವಜ್ಞ

ನುಡಿದಂತೆ ನಡೆ, ನಡೆದಂತೆ ನುಡಿ.

## ಪದಗಳ ಅರ್ಥ

ಇಕ್ಕು – ಇರಿಸು, ಬಡಿಸು, ನೀಡು; ನನ್ನಿ – ನಿಜ, ದಿಟ; ಬಿನ್ನಾಣ – ಬೆಡಗು, ವೈಯ್ಯಾರ; ಅಗ್ನಿ – ಬೆಂಕಿ; ಕುಲಗೋತ್ರ – ವಂಶ, ಜಾತಿ; ಆಪತ್ತು – ಅಪಾಯ, ತೊಂದರೆ; ಬಗೆ – ರೀತಿ, ವಿಧ, ತಿಳಿ, ಅರಿ

## ಟಿಪ್ಪಣಿ

ಬುತ್ತಿ – ಪ್ರಯಾಣ ಕಾಲಕ್ಕಾಗಿ ಕಟ್ಟಿ ಸಿದ್ಧಪಡಿಸಿದ ಮೊಸರನ್ನ, ಕಲಸನ್ನ, ರೊಟ್ಟಿ ಮೊದಲಾದವುಗಳನ್ನು ಒಳಗೊಂಡದ್ದು.

ತ್ರಿಪದಿ – ಮೂರು ಸಾಲುಗಳನ್ನು ಹೊಂದಿರುವ ಪದ್ಯ.

## ಅಭ್ಯಾಸ

©KTBS Not to be republished

**ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಯಾರ ಮನೆಯ ಜ್ಯೋತಿಯು ಹೀನವಲ್ಲ?

..............................................................................................................

೨. ಪರರನ್ನು ಏನೆಂದು ಬಗೆಯಬೇಕು?

..............................................................................................................

೩. ಕೊಟ್ಟಿದ್ದು ತನಗಾದರೆ ಬಚ್ಚಿಟ್ಟಿದ್ದು ಯಾರಿಗೆ?

..............................................................................................................

೪. ಪಾಪದ ನೆಲಗಟ್ಟು ಯಾವುದು?

..............................................................................................................

**ಆ. ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಕೈಲಾಸ ಯಾವಾಗ ಬಿನ್ನಾಣವಾಗುವುದು?

..............................................................................................................

..............................................................................................................


..............................................................................................................

೨. ಕುಲಗೋತ್ರಗಳ ನಡುವೆ ಭಿನ್ನತೆ ಏಕೆ ಇರಬಾರದು?

..............................................................................................................

..............................................................................................................

..............................................................................................................



## ಭಾಷಾ ಚಟುವಟಿಕೆ

### ಅ. ಸ್ಪಷ್ಟವಾಗಿ ಓದಿ ವ್ಯತ್ಯಾಸ ಗಮನಿಸಿ

| | |
|---|---|
| ಹಾಳು | ಆಳು |
| ಹುಳಿ | ಉಳಿ |
| ಹುಣ್ಣು | ಉಣ್ಣು |
| ಹೇಳು | ಏಳು |
| ಹೊತ್ತು | ಒತ್ತು |

### ಆ. ಮಾದರಿಯಂತೆ ಪದಗಳನ್ನು ಬರೆ

ಮಾದರಿ : ಟ್ಟು – ಕಟ್ಟು –ಅಟ್ಟು – ತಟ್ಟು – ಪೆಟ್ಟು

ಡ್ಡ .................. .................. .................. ..................

ತ್ತ .................. .................. .................. ..................

ಕ್ಕ .................. .................. .................. ..................

### ಇ. ಮಾದರಿಯಂತೆ ಸೂಕ್ತ ಸ್ಥಳದಲ್ಲಿ ಸ, ಶ, ಷ ಸೇರಿಸಿ ಪದ ರಚಿಸು

| ಮಾದರಿ: | ಸನ್ಯಾಸ | ವಿನಾಶ | ಪುರುಷ |
|---|---|---|---|
| | ಪ್ರಯಾ.......... | ಆಕಾ.......... | ದೋ.......... |
| | ಪ್ರವಾ.......... | ವಿವ.......... | ರೋ.......... |
| | ನೀರ.......... | ವಿದೇ.......... | ಹರು.......... |
| | ವಿಶ್ವಾ.......... | ಹತಾ.......... | ವಿಶೇ.......... |
| | ವಿಲಾ.......... | ವ.......... | ನಿಮಿ.......... |

©KTBS Not to be republished



## ಬಳಕೆ ಚಟುವಟಿಕೆ

### ಅ. ಈ ವಾಕ್ಯವನ್ನು ಸ್ಫುಟವಾಗಿ ನಕಲು ಮಾಡಿ..

೧. ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ

..........................................................................................

..........................................................................................

ಆ. ಈ ಪದ್ಯದ ಮೊದಲ ಆರು ಸಾಲುಗಳನ್ನು ಕಂಠಪಾಠ ಮಾಡಿ ನಿಮ್ಮದೇ ರಾಗದಲ್ಲಿ ಹಾಡಿ

ಇ. ನಮ್ಮ ರಾಷ್ಟ್ರಗೀತೆಯನ್ನು ಇಲ್ಲಿ ಬರೆಯಿರಿ.

### ಸೂಚನೆ

ತರಗತಿಯಲ್ಲಿರುವ ಮಕ್ಕಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿಕೊಳ್ಳಿ. ನಂತರ ಪ್ರತಿ ತಂಡದವರೂ ರಾಷ್ಟ್ರಗೀತೆಯನ್ನು ಹಾಡಲಿ. ಒಬ್ಬರು ಹಾಡಿಗೆ ತೆಗೆದುಕೊಂಡ ಸಮಯ ಗುರುತಿಸಿಕೊಳ್ಳಲಿ. ಯಾವ ಗುಂಪು ೪೮–೫೨ ಸೆಕೆಂಡ್‌ನಲ್ಲಿ ಹಾಡುತ್ತದೋ ಆ ಗುಂಪು ಗೆದ್ದಂತೆ. ಈ ಆಟಕ್ಕೆ ಶಿಕ್ಷಕರ ಸಹಕಾರ ಪಡೆಯಿರಿ.

©KTBS Not to be republished

### ಅಂತ್ಯಾಕ್ಷರಿ ಆಟ

**ಆಟದ ವಿಧಾನ:–** ತರಗತಿಯ ಮಕ್ಕಳು ಎರಡು ಗುಂಪುಗಳಾಗುವುದು. ಒಂದು ಗುಂಪಿನವರು ಯಾವುದಾದರೂ ಹಾಡಿನ ೨ ರಿಂದ ೪ ಸಾಲುಗಳನ್ನು ಹಾಡಬೇಕು. ಕೊನೆಯ ಅಕ್ಷರದಿಂದ ಆರಂಭಿಸಿ ಎರಡನೆಯ ತಂಡದವರು ಹಾಡಬೇಕು. ಕೊನೆಯಲ್ಲಿ ಯಾವ ತಂಡದವರು ಹಾಡದೆ ನಿಲ್ಲಿಸುವರೋ ಅವರು ಸೋತಂತೆ. ಹಾಡಿದ ಹಾಡನ್ನು ಪುನಃ ಹಾಡಿದರೆ ಎದುರಿನ ತಂಡದವರಿಗೆ ಒಂದು ಅಂಕ.




ನೀನೀಗ ಅಚ್ಚುಕಟ್ಟಾಗಿ ಮತ್ತು ಸ್ಫುಟವಾಗಿ ಬರೆಯುವ ಸಾಮರ್ಥ್ಯವನ್ನು ರೂಢಿಸಿಕೊಂಡಿರುವೆಯಲ್ಲವೆ?

## ಪಾಠ–೧೧
# ವೀರ ಅಭಿಮನ್ಯು


A3B5A7

ಸಮಿತಿ ರಚನೆ –

**ಕಲಿಕೆಗೆ ದಾರಿ:**
**ಪುರಾಣದಲ್ಲಿ ಬರುವ ವೀರ ಬಾಲಕನೊಬ್ಬನ ಕಥೆಯನ್ನು ಬರೆದು ತರಗತಿಯಲ್ಲಿ ಓದಿ. ಅನಂತರ ಎಲ್ಲರೂ ಬರೆದ ಕಥೆಯನ್ನು ತರಗತಿಯ ಹಿರೇಮಣಿಯು ಸಂಗ್ರಹಿಸಿ ಶಿಕ್ಷಕರ ಸಹಕಾರದಲ್ಲಿ ಹಸ್ತಪ್ರತಿ ಸಿದ್ಧಪಡಿಸಿ.**

ಕೌರವರಿಗೂ ಪಾಂಡವರಿಗೂ ಕುರುಕ್ಷೇತ್ರದಲ್ಲಿ ಘನಘೋರ ಸಂಗ್ರಾಮ ನಡೆಯುತ್ತಿತ್ತು. ಹನ್ನೆರಡನೆಯ ದಿನ ದ್ರೋಣಾಚಾರ್ಯರು ಚಕ್ರವ್ಯೂಹವನ್ನು ರಚಿಸಿದ್ದರು. ಕೃಷ್ಣ, ಬಲರಾಮ ಮತ್ತು ಅರ್ಜುನನನ್ನು ಬಿಟ್ಟರೆ ಚಕ್ರವ್ಯೂಹವನ್ನು ಭೇದಿಸುವ ವಿದ್ಯೆ ಉಳಿದ ಪಾಂಡವರಾರಿಗೂ ಗೊತ್ತಿರಲಿಲ್ಲ. ಇದರಿಂದ ಭೀಮಸೇನ ಮತ್ತು ಧರ್ಮರಾಯ ಚಿಂತಾಕ್ರಾಂತರಾಗಿದ್ದರು.

### ದೃಶ್ಯ ೧



©KTBS Not to be republished

*(ಧರ್ಮರಾಯ ಮತ್ತು ಭೀಮಸೇನ ಚರ್ಚಿಸುತ್ತಾ ಕುಳಿತಿದ್ದಾರೆ. ಅಲ್ಲಿಗೆ ಅಭಿಮನ್ಯುವಿನ ಪ್ರವೇಶ)*

ಅಭಿಮನ್ಯು : ದೊಡ್ಡಪ್ಪ, ನೀವೇಕೆ ಇಂದು ಬಹಳ ಚಿಂತಾಕ್ರಾಂತರಾಗಿರುವಿರಿ?

ಧರ್ಮರಾಯ : ಬಾ ಮಗು ಅಭಿಮನ್ಯು. ಇಂದು ದ್ರೋಣಾಚಾರ್ಯರು ಯುದ್ಧಭೂಮಿಯಲ್ಲಿ ಚಕ್ರವ್ಯೂಹವನ್ನು ರಚಿಸಿದ್ದಾರೆ. ಇದನ್ನು ಭೇದಿಸುವ ವಿದ್ಯೆ ನಿನ್ನ ತಂದೆಯಾದ ಅರ್ಜುನ, ಶ್ರೀಕೃಷ್ಣ ಹಾಗೂ ಬಲರಾಮರಿಗೆ ಮಾತ್ರ ಗೊತ್ತು. ಆದರೆ ಈಗ ಅವರು ಅನಿವಾರ್ಯವಾಗಿ ಸಂಶಪ್ತಕರೆಂಬ ರಾಕ್ಷಸರನ್ನು ಎದುರಿಸಲು ಹೋಗಿದ್ದಾರೆ. ಈಗೇನು ಮಾಡಬೇಕು ಎಂಬುದೇ ದೊಡ್ಡ ಚಿಂತೆಯಾಗಿದೆ.

ಅಭಿಮನ್ಯು : ದೊಡ್ಡಪ್ಪ, ಇಷ್ಟು ಚಿಕ್ಕ ವಿಷಯಕ್ಕೆ ಅಷ್ಟೊಂದು ಚಿಂತೆಯೇ?

ಧರ್ಮರಾಯ : ಏನು! ಇದು ಚಿಕ್ಕ ವಿಷಯವೇ ಕಂದಾ! ಪಾಂಡವರಿಗೂ ಕೌರವರಿಗೂ ಬಿಲ್ವಿದ್ಯೆ ಕಲಿಸಿದ ದ್ರೋಣಾಚಾರ್ಯರು ರಚಿಸಿದ ಚಕ್ರವ್ಯೂಹವನ್ನು ಭೇದಿಸುವುದು ಅಷ್ಟು ಸುಲಭದ ಕೆಲಸವೇ?

ಅಭಿಮನ್ಯು : ಚಿಂತೆಯನ್ನು ಬಿಡಿ ದೊಡ್ಡಪ್ಪ, ಚಕ್ರವ್ಯೂಹವನ್ನು ನಾನು ಭೇದಿಸುತ್ತೇನೆ. ನನ್ನನ್ನು ಆಶೀರ್ವದಿಸಿ ಕಳಿಸಿಕೊಡಿ.

ಧರ್ಮರಾಯ : (ಅಭಿಮನ್ಯುವಿನ ಮಾತುಗಳನ್ನು ಕೇಳಿ ಮನದಲ್ಲೆ ಹೆಮ್ಮೆಪಡುತ್ತಾ) ಭೇಷ್ ಕುಮಾರ, ನಿನ್ನ ಪರಾಕ್ರಮದ ಮಾತನ್ನು ಕೇಳುತ್ತಿದ್ದರೆ, ನನಗೆ ಅತೀವ ಸಂತೋಷವಾಗುತ್ತಿದೆ. ನಿನ್ನನ್ನು ಪಡೆದ ನಾವೇ ಧನ್ಯರು. ಆದರೆ.........

©KTBS
Not to be republished

ಅಭಿಮನ್ಯು : ಆದರೆ...? ಹಾಗೆಂದರೇನು ದೊಡ್ಡಪ್ಪ. ನನ್ನ ಸಾಮರ್ಥ್ಯದ ಮೇಲೆ ನಿಮಗೆ ಶಂಕೆಯೇ? ನನ್ನ ಮೈಯಲ್ಲಿ ಹರಿಯುತ್ತಿರುವುದು ಕ್ಷತ್ರಿಯ ವಂಶದ ರಕ್ತ. ನಾನು ಜಗದ್ವಿಖ್ಯಾತ ಅರ್ಜುನನ ಮಗ.

ಧರ್ಮರಾಯ : ಅಹುದು ಮಗು, ನೀ ಹೇಳುತ್ತಿರುವ ಮಾತುಗಳಲ್ಲಿ ಸಂದೇಹವೇ ಇಲ್ಲ. ಆದರೆ ಈ ಘನ ಘೋರ ಯುದ್ಧವು ನಿನ್ನಂತಹ ಬಾಲಕನಿಗೆ ಸಲ್ಲದು ಕುಮಾರ.

ಅಭಿಮನ್ಯು : ಚಕ್ರವ್ಯೂಹವನ್ನು ಭೇದಿಸುವ ವಿದ್ಯೆಯನ್ನು ನಾನು ತಾಯಿಯ ಗರ್ಭದಲ್ಲಿರುವಾಗಲೇ ಶ್ರೀಕೃಷ್ಣ ಪರಮಾತ್ಮನಿಂದ ಕೇಳಿ ತಿಳಿದುಕೊಂಡಿದ್ದೇನೆ. ನನ್ನನ್ನು ಹರಸಿ ಕಳಿಸಿ ದೊಡ್ಡಪ್ಪ.

ಭೀಮಸೇನ : ಭಲೇ ಕುಮಾರ! ನಿನ್ನ ಪರಾಕ್ರಮದ ಮಾತುಗಳನ್ನು ಕೇಳುತ್ತಿದ್ದರೆ, ನೀನು ಚಕ್ರವ್ಯೂಹ ಭೇದಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ಧರ್ಮರಾಯ : ಇದೇನು ಭೀಮಸೇನ? ನೀನು ಹೇಳುತ್ತಿರುವುದು. ಅಭಿಮನ್ಯು ಇನ್ನೂ ಮಗು. ಅವನನ್ನು ಯುದ್ಧಕ್ಕೆ ಕಳಿಸುವುದು ನನಗೆ ಸರಿ ಕಾಣಿಸದು.

ಭೀಮಸೇನ : ಅಣ್ಣಾ! ನೀನು ಚಿಂತಿಸಬೇಡ, ಚಕ್ರವ್ಯೂಹವನ್ನು ಭೇದಿಸುವ ಸಾಮರ್ಥ್ಯ ವೀರ ಅಭಿಮನ್ಯುವಿನಲ್ಲಿದೆ.

ಧರ್ಮರಾಯ : ಆಯ್ತು ಭೀಮಸೇನ. ನಿನ್ನ ಮಾತಿನಂತೆ ಅಭಿಮನ್ಯುವನ್ನು ಯುದ್ಧಕ್ಕೆ ಕಳುಹಿಸಲು ನನ್ನ ಸಹಮತವಿದೆ. ನಾವೆಲ್ಲರೂ ಯುದ್ಧರಂಗದಲ್ಲಿ ವೀರ ಬಾಲಕನಿಗೆ ರಕ್ಷಾಕವಚದಂತಿರೋಣ.

ಅಭಿಮನ್ಯು : ಬಹಳ ಸಂತೋಷ ದೊಡ್ಡಪ್ಪ. ನನ್ನನ್ನು ಆಶೀರ್ವದಿಸಿ (ಎಂದು ಹೇಳಿ ಧರ್ಮರಾಯ, ಭೀಮಸೇನರ ಪಾದಗಳಿಗೆ ನಮಸ್ಕರಿಸಿ ಹೊರಡುವನು)

## ದೃಶ್ಯ ೨

*(ಸುಭದ್ರೆಯ ಅರಮನೆ. ಅಭಿಮನ್ಯು ತನ್ನ ತಾಯಿ ಸುಭದ್ರೆಯ ಪಾದಗಳಿಗೆ ಎರಗುವನು)*

ಅಭಿಮನ್ಯು : ಅಮ್ಮಾ ! ಈ ದಿನ ನಾನು ಕುರುಕ್ಷೇತ್ರ ಯುದ್ಧದಲ್ಲಿ ಚಕ್ರವ್ಯೂಹವನ್ನು ಭೇದಿಸಲು ದೊಡ್ಡಪ್ಪಂದಿರಾದ ಧರ್ಮರಾಯ ಹಾಗೂ ಭೀಮಸೇನರಿಂದ ಆಶೀರ್ವಾದ ಪಡೆದು ಬಂದಿದ್ದೇನೆ. ನೀನೂ ನನ್ನನ್ನು ಹರಸಿ ಕಳುಹಿಸಿಕೊಡು.

ಸುಭದ್ರೆ : (ದಿಗ್ಭ್ರಾಂತಳಾಗಿ ) ಇದೇನು ಕಂದಾ! ನೀನು ಯುದ್ಧರಂಗಕ್ಕೆ ಹೋಗುವೆಯಾ! ಅಲ್ಲಿ ಚಕ್ರವ್ಯೂಹವನ್ನು ಭೇದಿಸುವೆಯಾ?

ಅಭಿಮನ್ಯು : ಏಕಮ್ಮಾ? ಈ ಸುಭದ್ರಾನಂದನ ವೀರ ಅಭಿಮನ್ಯುವಿನ ಮೇಲೆ ನಿನಗೆ ಸಂದೇಹವೇ! ನನ್ನನ್ನು ಹರಸಿ ಕಳುಹಿಸಿಕೊಡಮ್ಮಾ.

ಸುಭದ್ರೆ : ಆಗಲಿ ಮಗು. ಶ್ರೀಕೃಷ್ಣ ಪರಮಾತ್ಮನ ಕೃಪೆ, ತಂದೆಯ ಶೌರ್ಯ ನಿನ್ನಲ್ಲಿರುವಾಗ ಸಂದೇಹದ ಮಾತೇ ಇಲ್ಲ. ಜಯಶಾಲಿಯಾಗಿ ಬಾ...ಮಗನೇ. ಹೋಗಿ ಬಾ ನಿನಗೆ ಮಂಗಳವಾಗಲಿ.

*(ಉತ್ತರೆಯ ಪ್ರವೇಶ)*


ಅಭಿಮನ್ಯು : ಬಾ ಉತ್ತರೇ ಏಕೆ ನಿನ್ನ ವದನ ಇಂದು ಖಿನ್ನವಾಗಿ ಕಾಣುತ್ತಿದೆಯಲ್ಲಾ?

ಉತ್ತರೆ : ಪ್ರಾಣಕಾಂತ! ನೀವು ಯುದ್ಧರಂಗಕ್ಕೆ ಹೋಗುವ ವಿಷಯ ತಿಳಿಯಿತು. ಅದಕ್ಕಾಗಿಯೇ ಈ ರೀತಿಯ ಖಿನ್ನತೆ .....

ಅಭಿಮನ್ಯು : ಚಿಂತಿಸಬೇಡ ಉತ್ತರೆ. ನಾನು ಈ ಯುದ್ಧದಲ್ಲಿ ಜಯಶಾಲಿಯಾಗಿ ಹಿಂದಿರುಗುತ್ತೇನೆ. ಧೈರ್ಯಗೆಡದೆ ನಗುಮುಖದಿಂದ ನನ್ನನ್ನು ಕಳಿಸಿಕೊಡು.

© KTBS Not to be republished

**ಉತ್ತರೆ :** ಆಗಲಿ, ಜಯವಿರುವ ತನಕ ಭಯವೇಕೆ? ಯುದ್ಧ ಕ್ಷತ್ರಿಯರ ಧರ್ಮ. ಹೋಗಿ ಬನ್ನಿ. ಆ ಪರಮಾತ್ಮ ನಿಮಗೆ ಒಳಿತು ಮಾಡಲಿ.



©KTBS Not to be republished

## ದೃಶ್ಯ ೩

*(ಅಭಿಮನ್ಯು ಸೂರ್ಯನಂತೆ ಪ್ರಕಾಶಿಸುತ್ತ ರಥವನ್ನೇರಿ ಯುದ್ಧಭೂಮಿಗೆ ಪ್ರವೇಶ ಮಾಡುತ್ತಾನೆ)*

**ಅಭಿಮನ್ಯು :** (ಸಾರಥಿಯನ್ನು ಕುರಿತು) ಸುಮಿತ್ರ, ಆದಷ್ಟು ಬೇಗ ನನ್ನನ್ನು ದ್ರೋಣಾಚಾರ್ಯರು ರಚಿಸಿರುವ ಚಕ್ರವ್ಯೂಹದ ಕಡೆ ಕರೆದುಕೊಂಡು ಹೋಗು.

*(ಭೀಮನೊಂದಿಗೆ ಪಾಂಡವರ ಸೈನ್ಯವು ಅಭಿಮನ್ಯುವನ್ನು ನೆರಳಿನಂತೆ ಹಿಂಬಾಲಿಸಿ ಬರುತ್ತದೆ.)*

**ಅಭಿಮನ್ಯು :** ಬನ್ನಿರಿ! ಬನ್ನಿರಿ! ಒಬ್ಬೊಬ್ಬರಾಗಿ ಬನ್ನಿ, ನಿಮ್ಮನ್ನೆಲ್ಲಾ ತರಗೆಲೆಗಳಂತೆ ತೂರಿ ಯಮಪುರಕ್ಕೆ ಕಳಿಸುತ್ತೇನೆ.

*(ದ್ರೋಣ, ಕರ್ಣ ಹಾಗೂ ಇತರ ಕೌರವ ಸೇನೆ ಸೇರಿ ಅಭಿಮನ್ಯುವಿನ ವೀರಾವೇಶ ನೋಡಿ ಆತನನ್ನು ಮುಗಿಸಲು ತಂತ್ರ ಹೂಡುವರು. ವೀರಾವೇಶದಿಂದ ಹೋರಾಡುತ್ತಿರುವಾಗ ಕೌರವರು ಹಿಂದಿನಿಂದ ಬಂದು ಅಭಿಮನ್ಯುವಿನ ಕೈಗಳನ್ನು ಕತ್ತರಿಸುವರು.)*

**ಅಭಿಮನ್ಯು :** ರಣಹೇಡಿಗಳೇ, ತಾಯಿಯ ಹಾಲುಂಡ ಯಾವುದೇ ಕ್ಷತ್ರಿಯ ಈ ಕೆಲಸ ಮಾಡಲಾರ. ವೀರಾವೇಶದಿಂದ ಎದುರಿಸಿ ಹೋರಾಡಿ ಸತ್ತು ಸ್ವರ್ಗ ಸೇರುವುದನ್ನು ಬಿಟ್ಟು ನರಕದ ದಾರಿ ಹಿಡಿಯುತ್ತೀರಾ? ನಿಮಗೆ ಧಿಕ್ಕಾರವಿರಲಿ.

**ದುರ್ಯೋಧನ :** ಸೈಂಧವರಾಜ ಬಿಡಬೇಡ, ಹೊಡೆ. ಕರ್ಣ, ಜಯದ್ರಥ ನೀವೆಲ್ಲರೂ ಅವನ ಮೇಲೆ ಒಟ್ಟಾಗಿ ಬೀಳಿರಿ.



*(ಅಭಿಮನ್ಯು ರಥದ ಚಕ್ರವನ್ನು ಕೈಯಲ್ಲಿ ತಿರುಗಿಸಿ ವೀರಾವೇಶದಿಂದ ಹೋರಾಡಿ ವೀರಮರಣ ಹೊಂದುವನು.)*


©KTBS Not to be republished

ಬೆಳೆಯುವ ಸಿರಿ ಮೊಳಕೆಯಲ್ಲಿ

## ಪದಗಳ ಅರ್ಥ

ಭೇದಿಸು – ಹೊಡೆ, ಮುರಿ, ಸೀಳು; ಆಶೀರ್ವದಿಸು – ಹರಸು; ಶಂಕೆ – ಸಂದೇಹ, ಸಂಶಯ; ವಿಖ್ಯಾತ – ಪ್ರಸಿದ್ಧವಾದ; ಯುದ್ಧ – ಕದನ, ಸಮರ, ಸಂಗ್ರಾಮ; ಎರಗು – ನಮಸ್ಕಾರ ಮಾಡು, ನಮಸ್ಕರಿಸು ; ದಿಗ್ಭ್ರಾಂತ – ಗಾಬರಿಗೊಳ್ಳು, ಕಸಿವಿಸಿಯಾಗು; ಸೂರ್ಯ– ನೇಸರ, ರವಿ ; ಸೇನೆ – ದಂಡು,ಸೈನ್ಯ; ಯಮಪುರ – ಯಮನಲೋಕ, ಮೃತ್ಯುಲೋಕ; ಮರಣ – ಜೀವ ಹೋಗುವಿಕೆ, ಸಾವು; ಘನಘೋರ – ಉಗ್ರವಾದ; ಭಯಂಕರವಾದ; ಚಿಂತಾಕ್ರಾಂತ – ಚಿಂತೆಗೊಳಗಾದ; ಸಂಹರಿಸು– ನಾಶಗೊಳಿಸು, ಕೊಲ್ಲು, ನಿರ್ನಾಮ ಮಾಡು; ಪ್ರಶಂಸೆ – ಹೊಗಳಿಕೆ, ಸ್ತುತಿ; ಪರಾಕ್ರಮ – ಕಲಿತನ, ಶೌರ್ಯ; ಸಹಮತ –ಒಮ್ಮತ; ಏಕಾಭಿಪ್ರಾಯ; ನಂದನ – ಮಗ, ಪುತ್ರ, ಕಂದ; ದಯೆ– ಕರುಣೆ, ಅನುಕಂಪ, ಕೃಪೆ; ಮಂಗಳ– ಶುಭ; ವದನ – ಮುಖ, ಮೋರೆ; ಖಿನ್ನ –ದುಃಖಿತನಾದ, ನೊಂದ;

ಪರಿಣಿತ – ಚತುರ, ನಿಪುಣ; ಹೇಡಿ– ಅಂಜುಬುರುಕ ಹೆದರುಪುಕ್ಕ; ತಂತ್ರ – ಉಪಾಯ ; ರಾಜೋಚಿತ – ಅರಸನಿಗೆ ಉಚಿತವಾದ, ರಾಜಯೋಗ್ಯವಾದ; ಧಿಕ್ಕಾರ – ನಿಂದೆ, ತಿರಸ್ಕಾರ; ಸಾಮರ್ಥ್ಯ – ದಕ್ಷತೆ, ಯೋಗ್ಯತೆ, ಬಲ. ಶಕ್ತಿ; ಅಪ್ರತಿಮ – ಅಸಾಮಾನ್ಯವಾದ; ಗರ್ಭ – ಬಸಿರು; ಹಿಂಬಾಲಿಸು – ಹಿಂದೆಬರು, ಅನುಸರಿಸು




## ಟಿಪ್ಪಣಿ

ಚಕ್ರವ್ಯೂಹ – ಒಂದು ಬಗೆಯ ಸೇನಾ ರಚನೆ.

ಕ್ಷತ್ರಿಯವಂಶ – ನಾಲ್ಕು ವರ್ಣಗಳಲ್ಲಿ ಒಂದು, ಯುದ್ಧದ ದೀಕ್ಷೆಯನ್ನು ತೆಗೆದುಕೊಂಡ ವರ್ಣ.

ಸಂಶಪ್ತಕರು – ಪರಸ್ಪರ ಶಪಥ ಮಾಡಿ ಯುದ್ಧ ಮಾಡುವ ವೀರರು.

ರಕ್ಷಾಕವಚ – ದೇಹದ ರಕ್ಷಣೆಗಾಗಿ ತೊಟ್ಟುಕೊಳ್ಳುವ ಉಕ್ಕಿನ ಅಂಗಿ.



## ಅಭ್ಯಾಸ

©KTBS Not to be republished

### ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ

೧. ಚಕ್ರವ್ಯೂಹವನ್ನು ರಚಿಸಿದವರು ಯಾರು?

........................................................................................................

೨. ಕೌರವರು–ಪಾಂಡವರು ಯಾರಿಂದ ಬಿಲ್ವಿದ್ಯೆ ಕಲಿತರು?

........................................................................................................

೩. ಅಭಿಮನ್ಯುವಿನ ತಂದೆಯ ಹೆಸರೇನು?

........................................................................................................

೪. ಕೌರವರಿಗೂ–ಪಾಂಡವರಿಗೂ ಯುದ್ಧ ಎಲ್ಲಿ ನಡೆಯಿತು?

........................................................................................................

### ಆ. ಕೊಟ್ಟಿರುವ ಮಾತುಗಳನ್ನು ಯಾರು? ಯಾರಿಗೆ ಹೇಳಿದರು?

೧. "ದೊಡ್ಡಪ್ಪ, ನೀವೇಕೆ ಇಂದು ಬಹಳ ಚಿಂತಾಕ್ರಾಂತರಾಗಿರುವಿರಿ"?

ಯಾರು? ..............................................................................................

ಯಾರಿಗೆ? ............................................................................................

೨. “ನಿನ್ನನ್ನು ಪಡೆದ ನಾವೇ ಧನ್ಯರು”

ಯಾರು? ..............................................................................................

ಯಾರಿಗೆ? ..............................................................................................

೩. “ಏನು ಕಂದಾ! ನೀನು ಯುದ್ಧದಲ್ಲಿ ಚಕ್ರವ್ಯೂಹವನ್ನು ಭೇದಿಸುವೆಯಾ?

ಯಾರು? ..............................................................................................

ಯಾರಿಗೆ? ..............................................................................................

## ಇ. ಹೊಂದಿಸಿ ಬರೆಯಿರಿ.

| ಅ | ಬ |
| --- | --- |
| ೧. ಸುಭದ್ರೆ | ಅಭಿಮನ್ಯುವಿನ ಹೆಂಡತಿ |
| ೨. ಉತ್ತರೆ | ಅಭಿಮನ್ಯುವಿನ ಗುರು |
| ೩. ಸುಮಿತ್ರ | ಅಭಿಮನ್ಯುವಿನ ದೊಡ್ಡಪ್ಪ |
| ೪. ಧರ್ಮರಾಯ | ಅಭಿಮನ್ಯುವಿನ ತಾಯಿ |
| | ಅಭಿಮನ್ಯುವಿನ ಸಾರಥಿ |

©KTBS Not to be republished

## ಈ. ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ.

೧. ಧರ್ಮರಾಯ, ಜಯದ್ರಥ, ಭೀಮಸೇನ, ಅರ್ಜುನ ..........................................

೨. ವಿಖ್ಯಾತ, ಕುಖ್ಯಾತ, ಹೆಸರುವಾಸಿ, ಪ್ರಸಿದ್ಧಿ ..........................................

೩. ಸೂರ್ಯ, ರವಿ, ಆರ್ಯ, ದಿನಕರ ..........................................

೪. ಅಭಿಮನ್ಯು, ಉತ್ತರೆ, ಸುಭದ್ರೆ, ಶಕುನಿ ..........................................

## ಉ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ಬರೆಯಿರಿ.

೧. ಸಂದೇಹ : ..............................................................................................

೨. ಜಯಶಾಲಿ : ..............................................................................................

೩. ನಮಸ್ಕರಿಸು : ..............................................................................................

೪. ವೀರಾವೇಶ : ..............................................................................................

## ಊ. ಎರಡು–ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಧರ್ಮರಾಯನು ಚಿಂತಾಕ್ರಾಂತನಾಗಲು ಕಾರಣವೇನು?

..........................................................................................

..........................................................................................

..........................................................................................

೨. ಸುಭದ್ರೆ ಅಭಿಮನ್ಯುವನ್ನು ಏನೆಂದು ಹರಸಿದಳು?

..........................................................................................

..........................................................................................

..........................................................................................

೩. ಅಭಿಮನ್ಯು ಉತ್ತರೆಯನ್ನು ಹೇಗೆ ಸಮಾಧಾನಪಡಿಸಿದನು?

..........................................................................................

..........................................................................................

..........................................................................................

೪. ಅಭಿಮನ್ಯು ಸಾರಥಿಯನ್ನು ಕುರಿತು ಏನು ಹೇಳಿದನು?

..........................................................................................

..........................................................................................

..........................................................................................

©KTBS Not to be republished




## ಅ. ಕೊಟ್ಟಿರುವ ವಿವರಣೆಯನ್ನು ಓದಿ, ಸೂಕ್ತ ಸ್ಥಳದಲ್ಲಿ ಲೇಖನ ಚಿಹ್ನೆ ಹಾಕಿ.

ಹೂದೋಟದಲ್ಲಿ ಎಷ್ಟೊಂದು ಹೂಗಳು ಅರಳಿವೆ ಕೆಂಪು ಗುಲಾಬಿ ಕಣ್ಮನ ಸೆಳೆಯುತ್ತಿದೆ ಏನಿದು ಶಬ್ದ ಓಹೋ ಸಂಪಿಗೆಯ ಕಂಪಿಗೆ ದುಂಬಿಗಳು ಝೇಂಕರಿಸುತ್ತಿವೆ ಮಲ್ಲಿಗೆ ಜಾಜಿ ಸುಗಂಧರಾಜ ಸೂರ್ಯಕಾಂತಿ ಚೆಂಡು ಹೂ ಅಬ್ಬಾ! ಬಗೆ ಬಗೆಯ ಹೂಗಳ ಲೋಕವೇ ಇಲ್ಲಿದೆ

**ಆ. ಮಾದರಿಯಲ್ಲಿ ಸೂಚಿಸಿರುವಂತೆ ಸೂಕ್ತ ಪದ ರಚಿಸಿ ಬರೆಯಿರಿ.**

ಮಾದರಿ : ನೀವು + ಏಕೆ = ನೀವೇಕೆ

೧. ನಾವು + ಏಕೆ = .........................

೨. ಅವರು + ಏಕೆ = .........................

೩. ಅವಳು + ಏಕೆ = .........................

೪. ಅದು + ಏಕೆ = .........................

**ಇ. ಒಗಟು ಬಿಡಿಸಿ ಉತ್ತರ ಬರೆಯಿರಿ.**

೧. ಚೋಟುದ್ದ ಹುಡುಗಿಗೆ, ಮಾರುದ್ದ ಜಡೆ .........................

೨. ಚಿಕ್ಕ ಬೋರನಿಗೆ ಬಗಲಲ್ಲಿ ಕತ್ತಿ .........................

೩. ಒಂಟಿ ಕಾಲು ಕೊಕ್ಕರೆ ಒಂಭೈನೂರು ತತ್ತಿ .........................

**ಈ. ಕೊಟ್ಟಿರುವ ಅಕ್ಷರ ಚೌಕದಲ್ಲಿ ಮಹಾಭಾರತದಲ್ಲಿ ಬರುವ ಪಾತ್ರಗಳ ಹೆಸರುಗಳಿವೆ. ಅವುಗಳನ್ನು ಕಂಡುಹಿಡಿದು ನಿಮ್ಮ ಅಭ್ಯಾಸ ಪುಸ್ತಕದಲ್ಲಿ ಪಟ್ಟಿ ಮಾಡಿ.**

©KTBS Not to be republished

| | | | | | |
|---|---|---|---|---|---|
| ಕ | ಜ | ಯ | ದ್ರು | ಥ | ತ |
| ಬ | ಸ | ನ | ಸ | ಅ | ಅ |
| ದು | ಡ | ಕ | ರ್ಣ | ಭಿ | ರ್ಜು |
| ಯೋ | ಉ | ತ್ತ | ರೆ | ಮ | ನ |
| ಧ | ರ್ಮ | ರಾ | ಯ | ನ್ಯು | ವ |
| ನ | ಗಾಂ | ಧಾ | ರಿ | ಭೀ | ಮ |
| ಳ | ಬ | ಶ | ಕು | ನಿ | ಕ |




**ಅ. ಈ ನಾಟಕದ ಪಾತ್ರಗಳನ್ನು ಹಂಚಿಕೊಂಡು ಶಿಕ್ಷಕರ ಮಾರ್ಗದರ್ಶನ ಪಡೆದು ತರಗತಿಯಲ್ಲಿ ಸ್ನೇಹಿತರ ಜೊತೆ ಸೇರಿ ಅಭಿನಯಿಸಿ.**

**ಆ. ಶಿಕ್ಷಕರ ಸಹಾಯದಿಂದ ಮಾದರಿಯಂತೆ ಪೌರಾಣಿಕ ವೀರ ಬಾಲಕರ ಪರಿಚಯವನ್ನು ಮಾಡಿ ಕೊಡಿ.**

ಮಾದರಿ : **ಲವ-ಕುಶ:** ರಾಮ - ಸೀತೆಯರ ಅವಳಿ ಮಕ್ಕಳು.
ರಾಮ-ಲಕ್ಷ್ಮಣರನ್ನು ಸೋಲಿಸಿದ ವೀರ ಬಾಲಕರು.

೧. ಏಕಲವ್ಯ - ..........................................................................

..........................................................................

೨. ಪ್ರಹ್ಲಾದ - ..........................................................................

..........................................................................

೩. ಬಭ್ರುವಾಹನ - ..........................................................................

..........................................................................

**ಇ. ಯೋಚಿಸಿ ಬರೆಯಿರಿ.**

೧. ಈ ನಾಟಕದಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು? ಏಕೆ?

..........................................................................

..........................................................................

..........................................................................

..........................................................................

..........................................................................

©KTBS Not to be republished

೨. ಅಭಿಮನ್ಯು ಯುದ್ಧಕ್ಕೆ ಹೋಗುತ್ತೇನೆ ಎಂದಾಗ ನೀನು ಧರ್ಮರಾಯನಾಗಿದ್ದರೆ ಏನು ಮಾಡುತ್ತಿದ್ದೆ?

..........................................................................

..........................................................................

..........................................................................

..........................................................................

..........................................................................




ನೀನೀಗ ಉಕ್ತಲೇಖನದ ಮೂಲಕ ಹೆಚ್ಚು ಬಳಕೆಯಲ್ಲಿರುವ ಲೇಖನ ಚಿಹ್ನೆಗಳನ್ನು ಬಳಸಿ ಬರೆಯುವುದನ್ನು ಕಲಿತುಕೊಂಡಿರುವೆಯಲ್ಲವೆ?



# ಪಾಠ – ೧೨
# ಪ್ರವಾಸ ಹೋಗೋಣ



C8G6K4

ಸಮಿತಿ ರಚನೆ –

**ಕಲಿಕೆಗೆ ದಾರಿ:**

ಇವು ಎಲ್ಲಿವೆ ? ಗುರುತಿಸಿ ಬರೆಯಿರಿ.



________________



________________



________________



________________



________________



________________

© KTBS Not to be republished

ಬೇಗೂರಿನ ಪ್ರಾಥಮಿಕ ಶಾಲೆಯ ಮಕ್ಕಳನ್ನು ಶಿಕ್ಷಕರು ಪ್ರವಾಸಕ್ಕೆ ಕರೆದುಕೊಂಡು ಹೋಗಲು ತೀರ್ಮಾನಿಸಿದರು. ಮಕ್ಕಳ ಇಚ್ಛೆಯಂತೆ ರೈಲಿನಲ್ಲಿ ಶ್ರವಣಬೆಳಗೊಳಕ್ಕೆ ಪ್ರವಾಸ ಹೊರಡಲು ಸಿದ್ಧರಾಗಿ ರೈಲುನಿಲ್ದಾಣದ ಹತ್ತಿರ ಬಂದರು.

ಶಿಕ್ಷಕರು : ಮಕ್ಕಳೇ, ಇಬ್ಬಿಬ್ಬರಂತೆ ಕೈ ಹಿಡಿದು ನನ್ನ ಹಿಂದೆ ಸಾಲಾಗಿ ಬನ್ನಿರಿ. ಈಗ ರೈಲು ನಿಲ್ದಾಣದ ಒಳಗೆ ಹೋಗೋಣ.

ಶಾಲಿನಿ : ಗುರುಗಳೆ ಇದೇನು? ಇಷ್ಟುದ್ದದ ಜನರ ಸಾಲು ಇದೆ.

ಶಿಕ್ಷಕರು : ಅದು ಟಿಕೇಟ್ ತೆಗೆದುಕೊಳ್ಳಲು ನಿಂತಿರುವವರ ಸಾಲು. ನಾನು ಸಹ ನಿಮ್ಮೆಲ್ಲರಿಗೂ ಟಿಕೇಟ್ ತೆಗೆದುಕೊಳ್ಳಲು ಹೋಗುತ್ತೇನೆ.

ಥಾಮಸ್ : ಗುರುಗಳೆ, ಇವರೆಲ್ಲರೂ ನಮ್ಮಂತೆಯೇ ಪ್ರವಾಸಕ್ಕೆ ಹೊರಟಿರುವವರೇ?



ಶಿಕ್ಷಕರು : ಅವರೆಲ್ಲಾ ಬೇರೆಬೇರೆ ಸ್ಥಳಗಳಿಗೆ ಹೋಗಲು ಟಿಕೇಟ್ ತೆಗೆದುಕೊಳ್ಳಲು ನಿಂತಿದ್ದಾರೆ.

ಕೌಸ್ತುಭ : ಎಲ್ಲರಿಗೂ ಒಂದೇ ಕಡೆ ಟಿಕೇಟ್ ಹೇಗೆ ಕೊಡ್ತಾರೆ?

ಶಿಕ್ಷಕರು : ಅಲ್ಲಿ ನೋಡಿ, ಟಿಕೇಟ್ ಕೌಂಟರಿನಲ್ಲಿ ಕುಳಿತಿರುವವರು ಕಂಪ್ಯೂಟರ್ ಮೂಲಕ ಕೇಳಿದ ಸ್ಥಳಗಳಿಗೆ ಟಿಕೇಟ್ ನೀಡುತ್ತಿದ್ದಾರೆ.

ಅಬ್ದುಲ್ : ಎಲ್ಲರೂ ಒಂದೇ ಕಡೆಯೇ ರೈಲು ಹತ್ತಬೇಕೇ ಗುರುಗಳೆ?

ಶಿಕ್ಷಕರು : ಇಲ್ಲಾ ಇಲ್ಲಾ. ಬೇರೆ ಬೇರೆ ರೈಲುಗಳಿಗೆ ನಿಗದಿತ ಫ್ಲಾಟ್‌ಫಾರಂಗಳಿರುತ್ತವೆ. ಅಲ್ಲಿಗೆ ರೈಲುಗಳು ಬಂದು ನಿಲ್ಲುತ್ತವೆ.

ಮಕ್ಕಳು : ಗುರುಗಳೆ, ಫ್ಲಾಟ್‌ಫಾರಂ ಅಂದರೇನು?

ಶಿಕ್ಷಕರು : ರೈಲು ಬಂದು ನಿಲ್ಲಲು ಮತ್ತು ಹೊರಡಲು ನಿಗದಿಪಡಿಸಿರುವ ಸ್ಥಳವನ್ನು ಫ್ಲಾಟ್‌ಫಾರಂ ಎನ್ನುತ್ತಾರೆ.

ಶಾಲಿನಿ : ಯಾವ ರೈಲು ಯಾವ ಪ್ಲಾಟ್‌ಫಾರಂನಲ್ಲಿ ನಿಲ್ಲುತ್ತದೆ ಎಂದು ಹೇಗೆ ತಿಳಿಯುವುದು?

ಶಿಕ್ಷಕರು : ರೈಲು ಬರುವ ಮೊದಲು ಧ್ವನಿವರ್ಧಕದಲ್ಲಿ ಯಾವ ರೈಲು ಯಾವ ಫ್ಲಾಟ್‌ಫಾರಂನಲ್ಲಿ ನಿಲ್ಲುತ್ತದೆ ಎಂಬುದನ್ನು ಬಿತ್ತರಿಸುತ್ತಿರುತ್ತಾರೆ. ಜೊತೆಗೆ ಹೊರಗಡೆ ಇರುವ ಸೂಚನಾ ಫಲಕದಲ್ಲಿಯೂ ನಮೂದಿಸಿರುತ್ತಾರೆ.

ಮುಖ್ಯಶಿಕ್ಷಕರು : ಎಲ್ಲರೂ ನಾಲ್ಕನೆಯ ಪ್ಲಾಟ್‌ಫಾರಂಗೆ ನಡೆಯಿರಿ. ಅಲ್ಲಿಂದ ನಮ್ಮ ರೈಲು ಹೊರಡುತ್ತದೆ.

ಶಿಕ್ಷಕರು : ಇಲ್ಲಿ ನೋಡಿ. ಪ್ರಯಾಣಿಕರ ಅನುಕೂಲಕ್ಕಾಗಿ ವಿಶ್ರಾಂತಿ ಕೊಠಡಿ, ಲಗೇಜು ರೂಮ್, ಶೌಚಾಲಯ, ಕುಡಿಯುವ ನೀರು, ಹೋಟೆಲ್ ಇತ್ಯಾದಿ ವ್ಯವಸ್ಥೆಗಳು ಇವೆ.

ಬೇಗಂ : ಗುರುಗಳೆ, ಈ ರೀತಿ ಕಬ್ಬಿಣದ ಕಂಬಿಗಳನ್ನು ಒಂದರ ಪಕ್ಕ ಒಂದರಂತೆ ಏಕೆ ಜೋಡಿಸಿದ್ದಾರೆ?

©KTBS Not to be republished

ಶಿಕ್ಷಕರು : ಅವು ರೈಲು ಕಂಬಿಗಳು. ಆ ಕಂಬಿಗಳ ಮೇಲೆಯೇ ರೈಲು ಚಲಿಸುತ್ತದೆ.

ಮಕ್ಕಳು : ಹಾಗಾದರೆ ರೈಲು ಹೋಗಬೇಕಾದರೆ ಕಂಬಿ ಇರಲೇಬೇಕೆ ಗುರುಗಳೆ?

ಶಿಕ್ಷಕರು : ಹೌದು. ಬಸ್ಸುಗಳಂತೆ ರಸ್ತೆಯಲ್ಲಿ ಇವು ಚಲಿಸುವುದಿಲ್ಲ. ರೈಲುಗಳಿಗೆ ಕಂಬಿಗಳು ಬೇಕೇ ಬೇಕು.

ಪಲ್ಲವಿ : ಕಂಬಿಗಳು ಇದ್ದಿದ್ದರೆ ನಮ್ಮ ಊರಿಗೂ ರೈಲು ಬರುತ್ತಿತ್ತು, ಅಲ್ಲವೇ ಗುರುಗಳೆ?

ಶಿಕ್ಷಕರು : ಹೌದು ಪಲ್ಲವಿ, ನೀನು ಹೇಳುತ್ತಿರುವುದು ಸರಿಯಾಗಿದೆ.

ಬೇಗಂ : ಗುರುಗಳೆ, ನಾನು ಇದುವರೆಗೂ ರೈಲನ್ನೇ ನೋಡಿರಲಿಲ್ಲ. ಅದರ ಶಬ್ದವನ್ನೂ ಕೇಳಿರಲಿಲ್ಲ. ಅಬ್ಬಬ್ಬಾ! ಎಷ್ಟು ಉದ್ದವಿದೆ ಈ ರೈಲು?




ಕೆನಡಿ : ನಿಮ್ಮದು ಯಾವೂರು ಮಕ್ಕಳೆ? ಎಲ್ಲಿಗೆ ಪ್ರವಾಸ ಹೊರಟಿರುವಿರಿ?

ಕಾವ್ಯ : ನಾವು ಬೇಗೂರು ಶಾಲೆಯವರು. ಶ್ರವಣಬೆಳಗೊಳಕ್ಕೆ ಪ್ರವಾಸ ಹೊರಟಿದ್ದೇವೆ.

ಕೆನಡಿ : ಹೌದೆ? ಎಲ್ಲರೂ ನೋಡಲೇಬೇಕಾದ ಸ್ಥಳ. ನಾನು ರಾಜು ಮತ್ತು ಮಧು ಈಗಾಗಲೇ ಶ್ರವಣಬೆಳಗೊಳಕ್ಕೆ ಹೋಗಿ ಬಂದೆವು.

ಅಬ್ದುಲ್ : ನಾವು ಇದೇ ಮೊದಲ ಬಾರಿಗೆ ಅಲ್ಲಿಗೆ ಹೋಗುತ್ತಿರುವುದು.

ಮಧು: ಎಂತಹ ಅದ್ಭುತವಾದ ತಾಣ. ನನಗಂತೂ ತುಂಬ ಖುಷಿಯಾಯಿತು.

ಕೆನಡಿ : ಅಲ್ಲಿನ ಏಕಶಿಲಾ ಗೊಮ್ಮಟಮೂರ್ತಿ, ಆ ಬೆಟ್ಟದ ಮೇಲಿಂದ ಕಾಣುವ ಪ್ರಕೃತಿ ಸೌಂದರ್ಯವನ್ನು ನೋಡಲು ಎರಡು ಕಣ್ಣುಗಳು ಸಾಲದು.

*(ಮಕ್ಕಳ ಮಾತುಗಳನ್ನು ಕೇಳುತ್ತಿದ್ದ ಕೆನಡಿ, ಮಧು, ರಾಜು, ಮಕ್ಕಳೊಂದಿಗೆ ಸಂಭಾಷಣೆಯಲ್ಲಿ ತೊಡಗಿದರು.)*

ಮಕ್ಕಳು : ಬೆಟ್ಟ ಹತ್ತುವಾಗ ನಿಮಗೆ ಕಷ್ಟ ಅನಿಸಲಿಲ್ಲವೇ?

ಮಧು : ಬೆಟ್ಟ ಹತ್ತೋ ಹುಮ್ಮಸ್ಸಿನಲ್ಲಿ ಕಷ್ಟ ಗೊತ್ತಾಗಲೇ ಇಲ್ಲ.

ಬೇಗಂ : ಅಣ್ಣಾ ! ಬೆಟ್ಟಕ್ಕೆ ಎಷ್ಟು ಮೆಟ್ಟಿಲುಗಳಿವೆ?

ಮಧು : ೬೫೦ ಮೆಟ್ಟಿಲುಗಳಿವೆ ಎಂದು ಅಲ್ಲಿಯೇ ಬರೆದಿದೆಕಣಮ್ಮ.

ಕೌಸ್ತುಭ : ಬೆಟ್ಟದ ಮೇಲೆ ನೀವು ಏನೇನು ನೋಡಿದಿರಿ?

ಮಧು : ಮಕ್ಕಳೇ, ಬೆಳಗೊಳ ಬೆಟ್ಟದಲ್ಲಿ ಭರತ, ಬಾಹುಬಲಿ ಹಾಗೂ ಇತರ ತೀರ್ಥಂಕರರ ಮೂರ್ತಿಗಳನ್ನು ನೋಡಿದೆವು. ಅವುಗಳನ್ನು ನೋಡುತ್ತಿದ್ದರೆ ಭಕ್ತಿಯು ಉಕ್ಕಿ ಬರುತ್ತದೆ. ಆ ಮೂರ್ತಿಗಳ ಮುಖದಲ್ಲಿ ಶಾಂತತೆಯ ಭಾವನೆಯು ಎದ್ದು ಕಾಣುತ್ತದೆ. ಅಲ್ಲಿ ಬಸದಿಗಳೂ ಸಹ ಇವೆ.

ಕಾವ್ಯ : ಗುರುಗಳೇ! ಅವರು ಹೇಳಿದ ಸ್ಥಳಗಳ ಬಗ್ಗೆ ನಮಗೆ ಅಲ್ಲಿಗೆ ಹೋದ ಮೇಲೆ ತಿಳಿಸಿಕೊಡಿ.

ಶಿಕ್ಷಕರು : ನಾವು ಈಗ ಅಲ್ಲಿಗೇ ಹೋಗುತ್ತಿದ್ದೇವಲ್ಲ. ಇನ್ನು ಚೆನ್ನಾಗಿ ನಿಮಗೆ ತಿಳಿಸಿಕೊಡುತ್ತೇವೆ.

ಕಾರ್ತಿಕ್: ಅದೋ ರೈಲು ಬಂದೇ ಬಿಟ್ಟಿತು.

ರಾಜು : ನಿಧಾನವಾಗಿ ಹೋಗಿ. ಅವಸರ ಬೇಡ. ರೈಲು ಇನ್ನೂ ಹತ್ತು ನಿಮಿಷ ಇಲ್ಲಿ ನಿಲ್ಲುತ್ತದೆ.

ಶಿಕ್ಷಕರು : ನಿಲ್ಲಿ! ನಿಲ್ಲಿ! ನಾವು ಆರನೇ ಬೋಗಿ ಹತ್ತಬೇಕು. ಅದು ಎಲ್ಲಿ ನಿಲ್ಲುತ್ತದೆ ನೋಡೋಣ.

ಮಕ್ಕಳು : ಇಲ್ಲಿ ನೋಡಿ ಗುರುಗಳೆ. ಆರು ಎಂದು ಬರೆದಿರುವ ಬೋಗಿ ಮುಂದೆ ಹೋಯಿತು.

ಶಿಕ್ಷಕರು : ಸರಿ ಬನ್ನಿ, ಅಲ್ಲಿಗೆ ಹೋಗಿ ಹತ್ತಿಕೊಳ್ಳೋಣ.


*(ಎಲ್ಲರೂ ರೈಲು ಹತ್ತಿದರು. ಚುಕ್ ಬುಕ್ ಚುಕ್ ಬುಕ್ ಎಂದು ಶಬ್ದ ಮಾಡುತ್ತಾ ರೈಲು ಹೊರಟಿತು)*

©KTBS Not to be republished

**ದೇಶ ತಿರುಗು – ಕೋಶ ಓದು**

## ಪದಗಳ ಅರ್ಥ

ಕಂಪ್ಯೂಟರ್ – ಗಣಕಯಂತ್ರ; ಶೌಚಾಲಯ – ಕಕ್ಕಸುಮನೆ; ಆಲಿಸು – ಮನಸ್ಸಿಟ್ಟು ಕೇಳು, ಕಿವಿಗೊಟ್ಟು ಕೇಳು; ಫೋಟೋ – ಛಾಯಾಚಿತ್ರ, ಭಾವಚಿತ್ರ; ಆಯಾಸ – ಬಳಲಿಕೆ, ಶ್ರಮ; ಚುಕ್ ಬುಕ್ ಚುಕ್ ಬುಕ್ – ರೈಲಿನ ಶಬ್ದ, ಸದ್ದು; ಖುಷಿ – ಸಂತೋಷ, ಹಿಗ್ಗು; ವ್ಯವಸ್ಥೆ – ಏರ್ಪಾಡು, ಸಜ್ಜು; ಇಚ್ಛೆ – ಅಪೇಕ್ಷೆ, ಆಸೆ.



## ಟಿಪ್ಪಣಿ

ಟಿಕೇಟ್ – ಪ್ರಯಾಣ ಅಥವಾ ಪ್ರವೇಶಕ್ಕಾಗಿ (ಹಣಪಡೆದು) ಅನುಮತಿ ನೀಡುವ ಚೀಟಿ.

ಟಿಕೇಟ್ ಕೌಂಟರ್– ಪ್ರಯಾಣ ಅಥವಾ ಪ್ರವೇಶಕ್ಕಾಗಿ ಅನುಮತಿ ನೀಡುವ ಚೀಟಿಕೊಡುವ ಜಾಗ.

ಫ್ಲಾಟ್‌ಫಾರಂ – ರೈಲು ಬಂದು ನಿಲ್ಲಲು ಮತ್ತು ಹೊರಡಲು ನಿಗದಿಪಡಿಸಿರುವ ಜಾಗ.


ಲಗೇಜ್‌ರೂಮ್ – ವಸ್ತು ಅಥವಾ ಇತರೆ ಸಾಮಗ್ರಿಗಳನ್ನು ಇಡುವ ಕೊಠಡಿ.

ಭರತ – ಭಾರತವನ್ನಾಳಿದ ಒಬ್ಬ ಪ್ರಸಿದ್ಧ ಚಕ್ರವರ್ತಿ, ಬಾಹುಬಲಿಯ ಅಣ್ಣ.

ಬಸದಿ – ಜೈನ ದೇವಾಲಯ

ರೈಲು ಕಂಬಿ – ರೈಲು ಹೋಗುವುದಕ್ಕೆ ಜೋಡಿಸಿರುವ ಕಂಬಿಗಳು

ಅಬ್ಬಬ್ಬಾ – ಆಶ್ಚರ್ಯ, ಮೆಚ್ಚುಗೆ, ತಿರಸ್ಕಾರ ಇತ್ಯಾದಿಗಳನ್ನು ಸೂಚಿಸುವ ಒಂದು ಶಬ್ದ.



## ಅಭ್ಯಾಸ

©KTBS Not to be republished

**ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಮಕ್ಕಳೆಲ್ಲರು ಎಲ್ಲಿಗೆ ಪ್ರವಾಸ ಹೋಗಲು ಸಿದ್ಧರಾದರು ?

..............................................................................................

೨. 'ಫ್ಲಾಟ್‌ಫಾರಂ' ಎಂದರೇನು?

..............................................................................................

೩. ರೈಲ್ವೆ ನಿಲ್ದಾಣದಲ್ಲಿ ಮಕ್ಕಳು ಯಾರ ಜೊತೆ ಸಂವಾದ ನಡೆಸಿದರು?

..............................................................................................

೪. ರೈಲು ಯಾವ ಶಬ್ದ ಮಾಡುತ್ತಾ ಚಲಿಸುತ್ತದೆ?

..............................................................................................

**ಆ. ಎರಡು/ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಬೆಳಗೊಳ ಬೆಟ್ಟದಲ್ಲಿ ಮೂರ್ತಿಗಳನ್ನು ನೋಡುತ್ತಿದ್ದರೆ ಭಕ್ತಿ ಏಕೆ ಉಕ್ಕಿ ಬರುತ್ತದೆ?

..........................................................................................

..........................................................................................

..........................................................................................

೨. ರೈಲು ನಿಲ್ದಾಣದಲ್ಲಿ ಏನೇನು ಸೌಲಭ್ಯಗಳಿರುತ್ತವೆ?

..........................................................................................

..........................................................................................

..........................................................................................

**ಇ. ಕೊಟ್ಟಿರುವ ಮಾತನ್ನು ಯಾರು? ಯಾರಿಗೆ ಹೇಳಿದರು.?**

೧. "ನಿಮ್ಮದು ಯಾವೂರು ಮಕ್ಕಳೆ?"

ಯಾರು? ..........................................................................

ಯಾರಿಗೆ? ..........................................................................

೨. "ಬೆಟ್ಟ ಹತ್ತುವಾಗ ನಿಮಗೆ ಕಷ್ಟ ಅನಿಸಲಿಲ್ಲವೇ?"

ಯಾರು? ..........................................................................

ಯಾರಿಗೆ? ..........................................................................

೩. "ಅದೋ ರೈಲು ಬಂದೇ ಬಿಟ್ಟಿತು."

ಯಾರು? ..........................................................................

ಯಾರಿಗೆ? ..........................................................................

©KTBS Not to be republished

**ಈ. ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.**

೧. ಇವರೆಲ್ಲರೂ ನಮ್ಮಂತೆಯೇ.................................... ಹೊರಟಿರುವವರೆ ಗುರುಗಳೆ.

(೧. ಪ್ರಯಾಣಕ್ಕೆ  ೨. ಪ್ರವಾಸಕ್ಕೆ  ೩. ಕೆಲಸಕ್ಕೆ  ೪. ಸ್ಥಳಗಳಿಗೆ)

೨. ಕಂಬಿಗಳ ಮೇಲೆ .................................... ಚಲಿಸುತ್ತದೆ.

(೧. ಬಸ್ಸು  ೨. ರೈಲು  ೩. ವಿಮಾನ  ೪. ದೋಣಿ)

೩. ಮೂರ್ತಿಗಳ ಮುಖದಲ್ಲಿ ....................................ಯ ಭಾವನೆಯು ಎದ್ದು ಕಾಣುತ್ತದೆ.

(೧. ಕ್ರೂರತೆ  ೨. ಶಾಂತತೆ  ೩. ವಿಧೇಯತೆ  ೪. ಗಂಭೀರತೆ)

## ಉ. ಸ್ಥಳ ಹಾಗೂ ಸ್ಥಳ ವಿಶೇಷಗಳನ್ನು ಪರಸ್ಪರ ಹೊಂದಿಸಿ ಬರೆಯಿರಿ

| ಅ | ಆ | |
|---|---|---|
| ೧. ಹಂಪಿ | ಗೊಮ್ಮಟೇಶ್ವರ ವಿಗ್ರಹ | ................................. |
| ೨. ಶ್ರವಣಬೆಳಗೊಳ | ಕಲ್ಲಿನರಥ | ................................. |
| ೩. ವಿಜಯಪುರ | ವಿಧಾನಸೌಧ | ................................. |
| ೪. ಬೆಂಗಳೂರು | ಗೋಲ್‌ಗುಂಬಜ್ | ................................. |
| | ತಾಜ್‌ಮಹಲ್ | |




## ಅ. ಮಾದರಿಯಲ್ಲಿ ಸೂಚಿಸಿರುವಂತೆ ಪ್ರಶ್ನಾರ್ಥಕ ವಾಕ್ಯ ರಚಿಸಿ.

ಮಾದರಿ : ವಿಧಾನಸೌಧ ಬೆಂಗಳೂರಿನಲ್ಲಿದೆ.

ವಿಧಾನಸೌಧ ಯಾವ ಊರಿನಲ್ಲಿದೆ?

©KTBS Not to be republished

೧. ಮಕ್ಕಳು ಮೈಸೂರಿಗೆ ಪ್ರವಾಸ ಹೋದರು.

..........................................................................................

೨. ರೈಲುಗಳು ಕಂಬಿಗಳ ಮೇಲೆ ಚಲಿಸುತ್ತವೆ.

..........................................................................................

೩. ಮೇರಿ ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದಾಳೆ.

..........................................................................................

## ಆ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ಬರೆಯಿರಿ.

ಪ್ರವಾಸ – ..........................................................................

ಸಂಭಾಷಣೆ – ..........................................................................

ಅದ್ಭುತ – ..........................................................................

ನಮಸ್ಕರಿಸು – ..........................................................................

## ಇ. ಸ್ವೀಕೃತ (ಬಳಕೆಯಲ್ಲಿರುವ) ಪದ ರೂಪ ಗಮನಿಸಿ.

| | | |
|---|---|---|
| ಪ್ಲೇಟ್ | ಕ್ಲಾಸ್ | ಫ್ಲಾಟ್‌ಫಾರಂ |
| ಕ್ಲಾರ್ಕ್ | ಸ್ಕ್ರೂ | ಟಿಕೆಟ್‌ಕೌಂಟರ್ |
| ಲಗೇಜ್‌ರೂಮ್ | ಫೋಟೋ | ಬ್ಯಾಗ್ |
| ಕಂಪ್ಯೂಟರ್ | ಸ್ಕೂಲ್ | ಪೊಲೀಸ್ |
| ರೈಲ್ | ಡ್ರೆಸ್ | ಇಂಜಿನಿಯರ್ |
| ಡಾಕ್ಟರ್ | ಕಂಡಕ್ಟರ್ | ಡ್ರೈವರ್ |

## ಈ. ಮಾದರಿಯಲ್ಲಿ ಸೂಚಿಸಿರುವಂತೆ ಸೂಕ್ತ ಪದ ರಚಿಸಿ ಬರೆಯಿರಿ.

**ಮಾದರಿ :** ಕೇಳು – ಕೇಳಿಯಾನು – ಕೇಳಿಯಾರು

ಹೇಳು : ........................................ ........................................

ಹೋಗು : ........................................ ........................................

ಬೇಡು : ........................................ ........................................

ಮಾಡು : ........................................ ........................................

## ಉ. ಮಾದರಿಯಂತೆ ಪದ ಬಳ್ಳಿ ರಚಿಸಿ


**ಮಾದರಿ :** ಮರ–ರಸ–ಸರ–ರಥ

ಜನಕ : ............................ ............................ ............................

ವನಜ : ............................ ............................ ............................

ಭವನ : ............................ ............................ ............................

©KTBS Not to be republished




## ೧. ನೀವು ಪ್ರವಾಸದಲ್ಲಿ ನೋಡಿದ ಸ್ಥಳಗಳ ಹೆಸರುಗಳನ್ನು ಪಟ್ಟಿ ಮಾಡಿ

................................................................................................................................

................................................................................................................................

................................................................................................................................

................................................................................................................................

೨. ನೀವು ನೋಡಿರುವ ವಾಹನಗಳ ಚಿತ್ರಗಳನ್ನು ಸಂಗ್ರಹಿಸಿ ಚಿತ್ರಕೋಶ ಸಿದ್ಧಪಡಿಸು.

೩. ಚಿತ್ರಗಳನ್ನು ಗಮನಿಸಿ. ಇಬ್ಬರ ನಡುವೆ ನಡೆಯುತ್ತಿರಬಹುದಾದ ಸಂಭಾಷಣೆಗಳನ್ನು ಊಹಿಸಿ ಬರೆಯಿರಿ.



ಚಿತ್ರ – ೧

©KTBS Not to be republished

ವೈದ್ಯ : ..............................................................................................

ರೋಗಿ : ..............................................................................................

ವೈದ್ಯ : ..............................................................................................

ರೋಗಿ : ..............................................................................................

ವೈದ್ಯ : ..............................................................................................

ರೋಗಿ : ..............................................................................................

ವೈದ್ಯ : ..............................................................................................

ರೋಗಿ : ..............................................................................................



ಚಿತ್ರ – ೨

©KTBS Not to be republished

ಕಂಡಕ್ಟರ್ : ..........................................................................................

ಪ್ರಯಾಣಿಕ : ..........................................................................................

ಕಂಡಕ್ಟರ್ : ..........................................................................................

ಪ್ರಯಾಣಿಕ : ..........................................................................................

ಕಂಡಕ್ಟರ್ : ..........................................................................................

ಪ್ರಯಾಣಿಕ : ..........................................................................................

**೪. ಯಾರು–ಯಾವ ಮಾತನ್ನು ಹೇಳಿರಬಹುದು? ಗೆರೆ ಎಳೆದು ಹೊಂದಿಸು.**

| ಅ | ಬ |
|---|---|
| ೧. ಶಿಕ್ಷಕ | ಅಮ್ಮಾ ಭಿಕ್ಷೆ ನೀಡಿ |
| ೨. ದರ್ಜಿ | ಹೊಲಕ್ಕೆ ಮಧ್ಯಾಹ್ನ ಬುತ್ತಿ ತಾ |
| ೩. ರೈತ | ಮಾರಿಗೆ ಹತ್ತು ರೂಪಾಯಿ |
| ೪. ಭಿಕ್ಷುಕ | ಈ ಪಾಠ ಓದಿಕೊಂಡು ಬನ್ನಿ |
| ೫. ಹೂವಾಡಗಿತ್ತಿ | ನಿನಗೆ ಅಂಗಿ ಹೊಲಿಯಲು ೨ ಮೀಟರ್ ಬಟ್ಟೆ ಬೇಕು |

**೫. ತರಗತಿಯಲ್ಲಿನ ಎಲ್ಲ ಮಕ್ಕಳು ಸೇರಿ ಶಿಕ್ಷಕರ ಸಹಾಯದಲ್ಲಿ ಅಂತ್ಯಾಕ್ಷರಿ (ಹಾಡು, ಪದ, ಹೆಸರು ಇತ್ಯಾದಿ) ಆಟ ಆಡಿ.**




ನೀನೀಗ ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆ ಮತ್ತು ಸಂವಾದಗಳನ್ನು ಆಲಿಸಿ ಅರ್ಥಮಾಡಿಕೊಳ್ಳ ಬಲ್ಲೆಯಲ್ಲವೇ?

©KTBS Not to be republished

R3F3B3

## ಪಾಠ ೧೩

# ಬಾವಿಯಲ್ಲಿ ಚಂದ್ರ (ಪದ್ಯ)

**ಕಲಿಕೆಗೆ ದಾರಿ:**
ನಿಮಗೆ ತಿಳಿದಿರುವ ಪರಿಸರದ ಹಾಡನ್ನು ಸಂಗ್ರಹಿಸಿ. ತರಗತಿಯಲ್ಲಿ ಹಾಡಿ.



ತಿಂಗಳು ಬೆಳಕಿನ ಇರುಳಿನಲಂದು
ಅಮ್ಮನು ಕೆಲಸದೊಳಿರುತಿರೆ ಕಂಡು
ಗೋಪಿಯು ಪುಟ್ಟುವು ಹೊರಗಡೆ ಬಂದು
ಬಾವಿಗೆ ಇಣುಕಿದರು.

ಬಾವಿಲಿ ಚಂದ್ರನ ಬಿಂಬವ ಕಂಡು
ಚಂದ್ರನು ಬಾವಿಗೆ ಬಿದ್ದನು ಎಂದು
ಅಯ್ಯೋ! ಪಾಪವೆ! ಎನ್ನುತಲೊಂದು
ಕೊಕ್ಕೆಯ ಹುಡುಕಿದರು.

ಚಂದ್ರನ ಮೇಲಕೆ ಎತ್ತಲಿಕೆಂದು
ಬಾವಿಯ ಹಗ್ಗಕೆ ಕೊಕ್ಕೆಯ ಬಿಗಿದು
ದೂರದಿ ಗೋಪಿಯ ನಿಲ್ಲಿಸಿ ಪುಟ್ಟು
ಹಗ್ಗವನಿಳಿಸಿದನು.

ಹಗ್ಗದ ಕೊಕ್ಕೆಯು ಕಲ್ಲಿಗೆ ಸಿಕ್ಕಿ
ಪುಟ್ಟುವು ಚಂದ್ರನು ಸಿಕ್ಕೇ ಸಿಕ್ಕ
ಎನ್ನುತ ತುಂಬಾ ಬಲದಿಂದೆಳೆಯೆ
ಹಗ್ಗವು ತುಂಡಾಯ್ತು.

ಎಳೆತದ ರಭಸಕೆ ಪುಟ್ಟುವು ಬಿದ್ದ
ಮೆಲ್ಲನೆ ಮನೆ ಕಡೆ ನೋಡುತಲೆದ್ದ
ತಂಗಿಗೆ ಆಗಸ ತೋರುತಲೆಂದ
"ಗೋಪೀ ನೋಡಲ್ಲಿ!"

ಚಂದ್ರನ ಮೇಲಕೆ ಏರಿಸಿಬಿಟ್ಟೆ
ನಮ್ಮಯ ದೇವರ ಬದುಕಿಸಿಕೊಟ್ಟೆ
ಅಮ್ಮಗೆ ಗೊತ್ತಾದರೆ ನಾ ಕೆಟ್ಟೆ
ಎಂದೋಡಿದ ಪುಟ್ಟು.

– ಬಿ. ಎಂ. ಶರ್ಮ


©KTBS Not to be republished

| ಸರಿಯಾಗಿ ಯೋಚಿಸಿ ಕೆಲಸ ಮಾಡಬೇಕು |
|---|



## ಪದಗಳ ಅರ್ಥ

ತಿಂಗಳು – ಚಂದ್ರ; ತಿಂಗಳು ಬೆಳಕು – ಹುಣ್ಣಿಮೆಯ ಬೆಳಕು; ಬಿಂಬ – ನೀರಿನಲ್ಲಿ ಅಥವಾ ಕನ್ನಡಿಯಲ್ಲಿ ಕಂಡಾಗ ಕಾಣುವ ನಮ್ಮ ರೂಪ; ಕೊಕ್ಕೆ – ಯಾವುದನ್ನಾದರೂ ಹಿಡಿದು ಎಳೆಯಲು ಬಳಸುವ ಲೋಹದ ಅಥವಾ ಮರದ ಸಾಧನ; ರಭಸ – ವೇಗ; ಆಗಸ – ಆಕಾಶ, ಬಾನು; ಮೆಲ್ಲನೆ – ನಿಧಾನವಾಗಿ.



## ಅಭ್ಯಾಸ

**ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಗೋಪಿ, ಪುಟ್ಟು ಬಾವಿಯಲ್ಲಿ ಏನು ನೋಡಿದರು?

..........................................................................................

೨. ಕೊಕ್ಕೆಯನ್ನು ಏಕೆ ತಂದರು?

........................................................................................................

೩. ಪುಟ್ಟು ಏಕೆ ಬಿದ್ದನು?

........................................................................................................

೪. ಚಂದ್ರನು ಎಲ್ಲಿದ್ದನು?

........................................................................................................

೫. ತಾಯಿಗೆ ಪುಟ್ಟು ಏಕೆ ಅಂಜಿದನು?

........................................................................................................

## ಆ. ಎರಡು–ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ

೧. ಬಾವಿಯಲ್ಲಿ ಚಂದ್ರನ ಬಿಂಬ ನೋಡಿದಾಗ ಪುಟ್ಟು ಏನು ಮಾಡಿದನು?

........................................................................................................

........................................................................................................

........................................................................................................

©KTBS Not to be republished

೨. ಬಾವಿಗೆ ಕೊಕ್ಕೆ ಇಳಿಸಿ ಎಳೆದಾಗ ಏನಾಯಿತು?

........................................................................................................

........................................................................................................

........................................................................................................

## ಇ. ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ

೧. ಪುಟ್ಟುವು ಎಳೆತದ ಬಿದ್ದ ರಭಸಕೆ.

........................................................................................................

೨. ಗೊತ್ತಾದರೆ ಕೆಟ್ಟೆ ಅಮ್ಮಗೆ ನಾ.

........................................................................................................

೩. ಮನೆ ಮೆಲ್ಲನೆ ನೋಡುತಲೆದ್ದ ಕಡೆ.

........................................................................................................

೪. ಬಾವಿಗೆ ಎಂದು ಚಂದ್ರನು ಬಿದ್ದನು.

........................................................................................................

**ಈ. ಈ ಪದ್ಯವನ್ನು ಪೂರ್ಣಗೊಳಿಸಿ.**

ಚಂದ್ರನ ಮೇಲಕೆ ....................
............................ ಸಿಕ್ಕೇ ಸಿಕ್ಕ
ಎನ್ನುತ ................................
.................................... ತುಂಡಾಯ್ತು

**ಉ. ಈ ಪದ್ಯದಲ್ಲಿ ಬರುವ ಮೂರು ಅಕ್ಷರದ ಪದಗಳನ್ನು ಹುಡುಕಿ ಬರೆಯಿರಿ**

| | | | |
|---|---|---|---|
| .......................... | .......................... | .......................... | .......................... |
| .......................... | .......................... | .......................... | .......................... |
| .......................... | .......................... | .......................... | .......................... |
| .......................... | .......................... | .......................... | .......................... |

**ಊ. "ಚ" ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಬರೆಯಿರಿ**

| | | | | |
|---|---|---|---|---|
| **ಮಾದರಿ :** ಬಟ್ಟೆ ನೇಯ್ಗೆ ಮಾಡಲು ಬಳಸುವ ಸಾಧನ | ಚ | ರ | ಕ | |
| ೧. ಸುರುಳಿಯಾಕಾರದಂತಿರುವ ಎಣ್ಣೆಯಲ್ಲಿ ಕರೆದ ತಿಂಡಿ | | | | |
| ೨. ಅನ್ನ ತಿನ್ನಲು ನೀನಿದನ್ನು ಬಳಸುತ್ತೀಯ | | | | |
| ೩. ನಾಲ್ಕು ಸೈನ್ಯಬಲದೊಂದಿಗೆ ಆಡುವ ಒಳಾಂಗಣ ಆಟ | | | | |
| ೪. ಗಾಂಧೀಜಿಯವರು ಸ್ವಾತಂತ್ರ್ಯಕ್ಕಾಗಿ ಮಾಡಿದ ಮುಷ್ಕರ | | | | |

©KTBS Not to be republished




**ಅ. ಮಾದರಿಯಲ್ಲಿ ಸೂಚಿಸಿರುವಂತೆ ಸೂಕ್ತಪದ ರಚಿಸಿ ಬರೆದು ಸ್ಪಷ್ಟವಾಗಿ ಓದಿ.**

| | | | | |
|---|---|---|---|---|
| **ಮಾದರಿ :** ಮರ | + | ಗಳು | = | ಮರಗಳು |
| ೧. ಮನೆ | + | ಗಳು | = | ............................ |
| ೨. ಚಿತ್ರ | + | ಗಳು | = | ............................ |
| ೩. ಹಕ್ಕಿ | + | ಗಳು | = | ............................ |
| ೪. ಪುಸ್ತಕ | + | ಗಳು | = | ............................ |
| ೫. ನದಿ | + | ಗಳು | = | ............................ |

ಆ. ಈ ಪದ್ಯದಲ್ಲಿ ಬರುವ ಒತ್ತಕ್ಷರ ಪದಗಳನ್ನು ಪಟ್ಟಿಮಾಡಿ.

.......................... .......................... .......................... ..........................

.......................... .......................... .......................... ..........................

.......................... .......................... .......................... ..........................




ಅ. 'ಅ' ಮತ್ತು 'ಆ' ಪಟ್ಟಿಯಲ್ಲಿರುವ ಶಬ್ದಗಳನ್ನು ಜೋಡಿಸಿ ಕವಿತೆಯ ಸಾಲುಗಳನ್ನು ಪೂರ್ತಿಗೊಳಿಸಿ.

| ಅ | ಆ |
|---|---|
| ತಿಂಗಳು ಬೆಳಕಿನ | ಬದುಕಿಸಿಕೊಟ್ಟೆ |
| ಚಂದ್ರನ ಮೇಲಕೆ | ತೋರುತಲೆಂದ |
| ಪುಟ್ಟುವು ಚಂದ್ರನು | ಎತ್ತಲಿಕೆಂದು |
| ತಂಗಿಗೆ ಆಗಸ | ಸಿಕ್ಕೇ ಸಿಕ್ಕ |
| ನಮ್ಮೆಯ ದೇವರ | ಇರುಳಿನಲಂದು |

©KTBS Not to be republished

ಆ. "ದುಡುಕಿದರೆ ಫಲವಿಲ್ಲ" – ಇದು ಒಂದು ಗಾದೆ ಮಾತು. ಇದೇ ಅರ್ಥದ ಇನ್ನಷ್ಟು ಗಾದೆ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

..........................................................................................................

..........................................................................................................

..........................................................................................................

..........................................................................................................

..........................................................................................................

**ಯೋಚಿಸಿ ಉತ್ತರಿಸಿ:**

**ಅ. ರಾತ್ರಿಯ ಆಗಸದಲ್ಲಿ ಮೂಡಿಬರುವ ಚಂದ್ರ, ತಾರೆಗಳು, ತಿಂಗಳು ಬೆಳಕಿನಲ್ಲಿ ಕಾಣುವ ಗಿಡಮರಬಳ್ಳಿಗಳು – ಇವೆಲ್ಲವನ್ನು ಬಳಸಿ ನಿಮಗಿಷ್ಟವಾದ ಚಿತ್ರವನ್ನು ಬರೆಯಿರಿ.**

©KTBS
Not to be republished




ನೀನೀಗ ಪದ್ಯದಲ್ಲಿನ ವಿಚಾರ ಸರಣಿ ಮತ್ತು ಘಟನಾವಳಿಗಳಲ್ಲಿರುವ ಸರಳ ಕಾರ್ಯಕಾರಣ ಸಂಬಂಧಗಳನ್ನು ಗುರುತಿಸುವುದರ ಜೊತೆಗೆ ಓದುವ ಮತ್ತು ಆಲಿಸುವ ಸಾಮರ್ಥ್ಯವನ್ನು ಗಳಿಸಿಕೊಂಡಿರುವೆ ಅಲ್ಲವೆ?


ಸಮಿತಿ ರಚನೆ –

# ಪಾಠ – ೧೪
# ಹುತಾತ್ಮ ಬಾಲಕ

F1L2M7

**ಕಲಿಕೆಗೆ ದಾರಿ:**

ನಮ್ಮ ನಾಡಿನ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಸಂಗ್ರಹಿಸಿ ಶಾಲಾ ಫಲಕದಲ್ಲಿ ಸ್ನೇಹಿತರ ಜೊತೆ ಸೇರಿ ಪ್ರದರ್ಶಿಸಿ.



©KTBS Not to be republished

ಭಾರತಮಾತೆಯ ಬಿಡುಗಡೆಗಾಗಿ ಬ್ರಿಟೀಷರ ವಿರುದ್ಧ ಹೋರಾಟ ಮಾಡಿ ಅನೇಕ ಜನ ಪ್ರಾಣಾರ್ಪಣೆ ಮಾಡಿದ್ದಾರೆ. ಅಂತಹ ಮಹಾನ್ ತ್ಯಾಗ ಮಾಡಿದವರಲ್ಲಿ ಹುಬ್ಬಳ್ಳಿಯ ಲ್ಯಾಮಿಂಗ್‌ಟನ್ ಪ್ರೌಢಶಾಲೆಯ ಹದಿಮೂರು ವರ್ಷದ ವಿದ್ಯಾರ್ಥಿ ನಾರಾಯಣ ಮಹಾದೇವ ದೋನಿಯು ಒಬ್ಬ.

೧೯೪೨ರ ಆಗಸ್ಟ್ ೯ ರಂದು ಗಾಂಧೀಜಿಯವರು ಬ್ರಿಟೀಷರಿಗೆ ಭಾರತವನ್ನು ಬಿಟ್ಟು ತೊಲಗುವಂತೆ ಅಂತಿಮ ಎಚ್ಚರಿಕೆಯನ್ನು ಕೊಟ್ಟಿದ್ದರು. ಇಡೀ ದೇಶವು ಬ್ರಿಟೀಷರ ನಿರಂಕುಶ ಆಡಳಿತದ ವಿರುದ್ಧ ಕುದಿಯುವ ಜ್ವಾಲಾಮುಖಿಯಂತೆ ಸಿಡಿದೆದ್ದಿತ್ತು. ಬ್ರಿಟೀಷರು ಗಾಂಧೀಜಿಯವರ ಅಹಿಂಸೆಯ ತತ್ವವನ್ನು ಹೇಡಿತನವೆಂದು ತಪ್ಪಾಗಿ ತಿಳಿದಿದ್ದರು.

೧೯೪೨ ಆಗಸ್ಟ್ ೧೫ ಹುಬ್ಬಳ್ಳಿಯ ಜನತೆಗೆ ಒಂದು ಅತ್ಯಂತ ಪ್ರಮುಖ ದಿನವಾಗಿತ್ತು. ನಗರದ ಉದ್ದಗಲಕ್ಕೂ ಸ್ವಾತಂತ್ರ್ಯ ಹೋರಾಟಗಾರರ ಮೆರವಣಿಗೆಗೆ ಸಿದ್ಧತೆ ನಡೆದಿತ್ತು. "ಭಾರತವನ್ನು ಬಿಟ್ಟು ತೊಲಗಿ" ಎಂಬ ಘೋಷಣೆಗಳ ಫಲಕಗಳು ಎಲ್ಲರ ಕೈಯಲ್ಲಿದ್ದವು. ಸಾಮರಸ್ಯದ ಮಂತ್ರ

'ವಂದೇ ಮಾತರಂ' ಎಲ್ಲರ ಬಾಯಲ್ಲೂ ಹರಿದಾಡುತ್ತಿತ್ತು. 'ಭಾರತ ಮಾತಾಕಿ ಜೈ', 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ', 'ಚಲೇಜಾವ್' ಘೋಷಣೆಗಳೊಂದಿಗೆ ಸಾವಿರಾರು ಜನರು ಹುಬ್ಬಳ್ಳಿಯ ಹೃದಯ ಭಾಗದಂತಿರುವ ದುರ್ಗದ ಬಯಲು ಚೌಕದಲ್ಲಿ ಸೇರಿದ್ದರು.

ಬಾಲಕ ನಾರಾಯಣ ಅಂದು ಮುಂಜಾನೆ ಬೇಗನೇ ಎದ್ದು ಸ್ನಾನ ಮಾಡಿ ಕೈಯಲ್ಲೇ ನೇಯ್ದ ಖಾದಿಚಡ್ಡಿ, ಅಂಗಿ ಮತ್ತು ಗಾಂಧಿ ಟೋಪಿಯನ್ನು ಧರಿಸಿದ. ಮನೆಯ ಬೀರುವಿನಲ್ಲಿದ್ದ ತ್ರಿವರ್ಣಧ್ವಜವನ್ನು ಹೊರತೆಗೆದ. ಬೊಂಬಿಗೆ ಧ್ವಜವನ್ನು ಕಟ್ಟಿ "ಅಮ್ಮಾ" ಎಂದು ಜೋರಾಗಿ ಕೂಗಿದ. ನಿದ್ರೆಯಿಂದ ಎದ್ದ ತಾಯಿ ಮಗನನ್ನು ನೋಡಿ ಆಶ್ಚರ್ಯದಿಂದ "ಎಲ್ಲಿಗೆ ಹೋಗುತ್ತಿರುವೆ ಮಗು?" ಎಂದು ಕೇಳಿದಳು.

"ಅಮ್ಮಾ ಬ್ರಿಟೀಷರ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಯುತ್ತಿದೆ. ಅದನ್ನು ಕೂಡಿಕೊಳ್ಳಲು ನಾನು ಹೋಗುತ್ತಿದ್ದೇನೆ" ಎಂದ ನಾರಾಯಣ. ಬಾಲಕ ನಾರಾಯಣನ ಕಣ್ಣಿನಲ್ಲಿ ಅಪೂರ್ವ ಕಾಂತಿಯಿತ್ತು. "ಮಗು ನೀನು ಇನ್ನೂ ಕಿರಿಯವ. ದೊಡ್ಡವರ ಮೆರವಣಿಗೆಯಲ್ಲಿ ನೀನು ಹೇಗೆ ಸೇರಲು ಸಾಧ್ಯ?" ಎಂದು ದುಗುಡದಿಂದ ತಾಯಿ ಕೇಳಿದಳು.

ಅದಕ್ಕೆ ಅವನು "ಅಮ್ಮ ಹಿರಿಯರು ಮತ್ತು ಕಿರಿಯರು ಎನ್ನುವುದು ಮುಖ್ಯವಲ್ಲ. ಭಾರತ ಮಾತೆಯ ಸೇವೆಯನ್ನು ಹೇಗೆ ಮಾಡುತ್ತೇವೆ ಎನ್ನುವುದೇ ಮುಖ್ಯ ಎಂದನು." ಮಗನ ಈ ರೀತಿಯ ಮಾತುಗಳನ್ನು ಕೇಳಿ ತಾಯಿ ಅಚ್ಚರಿಗೊಂಡಳು. ಅವನ ಹಣೆಗೆ ಪ್ರೀತಿಯಿಂದ ಮುತ್ತಿಟ್ಟು "ದೇವರು ನಿನಗೆ ಒಳ್ಳೆಯದನ್ನು ಮಾಡಲಿ" ಎಂದು ಹರಸಿ ಕಳುಹಿಸಿಕೊಟ್ಟಳು.



KTBS Not to be republished

ದುರ್ಗದ ಬಯಲಿನಲ್ಲಿ ಸೇರಿದ್ದ ಜನರನ್ನು ನಾರಾಯಣ ಸೇರಿಕೊಂಡನು. ಮಿಂಚಿನ ಕಣ್ಣಿನ ಚತುರ ಹುಡುಗನ ಆಗಮನ ಎಲ್ಲರನ್ನು ಆಕರ್ಷಿಸಿತು. ಮೆರವಣಿಗೆ ಆರಂಭವಾಯಿತು. ನಾರಾಯಣ ತಾರಕ ಸ್ವರದಲ್ಲಿ "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ" ಘೋಷಣೆ ಕೂಗುತ್ತಿದ್ದನು. ಇತರರು ಅವನ ಕೂಗನ್ನು ಪ್ರತಿಧ್ವನಿಸುತ್ತಿದ್ದರು. ಇದನ್ನು ಕಂಡ ಪೊಲೀಸರು ಸಿಟ್ಟಿನಿಂದ ಕುದಿಯುತ್ತಿದ್ದರು. ಹೋರಾಟಕ್ಕೆ ಪ್ರತಿಯಾಗಿ ಸಿಕ್ಕಸಿಕ್ಕವರನ್ನು ತದುಕುತ್ತಿದ್ದರು. ಇದ್ದಕ್ಕಿದ್ದಂತೆ ಗಾಳಿಯಲ್ಲಿ ಗುಂಡು ಹಾರಿಸತೊಡಗಿದರು. ಅಪಾಯದ

ಸುಳಿವನ್ನು ಕಂಡ ಕೆಲವರು ಜೀವ ಉಳಿಸಿಕೊಳ್ಳಲು ಓಡತೊಡಗಿದರು. ಎಳೆಯ ಬಾಲಕ ನಾರಾಯಣ ಘೋಷಣೆ ಕೂಗುತ್ತಲೇ ಇದ್ದ. ಅವನು ಘೋಷಣೆಯನ್ನು ಪೂರ್ಣಗೊಳಿಸುವ ಮೊದಲೇ ಪೊಲೀಸರ ಒಂದು ಗುಂಡು ಅವನ ಎದೆಯನ್ನು ಭೇದಿಸಿತ್ತು. ಗಾಯಗೊಂಡು ರಕ್ತದಲ್ಲಿ ತೊಯ್ದ ನಾರಾಯಣ ನೆಲಕ್ಕುರುಳಿದನು. ತಕ್ಷಣ ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಮೃತ್ಯುವಿನೊಡನೆ ಬದುಕಿಗಾಗಿ ಹೋರಾಡುತ್ತಿದ್ದ ನಾರಾಯಣನನ್ನು ನೋಡಲು ಕೆಲ ಬ್ರಿಟೀಷ್ ಅಧಿಕಾರಿಗಳು ಆಸ್ಪತ್ರೆಗೆ ಬಂದರು. ಆಂಗ್ಲ ಅಧಿಕಾರಿಯೊಬ್ಬ "ನಿನಗೆ ಏನು ಬೇಕು?" ಎಂದು ಕೇಳಿದ. ಸಾವಿನಂಚಿನಲ್ಲಿದ್ದ ಬಾಲಕ ತನ್ನ ನೋವನ್ನು ಮರೆತು "ಸ್ವರಾಜ್ಯ" ಎಂದುತ್ತರಿಸುತ್ತಲೇ ತನ್ನ ಕೊನೆಯುಸಿರೆಳೆದ. ಸಾವಿನ ಸಮ್ಮುಖದಲ್ಲಿ ಎಂಥ ಅಪ್ರತಿಮ ಧೈರ್ಯ! ಹುತಾತ್ಮ ಬಾಲಕ ನಾರಾಯಣ ಹೀಗೆ ಒಂದು ದಂತಕಥೆಯಾದ. ಅವನ ನೆನಪು ದೇಶವಾಸಿಗಳ ಹೃದಯದಲ್ಲಿ ಇಂದಿಗೂ ಚಿರಸ್ಥಾಯಿಯಾಗಿ ಉಳಿದಿದೆ.

**ಸ್ವಾತಂತ್ರ್ಯ ಜೀವನ ಬದುಕಿಗೆ ಸಾಧನ**

## ಪದಗಳ ಅರ್ಥ

©KTBS Not to be republished

ತ್ಯಾಗ-ತೊರೆಯುವಿಕೆ, ಬಿಡುವುದು; ತೊಲಗು-ಬಿಟ್ಟುಹೋಗು; ಘೋಷಣೆ-ಗಟ್ಟಿಯಾಗಿ ಕೂಗು; ಬಯಲು-ವಿಶಾಲವಾದ ಜಾಗ; ಪ್ರತಿಭಟನೆ – ವಿರೋಧ; ಕಾಂತಿ – ಬೆಳಕು; ಹರಸು-ಆಶೀರ್ವದಿಸು; ಚತುರ – ಜಾಣ; ಆಗಮನ – ಬರುವುದು; ಸುಳಿವು-ಕುರುಹು, ಗುರುತು; ತೊಯ್ದು-ಒದ್ದೆಯಾದ; ಮೃತ್ಯು-ಸಾವು; ಅಹಿಂಸೆ – ಹಿಂಸೆ ಮಾಡದಿರುವುದು; ಹೇಡಿ – ಅಂಜುಬುರುಕ, ಕೈಲಾಗದವ; ನಿರಂಕುಶ- ಯಾರ ಅಂಕೆಗೂ ಒಳಪಡದ; ತಾರಕ ಸ್ವರ –ಏರುಧ್ವನಿ, ಗಟ್ಟಿಯಾಗಿ, ಜೋರಾಗಿ.


## ಟಿಪ್ಪಣಿ

ಪ್ರಾಣಾರ್ಪಣೆ – ಒಳ್ಳೆಯ ಕಾರ್ಯಕ್ಕಾಗಿ ಪ್ರಾಣ ತ್ಯಾಗ ಮಾಡುವುದು.

ಹುತಾತ್ಮ – ದೇಶದ ಹಿತ, ಜನತೆಯ ಹಿತ ಇತ್ಯಾದಿ ಧ್ಯೇಯ ಸಾಧನೆಗಾಗಿ ಪ್ರಾಣವನ್ನು ಅರ್ಪಿಸುವವ.

ಚಿರಸ್ಥಾಯಿ – ಹೆಚ್ಚು ಕಾಲ ಇರುವುದು.

ಸ್ವರಾಜ್ಯ – ಸ್ವತಂತ್ರವಾದ ರಾಜ್ಯ, ಯಾರ ಅಧೀನಕ್ಕೂ ಒಳಪಡದ ರಾಜ್ಯ.




## ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ

೧. ಬ್ರಿಟೀಷರಿಗೆ ಭಾರತವನ್ನು ಬಿಟ್ಟು ತೊಲಗಿ ಎಂದು ಎಚ್ಚರಿಕೆ ಕೊಟ್ಟವರು ಯಾರು?

.............................................................................................................

೨. ಹುಬ್ಬಳ್ಳಿಯ ಜನತೆಗೆ ಪ್ರಮುಖವಾಗಿದ್ದ ದಿನ ಯಾವುದು?

.............................................................................................................

೩. ನಾರಾಯಣನ ತಾಯಿ ಏನೆಂದು ಮಗನನ್ನು ಹರಸಿದಳು?

.............................................................................................................

೪. ನಾರಾಯಣನು ಕೂಗಿದ ಘೋಷಣೆ ಯಾವುದು?

.............................................................................................................

೫. ಸಾವಿನ ಅಂಚಿನಲ್ಲಿದ್ದ ಬಾಲಕ ಏನನ್ನು ಕೇಳಿದ?

.............................................................................................................

©KTBS
Not to be republished

## ಆ. ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ

೧. ಬಾಲಕ ನಾರಾಯಣ ಮುಂಜಾನೆ ಎದ್ದು ಹೇಗೆ ಸಿದ್ಧನಾದನು?

.............................................................................................................

.............................................................................................................

.............................................................................................................

೨. ನಾರಾಯಣನ ತಾಯಿ ಏಕೆ ಅಚ್ಚರಿಗೊಂಡಳು?

.............................................................................................................

.............................................................................................................

.............................................................................................................

೩. ಪೊಲೀಸರು ಸಿಟ್ಟಿನಿಂದ ಏಕೆ ಕುದಿಯುತ್ತಿದ್ದರು?

.............................................................................................................

.............................................................................................................

.............................................................................................................

## ಇ. ಈ ಮಾತನ್ನು ಯಾರು? ಯಾರಿಗೆ ಹೇಳಿದರು?

೧. “ಎಲ್ಲಿಗೆ ಹೋಗುತ್ತಿರುವೆ ಮಗು?”

ಯಾರು? ..........................................................................................

ಯಾರಿಗೆ? ..........................................................................................

೨. “ಅಮ್ಮ ಹಿರಿಯರು ಮತ್ತು ಕಿರಿಯರು ಎನ್ನುವುದು ಮುಖ್ಯವಲ್ಲ”

ಯಾರು? ..........................................................................................

ಯಾರಿಗೆ? ..........................................................................................

೩. “ನಿನಗೆ ಏನು ಬೇಕು?”

ಯಾರು? ..........................................................................................

ಯಾರಿಗೆ? ..........................................................................................




©KTBS Not to be republished

## ಅ. ಕೊಟ್ಟಿರುವ ಪದ ಗಮನಿಸಿ ವಿರುದ್ಧಾರ್ಥಕ ಪದ ಬರೆಯಿರಿ.

೧. ಅಹಿಂಸೆ × ....................................

೨. ಕಿರಿಯ × ....................................

೩. ಸಾಧ್ಯ × ....................................

೪. ಬೇಕು × ....................................

## ಆ. ಮಾದರಿಯಲ್ಲಿ ಸೂಚಿಸಿರುವಂತೆ ಪದ ಬಿಡಿಸಿ ಬರೆಯಿರಿ.

**ಮಾದರಿ :** ಧೈರ್ಯವಂತ = ಧೈರ್ಯ + ವಂತ

೧. ಗುಣವಂತ = .......................... + ..........................

೨. ಶೌರ್ಯವಂತ = .......................... + ..........................

೩. ಶಕ್ತಿವಂತ = .......................... + ..........................

೪. ಬುದ್ಧಿವಂತ = .......................... + ..........................

೫. ಹಣವಂತ = .......................... + ..........................

## ಇ. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.

೧. ಘೋಷಣೆ = ..........................................................................................

೨. ಅಹಿಂಸೆ = ..........................................................................................

೩. ಜೋರಾಗಿ = ..........................................................................................

೪. ಆಶ್ಚರ್ಯ = ..........................................................................................

೫. ಮೆರವಣಿಗೆ = ..........................................................................................

## ಈ. ಈ ಕೆಳಗಿನ ಪದಗಳಿಗೆ ಶಬ್ದಕೋಶದಿಂದ ಅರ್ಥ ಹುಡುಕಿ ಬರೆಯಿರಿ

೧. ನೆರವು = ..........................................

೨. ಹರಸು = ..........................................

೩. ಅದ್ಭುತ = ..........................................

೪. ಕಸುಬು = ..........................................




©KTBS Not to be republished

## ಅ. ವೃತ್ತದೊಳಗಿನ ಪದವನ್ನು ಅದರ ಸಮಾನಾರ್ಥಕ ಪದಗಳೊಂದಿಗೆ ಗೆರೆ ಎಳೆದು ಜೋಡಿಸಿ

೧.

| | | |
|---|---|---|
| ಉಬ್ಬಸ | | ಬೆರಗು |
| ಆನಂದ | ಆಶ್ಚರ್ಯ | ಅಚ್ಚರಿ |
| ವಿಸ್ಮಯ | | ಸಂತೋಷ |

---

೨.

| | | |
|---|---|---|
| ಬಯಲು | | ಅರಣ್ಯ |
| ಪಟ್ಟಣ | ಕಾಡು | ಪೀಡಿಸು |
| ಅಡವಿ | | ಕಾನನ |

---

೩.

| | | |
|---|---|---|
| ಚತುರ | ಸುಳಿವು | ಕುರುಹು |
| ಗುರುತು | | ನೆನಪು |

ಆ. ಕೊಟ್ಟಿರುವ ಅಕ್ಷರ ಬಳಸಿ ಪದ ರಚಿಸಿ, ಅಕ್ಷರ ಬಂಧ ಪೂರ್ಣಗೊಳಿಸು. ರಚನೆಯಾದ ಪದಗಳನ್ನು ಖಾಲಿ ಜಾಗದಲ್ಲಿ ಬರೆಯಿರಿ (ಡೆ, ಣ, ರ, ನೆ, ವು)

| | | | | | | |
|---|---|---|---|---|---|---|
| | | | | ನೆ | | ಸಾ |
| | | | | | ರ | |
| | | ಹ | | ಷು | | |
| ಪ | ಯ | | | | | |
| | | ತೆ | | | | |

.............................................. ..............................................

.............................................. ..............................................

.............................................. ..............................................

.............................................. ..............................................

©KTBS Not to be republished




ನೀನೀಗ ಪದ್ಯವನ್ನು ಓದಿದ ಅನಂತರ ಹೇಗೆ? ಏಕೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವನ್ನು ನಿನ್ನದಾಗಿಸಿಕೊಂಡಿರುವೆ ಅಲ್ಲವೆ?


## ಪಾಠ – ೧೫

# ದುಡಿಮೆಯ ಗರಿಮೆ (ಪದ್ಯ)

**ಕಲಿಕೆಗೆ ದಾರಿ:**

**ನಿನಗೆ ತಿಳಿದಿರುವ ವೃತ್ತಿ ಅಥವಾ ಉದ್ಯೋಗ ಹಾಗೂ ಅಲ್ಲಿ ಬಳಸುವ ಪರಿಕರಗಳ ಬಗ್ಗೆ ಶಿಕ್ಷಕರೊಡನೆ ಚರ್ಚಿಸು.**

ಕಬ್ಬಿಣ ಕುಟ್ಟುತ ಹಾರೆಯ ಮಾಡುತ
ಮುದದಿಂದ ಕೊಡುವೆನು ರೈತನಿಗೆ ।
ಬೆಳೆಯನು ಬೆಳೆಯಲು ನೆರವನು ನೀಡುವೆ
ಜನರನು ಸಲಹುವ ದಾತನಿಗೆ ॥



ಕಾಡನು ಸೇರುತ ಒಣಮರ ಹುಡುಕುತ
ನೇಗಿಲ ಅಳತೆಗೆ ಕೊಯ್ಯುವೆನು ।
ಉತ್ತಮ 'ಹಲ'ವನು ಮಾಡುತ ನೊಗವನು
ಕೆತ್ತನೆಯೊಂದಿಗೆ ನೀಡುವೆನು ॥



©KTBS Not to be republished

ಒಟ್ಟೆಯ ಗಂಟನು ಒಟ್ಟಿಗೆ ಸೇರಿಸಿ
ಕತ್ತೆಯ ಬೆನ್ನಲಿ ಇರಿಸುವೆನು ।
ಹರಿಯುವ ನೀರನು ಕಲುಷಿತಗೊಳಿಸದೆ
ಒಗೆಯುವವನೆಲ್ಲರ ವಸನವನು ॥



ಕಡಲಲಿ ಬಲೆಯನು ಬೀಸುತ ಮೀನನು
ಸಡಗರದಿಂದಲಿ ಹಿಡಿಯುವೆನು ।
ಸಂತೆಗೆ ಸಾಗಿಸಿ ಮಾರಲು ಕುಳಿತರೆ
ಸಂಜೆಗೆ ಹಣವನು ಎಣಿಸುವೆನು ॥



ಹೊಸ ಹೊಸ ಬಗೆಯಲಿ ಉಡುಗೆಯ ಹೊಲಿಯುತ
ಮೈಯನು ಮನವನು ಬೆಳಗಿಸುವೆ ।
ಅಪ್ಪನ ಅಮ್ಮನ ಮಕ್ಕಳ ಬಳಗದ
ಮೆಚ್ಚುಗೆ ಗಳಿಸಲು ತವಕಿಸುವೆ ॥



–ವಿ.ಬಿ. ಕುಳಮರ್ವ.

**ವೃತ್ತಿ ನಿರತ ವ್ಯಕ್ತಿ, ನಾಡಿಗವನೆ ಶಕ್ತಿ**

## ಪದಗಳ ಅರ್ಥ

ದುಡಿಮೆ – ಕೆಲಸ, ಸಂಪಾದನೆ; ಗರಿಮೆ – ಹೆಮ್ಮೆ, ಹಿರಿಮೆ; ಕಸುಬು – ಕೆಲಸ, ಉದ್ಯೋಗ; ರೈತ – ಬೇಸಾಯ ಮಾಡುವವನು; ನೆರವು – ಸಹಾಯ, ಬೆಂಬಲ, ಆಧಾರ; ಸಲಹು – ಕಾಪಾಡು, ರಕ್ಷಿಸು; ಹಣ – ದುಡ್ಡು, ಧನ; ದಾತ – ದಾನಿ, ಒಡೆಯ; ಸಂಜೆ – ಸಾಯಂಕಾಲ, ಸೂರ್ಯ ಮುಳುಗುವ ಸಮಯ; ಕೊಯ್ಯು – ಕತ್ತರಿಸು, ಸೀಳು; ಹುಡುಕು – ಶೋಧಿಸು, ಅರಸು; ತವಕಿಸು – ಆತುರಪಡು; ಹಲ – ನೇಗಿಲು; ಮೆಚ್ಚುಗೆ – ಒಪ್ಪಿಗೆ, ಸಂತೋಷ; ಇರಿಸು – ಇಡು, ಹೇರು; ಕಲುಷಿತ – ಕದಡಿದ, ಮಲಿನ; ವಸನ – ಬಟ್ಟೆ; ಉಡುಗೆ – ಉಡುಪು;

## ಟಿಪ್ಪಣಿ

ಹಾರೆ – ಒಂದು ಬಗೆಯ ಕಬ್ಬಿಣದ ಉಪಕರಣ.

ಸಂತೆ – ನಿಯಮಿತ ಕಾಲಾವಧಿಗೆ ಕೊಡುಕೊಳ್ಳುವುದಕ್ಕಾಗಿ ಸೇರುವ ಜನರ ಗುಂಪು, ಜನಗಳ ಕೂಟ, ವಿನಿಮಯ ಸ್ಥಳ, ಕೊಡುಕೊಳ್ಳು ನಡೆಯುವ ಪೇಟೆ.

ನೇಗಿಲು – ಭೂಮಿಯನ್ನು ಉಳುವ ಸಾಧನ.

©KTBS Not to be republished

## ಅಭ್ಯಾಸ

### ಅ. ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ

೧. ಕಬ್ಬಿಣದಿಂದ ತಯಾರಿಸುವ ಸಲಕರಣೆಗಳು ಯಾವುವು?

..................................................................................................

೨. ಜನರನ್ನು ಸಲಹುವ ದಾತ ಯಾರು?

..................................................................................................

೩. ನೊಗವನ್ನು ಯಾವುದರಿಂದ ಮಾಡುವರು?

..................................................................................................

೪. ಮೀನನ್ನು ಹೇಗೆ ಹಿಡಿಯುವರು?

..................................................................................................

## ಆ. ಎರಡು–ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ

೧. ಬಳಗದ ಮೆಚ್ಚುಗೆಯನ್ನು ಬಟ್ಟೆ ಹೊಲಿಯುವವರು ಹೇಗೆ ಗಳಿಸಬಹುದು?

..........................................................................................

..........................................................................................

..........................................................................................

೨. 'ನೇಗಿಲನ್ನು' ಹೇಗೆ ಮಾಡುವರು?

..........................................................................................

..........................................................................................

..........................................................................................

## ಇ. ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ

**(ಕಾರ್ಮಿಕ, ಕತ್ತೆ, ರೈತ, ಬಲೆ, ಮರ)**

೧. ಜನರನ್ನು ಸಲಹುವವನು ..................................

೨. ನೊಗವನ್ನು .................................. ದಿಂದ ಮಾಡುತ್ತಾರೆ.

೩. ಬಟ್ಟೆಯ ಗಂಟನ್ನು .................................. ಹೊರುತ್ತದೆ.

೪. ಮೀನನ್ನು ಹಿಡಿಯಲು .................................. ಬಳಸುತ್ತಾರೆ.

## ಈ. ಖಾಲಿ ಜಾಗದಲ್ಲಿ ಪದ್ಯದ ಮುಂದಿನ ಸಾಲುಗಳನ್ನು ಬರೆದು ಪೂರ್ಣಗೊಳಿಸಿ.

ಹೊಸ ಹೊಸ ಬಗೆಯಲಿ ..................................

.................................................... ಬೆಳಗಿಸುವೆ

ಅಪ್ಪನ ಅಮ್ಮನ ..................................................

.................................................... ತವಕಿಸುವೆ

©KTBS Not to be republished




## ಅ. ಕೊಟ್ಟಿರುವ ವಿರುದ್ಧಾರ್ಥಕ ಪದಗಳನ್ನು ಮಾದರಿಯಂತೆ ವಾಕ್ಯಗಳಲ್ಲಿ ಬಳಕೆ ಮಾಡಿ.

ಮಾದರಿ : ದೂರ × ಹತ್ತಿರ = ನಾನು ಎಸೆದ ಕಲ್ಲು ದೂರ ಬಿದ್ದಿತು.

ನಮ್ಮ ಮನೆ ಶಾಲೆಯ ಹತ್ತಿರವಿದೆ.

೧. ರಾತ್ರಿ × ಹಗಲು ..........................................................

..........................................................

೨. ಹಿಗ್ಗು × ಕುಗ್ಗು ..........................................................

..........................................................

೩. ಸುಳ್ಳು × ನಿಜ ..............................................................................

..............................................................................

೪. ಚಿಕ್ಕ × ದೊಡ್ಡ ..............................................................................

..............................................................................

**ಆ. ಪ್ರಾಸ ಪದಗಳನ್ನು ಪದ್ಯದಿಂದ ಆರಿಸಿ ಮಾದರಿಯಂತೆ ಬರೆಯಿರಿ.**

ಮಾದರಿ : ರೈತನಿಗೆ – ದಾತನಿಗೆ

ಕೊಯ್ಯುವೆನು – ................................

ಹಿಡಿಯುವೆನು – ................................

ಬೆಳಗಿಸುವೆ – ................................


**ಇ. ಕೊಟ್ಟಿರುವ ವಾಕ್ಯದಲ್ಲಿ ಕೆಲಸವನ್ನು ಸೂಚಿಸುವ ಪದವನ್ನು ಗುರುತಿಸಿ ಬರೆಯಿರಿ.**

೧. ನೇಗಿಲ ಅಳತೆಗೆ ಕೊಯ್ಯುವೆನು ................................

೨. ಕತ್ತೆಯ ಬೆನ್ನಲಿ ಇರಿಸುವೆನು ................................

೩. ಸಂಜೆಗೆ ಹಣವನು ಎಣಿಸುವೆನು ................................

©KTBS Not to be republished




**೧. ನಿಮ್ಮ ಊರಿನಲ್ಲಿರುವ ಕಸುಬುದಾರರನ್ನು ಪಟ್ಟಿಮಾಡಿ. ಅವರು ಯಾವ ಕೆಲಸವನ್ನು ಮಾಡುತ್ತಾರೆ ಎಂಬುದನ್ನು ಕೊಟ್ಟಿರುವ ಜಾಗದಲ್ಲಿ ಬರೆಯಿರಿ.**

| ಕಸುಬುದಾರರು | ಮಾಡುವ ಕೆಲಸ |
|---|---|
| ................................................ | ................................................ |
| ................................................ | ................................................ |
| ................................................ | ................................................ |
| ................................................ | ................................................ |

೨. ಊರಿನಲ್ಲಿ ವಿವಿಧ ಕಸುಬುಗಳನ್ನು ಮಾಡುವವರು ಇರಬೇಕು. ಏಕೆ?

೩. ಕೊಟ್ಟಿರುವ ಚೌಕದಲ್ಲಿ ರೈತನಿಗೆ ಸಂಬಂಧಿಸಿದ ಅನೇಕ ಪದಗಳು ಅಡಗಿ ಕುಳಿತಿವೆ. ಅಂತಹ ಪದಗಳನ್ನು ಪತ್ತೆ ಹಚ್ಚಿ ವೃತ್ತ ಹಾಕಿ.

| | | | | | | | |
|---|---|---|---|---|---|---|---|
| ನೇ | ಗಿ | ಲು | ಬಾ | ತೋ | ಟ | ಗೂ | ರು |
| ಕು | ಡು | ಗೋ | ಲು | ರ | ಎ | ಕ | ಬಾ |
| ಗಾ | ಡಿ | ಸ | ಮ್ಮ | ಣ | ವಿ | ಣ | ಹ |
| ಪ | ನೊ | ಗ | ರ | ಹ | ಸು | ಜ | ಲ |

©KTBS Not to be republished

೪. ಈ ಕವಿತೆಯಲ್ಲಿ ಬರುವ ಕಸುಬುದಾರರಲ್ಲಿ ನಿಮಗೆ ಇಷ್ಟವಾದವರು ಯಾರು? ಏಕೆ?

## ೫. ಚಿತ್ರ ಬಿಡಿಸೋಣ.

ನಿನಗಿಷ್ಟವಾದ ಯಾವುದಾದರೂ ಒಂದು ವೃತ್ತಿಯ ಚಿತ್ರವನ್ನು ರಚಿಸಿ ಬಣ್ಣ ಹಚ್ಚು. ಅನಂತರ ಎಲ್ಲ ಸ್ನೇಹಿತರು ರಚಿಸಿದ ಚಿತ್ರಗಳನ್ನು ಒಟ್ಟು ಸೇರಿಸಿ ಶಿಕ್ಷಕರ ಸಹಾಯದಿಂದ ಚಿತ್ರಗಳ ಸಂಪುಟ (ಆಲ್ಬಂ) ತಯಾರಿಸಿ.

## ೬. ಮೂಕಾಭಿನಯ.

ವಿವಿಧ ಕಸುಬುದಾರರ ಕೆಲಸಗಳನ್ನು ಮೂಕಾಭಿನಯದ ಮೂಲಕ ಶಿಕ್ಷಕರ ಸಹಾಯದಲ್ಲಿ ಗೆಳೆಯರೆಲ್ಲರೂ ಸೇರಿ ತರಗತಿಯಲ್ಲಿ ಪ್ರದರ್ಶಿಸಿ.




**ನೀನೀಗ ಪಠ್ಯವನ್ನು ಆಲಿಸಿದ ಅನಂತರ ಏಕೆ? ಹೇಗೆ? ಪ್ರಶ್ನೆಗಳಿಗೆ ಉತ್ತರಿಸುವ ಕೌಶಲವನ್ನು ಪಡೆದಿರುವೆಯಲ್ಲವೇ?**

©KTBS Not to be republished



## ಪಾಠ – ೧೬

# ಕನಸುಗಾರ ಕಲಾಂ



H6R3X4

ಸಮಿತಿ ರಚನೆ –

**ಕಲಿಕೆಗೆ ದಾರಿ:**
ನೀನು ದೊಡ್ಡವನಾದ ಮೇಲೆ ಏನಾಗಬೇಕೆಂದು ಕನಸು ಕಾಣುತ್ತಿರುವೆ? ತರಗತಿಯ ಗೆಳೆಯರೊಂದಿಗೆ ಹಂಚಿಕೊ.




©KTBS Not to be republished

ಪ್ರಸಿದ್ಧ ಮೂಳೆ ತಜ್ಞರೊಬ್ಬರು ವಿಜ್ಞಾನಿಯೊಬ್ಬರ ಪ್ರಯೋಗಾಲಯಕ್ಕೆ ಭೇಟಿ ಕೊಟ್ಟರು. ವಿಜ್ಞಾನಿ ತನ್ನ ಪ್ರಯೋಗಾಲಯದಲ್ಲಿದ್ದ ವಸ್ತುಗಳನ್ನು ಒಂದೊಂದಾಗಿ ತೋರಿಸುತ್ತಾ ವಿವರಿಸಿದರು. ಕ್ಷಿಪಣಿಯಲ್ಲಿ ಬಳಸುವುದಕ್ಕಾಗಿ ತಾನು ತಯಾರಿಸಿದ ಹಗುರವಾದ ವಸ್ತುವೊಂದನ್ನು ಹೆಮ್ಮೆಯಿಂದ ತೋರಿಸಿದರು. ಅದನ್ನು ಮೂಳೆ ತಜ್ಞರು ಕೈಯಿಂದ ಎತ್ತಿ 'ಬಲು ಹಗುರ!' ಎಂದು ಉದ್ಗರಿಸಿದರು. ಒಡನೆಯೆ ವಿಜ್ಞಾನಿಯನ್ನು ಹೈದರಾಬಾದಿನಲ್ಲಿರುವ ತಮ್ಮ 'ನಿಜಾಮ್' ಆಸ್ಪತ್ರೆಗೆ ಬರುವಂತೆ ಕೇಳಿಕೊಂಡರು. ಅಂದೆ ಜೊತೆಯಲ್ಲಿ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳನ್ನು ತೋರಿಸಿದರು. ಅಲ್ಲಿದ್ದವರಲ್ಲಿ ಹೆಚ್ಚಿನವರು ಮಕ್ಕಳು. ಅವರಲ್ಲಿ ಕೆಲವರು ಬೇರೆ ಬೇರೆ ಕಾರಣಗಳಿಂದ ಕಾಲಿನ ನ್ಯೂನತೆಗೆ ಒಳಗಾಗಿದ್ದರು. ಅವರ ಕಾಲಿಗೆ ಸುಮಾರು ಮೂರು ಕಿಲೋ ಗ್ರಾಂ ತೂಕದ ಲೋಹದ ಕ್ಯಾಲಿಪರ್ ಅಳವಡಿಸಿದ್ದರು.

ಆ ಭಾರವಾದ ಕಾಲನ್ನು ಎತ್ತಿ ಇಟ್ಟು ನಡೆಯಲು ಅವರು ಬಲು ಕಷ್ಟಪಡುತ್ತಿದ್ದರು. "ಇವರ ಕಷ್ಟವನ್ನು ನಿವಾರಿಸಲು ನಿಮ್ಮಿಂದ ಸಾಧ್ಯವಿಲ್ಲವೆ?" ಎಂದು ವೈದ್ಯರು ವಿಜ್ಞಾನಿಯನ್ನು ಪ್ರಶ್ನಿಸಿದರು.

ರೋಗಿಗಳ ವೇದನೆ, ವೈದ್ಯನ ಕಳಕಳಿ ವಿಜ್ಞಾನಿಯ ಮನ ಕಲಕಿತು. 'ಜನರ ನೆರವಿಗೆ ಬಾರದ ವಿಜ್ಞಾನ, ತಂತ್ರಜ್ಞಾನಕ್ಕೆ ಏನು ಅರ್ಥವಿದೆ?' ಎನ್ನಿಸಿತು. ಆ ಕ್ಷಣದಿಂದಲೇ ಅದರ ಬಗ್ಗೆ ಚಿಂತಿಸುತ್ತಾ ಹಿಂದಿರುಗಿದರು. ಸತತ ಮೂರು ವಾರಗಳ ಕಾಲ ಇದಕ್ಕಾಗಿ ಶ್ರಮಿಸಿದರು. ಹೊಸ ಕ್ಯಾಲಿಪರ್ ತಯಾರಿಸಿದರು. ಇದು ಕೇವಲ ೩೦೦ ಗ್ರಾಂ ತೂಕವಿತ್ತು. ತಯಾರಾದ ತಕ್ಷಣ ಲಗುಬಗೆಯಿಂದ ನಿಜಾಮ್ ಆಸ್ಪತ್ರೆಗೆ ಒಯ್ದರು.

ವೈದ್ಯರು ಅದನ್ನು ಪರೀಕ್ಷಿಸಿ ಒಬ್ಬ ಹುಡುಗನಿಗೆ ಅಳವಡಿಸಿದರು. ಅವನು ಹೆಜ್ಜೆ ಇಟ್ಟು ನಡೆದನು.


©KTBS Not to be republished

ಅವನ ಕಣ್ಣಲ್ಲಿನ ಆನಂದ ಕಂಡು ವೈದ್ಯರ ಹೃದಯ ತುಂಬಿ ಬಂದಿತು. ವಿಜ್ಞಾನಿಯ ಆನಂದಕ್ಕೆ ಪಾರವೇ ಇರಲಿಲ್ಲ. ಇಂತಹ ಮಾನವೀಯತೆ ಮೆರೆದ ವಿಜ್ಞಾನಿ ಯಾರು ಗೊತ್ತೇ? ಅವರೇ ನಮ್ಮ ಹೆಮ್ಮೆಯ ರಾಷ್ಟ್ರಪತಿಯಾಗಿದ್ದ ಎ.ಪಿ.ಜೆ. ಅಬ್ದುಲ್ ಕಲಾಂ.

ಅಬ್ದುಲ್ ಕಲಾಂ ತಮಿಳುನಾಡಿನ ರಾಮೇಶ್ವರಂ ಎಂಬ ಹಳ್ಳಿಯಲ್ಲಿ ಜನಿಸಿದ ಕನಸುಗಾರ. ಬಾಲಕರಿದ್ದಾಗ ಕಡಲ ತೀರದಲ್ಲಿ ಕುಳಿತು ಪರಿಸರವನ್ನು ವೀಕ್ಷಿಸುತ್ತಿದ್ದರು. ದಡದಲ್ಲಿದ್ದ ಹಕ್ಕಿಗಳು ನೆಲದಿಂದ ಮೇಲಕ್ಕೆ ಹಾರುತ್ತಿದ್ದವು. ಪಟಪಟನೆ ರೆಕ್ಕೆ ಬಡಿದು ಒಂದು ಕ್ಷಣ ಹಾಗೆಯೇ ತೇಲುತ್ತಿದ್ದವು. ಮತ್ತೆ ಹಾರುತ್ತಿದ್ದವು. ಇದನ್ನು ಕಂಡು 'ಮುಂದೊಂದು ದಿನ ನಾನು ಆಕಾಶದಲ್ಲಿ ಇವುಗಳಂತೆ ಹಾರಾಡುತ್ತೇನೆ' ಎಂದು ಕನಸು ಕಾಣುತ್ತಿದ್ದರು.

ಈ ಕನಸುಗಾರನೇ ಮುಂದೆ ಶ್ರೇಷ್ಠ ವಿಜ್ಞಾನಿಯಾದರು. ರಾಕೆಟ್ ಹಾಗೂ ಕ್ಷಿಪಣಿ ಉಡಾವಣೆಯಲ್ಲಿ ಮಹತ್ವದ ಸಾಧನೆ ಮಾಡಿದರು. ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಗಗನದೆತ್ತರಕ್ಕೆ ಏರಿಸಿದರು. ದೇಶದ ಅತ್ಯುನ್ನತ ಸ್ಥಾನವಾದ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದರು.



©KTBS Not to be republished

ಕಲಾಂರವರ ತಂದೆ ಜೈನುಲಾಬ್ದೀನ್ ಮರಕಯಾರ್. ತಾಯಿ ಆಶಿಯಮ್ಮ. ಕಲಾಂರವರು ತಮ್ಮ ಜೀವನದ ಅನುಭವಗಳನ್ನು 'ಅಗ್ನಿಯ ರೆಕ್ಕೆಗಳು' ಎಂಬ ಆತ್ಮಕಥನದಲ್ಲಿ ದಾಖಲಿಸಿದ್ದಾರೆ. ಗುರುಹಿರಿಯರು ಇವರಲ್ಲಿ ಕನಸುಗಳನ್ನು ಹಾಗೂ ಆತ್ಮವಿಶ್ವಾಸವನ್ನು ಬಾಲ್ಯದಲ್ಲಿ ತುಂಬುತ್ತಿದ್ದರು. ಆದುದರಿಂದ ಕಲಾಂ ಇಂದಿನ ಮಕ್ಕಳಿಗೆ 'ಕನಸು ಕಾಣಿರಿ' ಎಂದು ಪ್ರೋತ್ಸಾಹಿಸುತ್ತಿದ್ದರು. ಇವರ ಸಾಧನೆಯನ್ನು ಗಮನಿಸಿ ಜಗತ್ತಿನ ಸುಮಾರು ೨೦ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಿವೆ. ಭಾರತ ಸರ್ಕಾರ 'ಪದ್ಮಭೂಷಣ', 'ಪದ್ಮವಿಭೂಷಣ' ಹಾಗೂ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ. ಇವರು ದಿನಾಂಕ: ೨೭-೦೭-೨೦೧೫ರಂದು ವಿಧಿವಶರಾದರು.

**ಕನಸುಗಳೇ ಆಲೋಚನೆಗಳು. ಕೃತಿ ಆಲೋಚನೆಗಳ ಫಲ.**

## ಪದಗಳ ಅರ್ಥ

ಹೆಮ್ಮೆ – ಹಿರಿಮೆ, ಅಭಿಮಾನ; ವೇದನೆ – ನೋವು, ಯಾತನೆ; ಶ್ರಮಿಸು – ದುಡಿ, ಕಷ್ಟಪಡು; ವೀಕ್ಷಿಸು – ನೋಡು, ಅವಲೋಕಿಸು; ಗಗನ – ಆಕಾಶ, ಆಗಸ, ಬಾನು; ತೀರ – ದಡ; ಉಡಾವಣೆ – ಹಾರಿಸು; ಪ್ರೋತ್ಸಾಹಿಸು – ಹುರಿದುಂಬಿಸು, ಉತ್ತೇಜಿಸು.

## ಟಿಪ್ಪಣಿ

ಕ್ಷಿಪಣಿ – ದೂರದಿಂದ ನಿಯಂತ್ರಿಸಲ್ಪಡುವ ಸ್ಫೋಟಕವಾಗಿ ಉಡಾಯಿಸುವ ಸಾಧನ.

ಕ್ಯಾಲಿಪರ್ – ಕೈಕಾಲುಗಳಿಗೆ ಜೋಡಿಸುವ ಕೃತಕ ಸಾಧನ.

ಚಿಕಿತ್ಸೆ – ರೋಗವನ್ನು ಗುಣಪಡಿಸಲು ಮಾಡುವ ವೈದ್ಯೋಪಚಾರ.

ಪ್ರಯೋಗಾಲಯ – ಸಂಶೋಧನೆಯನ್ನು ಮಾಡುವ ಕೋಣೆ, ಪರೀಕ್ಷೆ ಮಾಡಿ ದೃಢೀಕರಿಸಿಕೊಳ್ಳುವ ಕೊಠಡಿ.

## ಅಭ್ಯಾಸ

©KTBS Not to be republished

### ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ

೧. ಪ್ರಯೋಗಾಲಯಕ್ಕೆ ಭೇಟಿ ಕೊಟ್ಟವರು ಯಾರು?

.................................................................................................

೨. ವಿಜ್ಞಾನಿಯನ್ನು ವೈದ್ಯರು ಯಾವ ಆಸ್ಪತ್ರೆಗೆ ಕರೆದುಕೊಂಡು ಹೋದರು?

.................................................................................................

೩. ಆಸ್ಪತ್ರೆಯಲ್ಲಿದ್ದ ರೋಗಿಗಳಿಗೆ ಏನಾಗಿತ್ತು?

.................................................................................................

೪. ರೋಗಿಗಳ ಕಾಲಿಗೆ ಏನನ್ನು ಅಳವಡಿಸಲಾಗಿತ್ತು?

.................................................................................................

೫. ಅಬ್ದುಲ್ ಕಲಾಂ ತಂದೆ – ತಾಯಿ ಹೆಸರೇನು?

.................................................................................................

೬. ಕಲಾಂ ಆತ್ಮಕಥನದ ಹೆಸರೇನು?

.................................................................................................

## ಆ. ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ವೈದ್ಯರ ಹೃದಯ ತುಂಬಿ ಬಂದಿತು, ಏಕೆ?

..........................................................................................

..........................................................................................

..........................................................................................

೨. ಕಲಾಂ ಬಾಲ್ಯದಲ್ಲಿ ಯಾವ ಕನಸನ್ನು ಕಾಣುತ್ತಿದ್ದರು?

..........................................................................................

..........................................................................................

..........................................................................................

೩. ಕಲಾಂ ಅವರಿಗೆ ಬಂದ ಪ್ರಮುಖ ಪ್ರಶಸ್ತಿಗಳು ಯಾವುವು?

..........................................................................................

..........................................................................................

..........................................................................................

©KTBS Not to be republished

## ಇ. ಈ ಮಾತನ್ನು ಯಾರು? ಯಾರಿಗೆ ಹೇಳಿದರು?

೧. "ಇವರ ಕಷ್ಟವನ್ನು ನಿವಾರಿಸಲು ನಿಮ್ಮಿಂದ ಸಾಧ್ಯವಿಲ್ಲವೆ?"

ಯಾರು? ..........................................................................

ಯಾರಿಗೆ? ..........................................................................

೨. "ಕನಸು ಕಾಣಿರಿ"

ಯಾರು? ..........................................................................

ಯಾರಿಗೆ? ..........................................................................




## ಅ. ಕೊಟ್ಟಿರುವ ಪದ ಗಮನಿಸಿ ವಿರುದ್ಧಾರ್ಥಕ ಪದ ಬರೆಯಿರಿ

ಹಗುರ × ................................................

ಕಷ್ಟ × ................................................

ಮೇಲೆ × ................................................

**ಆ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ.**

ಚಿಕಿತ್ಸೆ : ..........................................................................................

ಗಗನ : ..........................................................................................

ಸಾಧನೆ : ..........................................................................................

ಕನಸು : ..........................................................................................

**ಇ. ಮಾದರಿಯಂತೆ ಕೂಡಿಸಿ ಪದ ರಚಿಸಿ.**

೧. **ಮಾದರಿ :** ಮಾಡು + ಇಸು = ಮಾಡಿಸು.

ತಿನ್ನು + ಇಸು ........................................................


ಓಡು + ಇಸು ........................................................

ಬಿಡು + ಇಸು ........................................................

ಆಡು + ಇಸು ........................................................

**ಈ. ಅಬ್ದುಲ್ ಕಲಾಂರವರಿಗೆ ಸಂಬಂಧಿಸಿದ ಪದಗಳನ್ನು ಆಯ್ದು ಚೌಕದಲ್ಲಿ ಬರೆಯಿರಿ.**

(ಭಾರತ ರತ್ನ, ಜ್ಞಾನಪೀಠ, ರಾಷ್ಟ್ರಪತಿ, ಮುಖ್ಯಮಂತ್ರಿ, ಆಶಿಯಮ್ಮ, ಕ್ಷಿಪಣಿ, ಹಡಗು, ಕ್ಯಾಲಿಪರ್)




©KTBS Not to be republished

**ಉ. ಈ ಪಾಠದಲ್ಲಿ ಬರುವ ಹೆಸರುಗಳನ್ನು ಆಯ್ದು ಬರೆಯಿರಿ.**

ವ್ಯಕ್ತಿ ಹೆಸರುಗಳು : ......................... ............................ ...........................

ವೃತ್ತಿಯ ಹೆಸರುಗಳು : ......................... ............................ ...........................

ವಸ್ತುವಿನ ಹೆಸರುಗಳು : ......................... ............................ ...........................

## ಊ. ಮಾದರಿಯಂತೆ ಸೂಕ್ತ ಪದ ರಚಿಸಿ.

| | | | |
|---|---|---|---|
| ಮಾದರಿ : | ಪಡೆದನು | ಪಡೆಯುತ್ತಾನೆ | ಪಡೆಯುವನು |
| | ನಡೆದನು | ........................ | .......................... |
| | ಹಾರಿದನು | ........................ | .......................... |
| | ಬರೆದನು | ........................ | .......................... |
| | ಓಡಿದನು | ........................ | .......................... |
| | ಆಡಿದನು | ........................ | .......................... |

## ಋ. ಕೊಟ್ಟಿರುವ ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸಿ ಬರೆಯಿರಿ.

| | | |
|---|---|---|
| ರೈತರು | ಪುಸ್ತಕವನ್ನು | ಆಳಿದರು |
| ಮಕ್ಕಳು | ರಾಜ್ಯವನ್ನು | ಕೆತ್ತಿದರು |
| ಗುರುಗಳು | ಹೊಲವನ್ನು | ಹಾಡಿದರು |
| ಶಿಲ್ಪಿಗಳು | ಹಾಡನ್ನು | ಓದಿದರು |
| ರಾಜರು | ವಿಗ್ರಹಗಳನ್ನು | ಉತ್ತರು |

©KTBS Not to be republished

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

## ಎ. ಪದಬಂಧ ಪೂರ್ಣಗೊಳಿಸಿ.

| | | | | | | |
|---|---|---|---|---|---|---|
| ೧ | | | ೨ | | | ೩ |
| | | | | | | |
| ೪ | | ೫ | | ೬ | | |
| | | | | ೭ | | |
| ೮ | | | | | | ೯ |
| | | | | | | |
| ೧೦ | | | | | | |

### ಎಡದಿಂದ ಬಲಕ್ಕೆ

೧. ಆರರಿಂದ ಹದಿನಾಲ್ಕು ವರ್ಷದೊಳಗಿನ ಮಕ್ಕಳಿಗೆ ಇದು ಕಡ್ಡಾಯ (೪)

೪. ಹೊಸದಾಗಿರುವ ನಮ್ಮ ದೇಶ (೫)

೭. ಸ್ನೇಹಿತ ಇಲ್ಲಿದ್ದಾನೆ (೨)

೮. ಗಣಿಯಲ್ಲಿ ಸಿಕ್ಕಿದ ಪುಸ್ತಕ (೩)

೧೦. ಮತ್ತೆ ಮತ್ತೆ ಯತ್ನಿಸು (೩)

### ಮೇಲಿನಿಂದ ಕೆಳಕ್ಕೆ

೧. ಆಕಾಶದಲ್ಲಿ ಹಕ್ಕಿಯಂತೆ ಹಾರುವ ವಾಹನ (೩)

೨. ಮರದ ಹತ್ತಿರ ನಡೆದ ಯುದ್ಧ (೩)

೩. ಉಪಗ್ರಹ ಉಡಾಯಿಸುವ ಸಾಧನ (೩)

೫. ಭಾರತ ಸರ್ಕಾರ ಕೊಡುವ ಅತ್ಯುನ್ನತ ಪ್ರಶಸ್ತಿ (೫)

೬. ಕರ್ನಾಟಕ ರಾಜ್ಯದ ನೆರೆನಾಡು (೫)

೯. ನಸುಕಿನಲ್ಲಿ ಕಂಡ ಸ್ವಪ್ನ (೩)

©KTBS Not to be republished




## ಅ. ಊಹಿಸಿ ಬರೆಯಿರಿ.

೧. ನೀನು ನಮ್ಮ ದೇಶದ ರಾಷ್ಟ್ರಪತಿಯಾದರೆ ಏನು ಮಾಡುವೆ?

..............................................................................................

..............................................................................................

..............................................................................................

..............................................................................................

..............................................................................................

## ಆ. ಯೋಚಿಸಿ ಉತ್ತರಿಸಿ.

೧. ಕೇಸರಿ ಬಿಳಿ ಹಸಿರು ಬಣ್ಣ ನಡುವೆ ಚಕ್ರ. ಹಾಗಾದರೆ ನಾನು ಯಾರು?

..............................................................................................

೨. ಮೂರು ಕಡೆ ನೀರು ನೆತ್ತಿ ಮೇಲೆ ಬೆಟ್ಟ ಹಾಗಾದರೆ ನಾನು ಯಾರು?

..............................................................................................

೩. ಬಲಗೈಯಲ್ಲಿ ಗೀತೆ ಎಡಗೈಯಲ್ಲಿ ರಾಟೆ ಹಿಡಿದಿದ್ದೆ ಹಾಗಾದರೆ ನಾನು ಯಾರು?

..............................................................................................

**ಇ. ಕೆಳಗಿನ ಪದಗಳನ್ನು ಬಳಸಿ ರಾಷ್ಟ್ರನಾಯಕ ಗಾಂಧೀಜಿಯವರ ಬಗ್ಗೆ ಕುರಿತು ಬರೆಯಿರಿ.**

ಗಾಂಧೀಜಿ, ರಾಷ್ಟ್ರಪಿತ, ಸ್ವಾತಂತ್ರ್ಯ ಹೋರಾಟ, ಭಾರತ, ಹಳ್ಳಿ ಉದ್ಧಾರ, ಬಡತನ, ಸ್ವಚ್ಛತೆ, ಸ್ವ ಉದ್ಯೋಗ, ಸರಳ ಜೀವನ.

..............................................................................................

..............................................................................................

..............................................................................................

..............................................................................................


..............................................................................................

## ಆಟ ಆಡೋಣ

©KTBS Not to be republished

### ರೈತ–ನರಿ ಆಟ.

ಇದು ಐದಕ್ಕಿಂತ ಹೆಚ್ಚು ಮಂದಿ ಆಡುವ ಆಟ. ಎಲ್ಲರೂ ವೃತ್ತಾಕಾರದಲ್ಲಿ ನಿಲ್ಲಬೇಕು. ಒಬ್ಬನು ವೃತ್ತದ ಹೊರಗೆ ಹೋಗಬೇಕು. ಅವನು 'ನರಿ' ವೃತ್ತದ ಮಧ್ಯದಲ್ಲಿ ಒಂದು ವಸ್ತುವನ್ನು ಇರಿಸಬೇಕು. ಅದು 'ತರಕಾರಿ' ಎಂದು ಕಲ್ಪಿಸಿಕೊಳ್ಳಬೇಕು. ನರಿಗೆ ತಿಳಿಯದಂತೆ ವೃತ್ತದಲ್ಲಿ ನಿಂತವರಲ್ಲಿ ಯಾರಾದರೊಬ್ಬ ರೈತನಾಗಬೇಕು. ನರಿ ವೃತ್ತದೊಳಗೆ ಬಂದು ವಸ್ತುವನ್ನು ಒಯ್ಯುವಾಗ ರೈತ ಓಡಿ ಮುಟ್ಟಬೇಕು. ಮುಟ್ಟಲು ಆಗದಿದ್ದರೆ ಅವನು ನರಿಯಾಗುತ್ತಾನೆ. ನರಿಯಾಗಿದ್ದವನು ಒಬ್ಬ ವ್ಯಕ್ತಿಯ ಹೆಸರು ಹೇಳಬೇಕು. ಹೀಗೆ ಆಟ ಮುಂದುವರಿಯುತ್ತದೆ.




ನೀನೀಗ ಸರಳ ಕ್ರಿಯಾತ್ಮಕ ನಿಯಮಗಳನ್ನು ಅರ್ಥ ಮಾಡಿಕೊಂಡು ವಾಕ್ಯಗಳನ್ನು ರಚಿಸುವ ಸಾಮರ್ಥ್ಯವನ್ನು ಪಡೆದುಕೊಂಡಿರುವೆಯಲ್ಲವೇ?


ಸಮಿತಿ ರಚನೆ –

# ಪಾಠ – ೧೭
# ಕಾಡಿನಲ್ಲೊಂದು ಸ್ಪರ್ಧೆ

G2E7S3

**ಕಲಿಕೆಗೆ ದಾರಿ:**
ನಿನ್ನ ಸ್ನೇಹಿತರ ಮೆಚ್ಚಿನ ಆಟ ಹಾಗೂ ಅದನ್ನು ಮೆಚ್ಚಲು ಕಾರಣ ತಿಳಿದುಕೊ.

ದಟ್ಟವಾದ ಕಾಡೊಂದರಲ್ಲಿ ಗಿಡಮರಗಳೆಲ್ಲಾ ಚಿಗುರೊಡೆದು ಕಂಗೊಳಿಸುತ್ತಿದ್ದವು. ಪ್ರಾಣಿಗಳೆಲ್ಲಾ ನಿರ್ಭಯವಾಗಿ ಓಡಾಡುತ್ತಿದ್ದವು. ನವಿಲುಗಳು ನರ್ತಿಸುತ್ತಿದ್ದವು. ಗಿಳಿಗುಬ್ಬಿಗಳು ಚಿಲಿ–ಪಿಲಿಯೆಂದು ಉಲಿಯುತ್ತಿದ್ದವು. ಎಲ್ಲಾ ಪ್ರಾಣಿ ಪಕ್ಷಿಗಳು ಸಂತೋಷದಿಂದ ಸಹಬಾಳ್ವೆ ನಡೆಸುತ್ತಿದ್ದವು.



ಕಾಡಿನ ರಾಜನಾದ ಸಿಂಹವು ಕಾಡಿನ ದಿನಾಚರಣೆಯನ್ನು ಆಚರಿಸುವ ಬಗ್ಗೆ ಚರ್ಚಿಸಲು ಪ್ರಾಣಿ ಪಕ್ಷಿಗಳ ಸಭೆ ಕರೆದಿತ್ತು. ಎಲ್ಲ ಪ್ರಾಣಿಗಳೂ ಸಭೆಗೆ ಬಂದು ಸೇರಿದವು.

ಸಿಂಹ : (ಕಾಡಿನ ಎಲ್ಲ ಪ್ರಾಣಿಗಳನ್ನು ಕುರಿತು) ನಾವೆಲ್ಲಾ ಕಾಡಿನ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸೋಣವೇ?

ಎಲ್ಲ ಪ್ರಾಣಿಗಳು ಒಕ್ಕೊರಲಿನಿಂದ ಹೌದು ಹೌದು ಎಂದವು

ಆನೆ : ಆಯ್ತು, ಆದರೆ ಈ ವರ್ಷ ವಿಶೇಷವಾಗಿ ಆಚರಿಸೋಣ.

ಕಾಗಕ್ಕ : ವಿಶೇಷವಾಗಿ ಎಂದರೆ ಹೇಗೆ?

ಆನೆ : ಕಾಗಕ್ಕ ವಿಶೇಷವಾಗಿ ಎಂದರೆ, ಆಟಗಳ ಸ್ಪರ್ಧೆ ನಡೆಸುವುದು. ಗೆದ್ದವರಿಗೆ ಇನಾಮು ಕೊಡುವುದು.

ಮೊಲ : ಇಲ್ಲಾ! ಇಲ್ಲಾ! ಈ ಬಾರಿ ಆಟಗಳ ಬದಲು ಆಶುಭಾಷಣ ಸ್ಪರ್ಧೆ ನಡೆಸೋಣ.

ಆನೆ : ಏಕೆ? ಹಿಂದೆ ಆಮೆಯ ಜೊತೆ ಓಟದ ಸ್ಪರ್ಧೆಯಲ್ಲಿ ಸೋತಿದ್ದಕ್ಕೆ ಭಯವೇನು?

ಮೊಲ : ಇಲ್ಲಪ್ಪ! ನನಗ್ಯಾಕೆ ಭಯ. ಆಶುಭಾಷಣ ಸ್ಪರ್ಧೆಯಿಂದ ಗೊತ್ತಿಲ್ಲದ ಎಷ್ಟೋ ವಿಚಾರಗಳನ್ನು ನಾವೂ ತಿಳಿದುಕೊಳ್ಳಬಹುದು ಎಂದೆನಷ್ಟೇ.

ನರಿ : ಆಶುಭಾಷಣ ಸ್ಪರ್ಧೆ! ಹಾಗೆಂದರೇನು?

ಮೊಲ : ಓ! ನರಿರಾಯ ನಿನಗೆ ಅಷ್ಟು ಗೊತ್ತಿಲ್ಲವಾ? ಆಶುಭಾಷಣ ಸ್ಪರ್ಧೆ ಎಂದರೆ ಸ್ಥಳದಲ್ಲಿಯೇ ಸೂಚಿಸಿದ ವಿಷಯದ ಬಗ್ಗೆ ಭಾಷಣ ಮಾಡುವುದು.

ಸಿಂಹ : ಸರಿ! ಹಾಗಾದರೆ ನಾಳೆ ಸ್ಪರ್ಧೆಗಳನ್ನು ನಡೆಸೋಣ, ಎಲ್ಲರೂ ನಾಳೆ ಇಲ್ಲಿಯೇ ಸೇರೋಣ.

(ಮರುದಿನ ಎಲ್ಲಾ ಪ್ರಾಣಿಗಳು ಒಂದೆಡೆ ಸೇರಿದವು. ಆಶುಭಾಷಣ ಸ್ಪರ್ಧೆಗೆ ತೀರ್ಪುಗಾರರನ್ನಾಗಿ ಕೋಗಿಲೆ, ಕೋತಿ ಮತ್ತು ತೋಳವನ್ನು ಆಯ್ಕೆ ಮಾಡಲಾಯಿತು. ತೀರ್ಪುಗಾರರು ಸ್ಪರ್ಧೆ ಪ್ರಾರಂಭವಾಗುವುದಕ್ಕೆ ಮುನ್ನ ವಿಷಯಗಳನ್ನು ಚೀಟಿಯಲ್ಲಿ ಬರೆದು ಡಬ್ಬಿಯಲ್ಲಿ ಹಾಕಿದರು. ಸ್ಪರ್ಧೆ ಪ್ರಾರಂಭವಾಯಿತು).

ತೋಳ : ಒಬ್ಬೊಬ್ಬರಾಗಿ ಬನ್ನಿ. ಡಬ್ಬಿಯಿಂದ ಒಂದು ಚೀಟಿ ತೆಗೆದುಕೊಂಡು ಅದರಲ್ಲಿರುವ ವಿಷಯವನ್ನು ಕುರಿತು ಮಾತನಾಡಿರಿ. ಪ್ರತಿಯೊಬ್ಬರಿಗೂ ಸಮಯ ಐದು ನಿಮಿಷಗಳು ಮಾತ್ರ ಎಂದು ಸ್ಪಷ್ಟಪಡಿಸಿತು.

*ಅಲ್ಲಿದ್ದ ಪ್ರಾಣಿ ಪಕ್ಷಿಗಳಲ್ಲಿ ಕೆಲವು ಸರದಿಯ ಪ್ರಕಾರ ಬಂದು ಚೀಟಿ ತೆಗೆದುಕೊಂಡು ಮಾತನಾಡಲು ಪ್ರಾರಂಭಿಸಿದವು. ಸೊಂಡಿಲು ಹಾಗೂ ಬಾಲವನ್ನು ಅಲ್ಲಾಡಿಸುತ್ತಾ ಘೀಳಿಡುತ್ತಾ ಬಂದ ಆನೆ ಗಂಟಲನ್ನು ಸರಿಪಡಿಸಿಕೊಂಡು ಡಬ್ಬಿಯಲ್ಲಿ ಸೊಂಡಿಲನ್ನು ಹಾಕಿ ಚೀಟಿಯನ್ನು ಎತ್ತಿಕೊಂಡಿತು.*


©KTBS Not to be republished

**ಆನೆ** : ಅಬ್ಬಾ! ಚೀಟಿಯಲ್ಲಿ ನನಗೆ ಇಷ್ಟವಾದ ವಿಷಯ 'ರೇಡಿಯೊ' ಬಂದಿದೆ. ರೇಡಿಯೊ ಒಂದು ಸಂಪರ್ಕ ಸಾಧನ. ರೇಡಿಯೋ ಕಂಡುಹಿಡಿದವರು ಮಾರ್ಕೋನಿ. ಇದರಲ್ಲಿ ಚಿಂತನ, ಕೃಷಿ ಸಮಾಚಾರ, ಶಿಕ್ಷಣವಾರ್ತೆ, ಕ್ರೀಡೆ, ಸಂದರ್ಶನ, ರಾಜಕೀಯ, ಮನರಂಜನೆ, ಚಿತ್ರಗೀತೆ, ವಾರ್ತೆ ಇತ್ಯಾದಿ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ದೇಶವಿದೇಶದ ಸಮಾಚಾರವನ್ನು ತಕ್ಷಣವೇ ಇದರ ಮೂಲಕ ತಿಳಿಯಬಹುದು. ಇದರಲ್ಲಿ ಪ್ರಸಾರವಾಗುವ ಚಿನ್ನರಚುಕ್ಕಿ, ಚುಕ್ಕಿಚಿನ್ನ ಮತ್ತು ಕೇಳಿ-ಕಲಿ ಕಾರ್ಯಕ್ರಮ ಎಂದರೆ ನನಗೆ ಅಚ್ಚುಮೆಚ್ಚು.

ವೇಗವಾಗಿ ಓಡಿ ಬಂದ ಚಿರತೆಯು ಚೀಟಿಯನ್ನು ಎತ್ತಿಕೊಂಡಿತು.

**ಚಿರತೆ** : ನನಗೆ ರೈಲು ವಿಷಯ ಸಿಕ್ಕಿದೆ. ಓಹೋ! ನನಗಿಂತ ವೇಗವಾಗಿ ಚಲಿಸುವ ಉದ್ದವಾದ ವಾಹನವಿದು. ಇದು ಕಂಬಿಗಳ ಮೇಲೆ ಮಾತ್ರ ಚಲಿಸುತ್ತದೆ. ರೈಲಿನಲ್ಲಿ ಒಮ್ಮೆಗೆ ಹೆಚ್ಚು ಪ್ರಯಾಣಿಕರು ಪ್ರಯಾಣಿಸಬಹುದು. ಸರಕುಗಳನ್ನು ಸಾಗಿಸಬಹುದು. ರೈಲಿನಲ್ಲಿ ಶೌಚಾಲಯ, ಕುಡಿಯುವ ನೀರು, ಊಟ, ತಿಂಡಿ, ಮಲಗುವ ವ್ಯವಸ್ಥೆ ಇರುತ್ತದೆ. ಈಗ ರೈಲು ಪ್ರಯಾಣ ಸುಖಕರ ಹಾಗೂ ಅದರ ದರವೂ ಕಡಿಮೆ ಎಂದು ಹೇಳಿ ಕುಳಿತುಕೊಂಡಿತು.

©KTBS Not to be republished



ಹೆಜ್ಜೆ ಮೇಲೆ ಹೆಜ್ಜೆ ಹಾಕುತ್ತಾ ಗರಿ ಬಿಚ್ಚಿ ತನ್ನ ಸೌಂದರ್ಯವನ್ನು ಬಿಂಕದಿಂದ ಪ್ರದರ್ಶಿಸಿ ನವಿಲು ಎಲ್ಲರ ಕಣ್ಮನ ಸೆಳೆಯಿತು. ಕೊಕ್ಕಿನಿಂದ ಚೀಟಿ ತೆಗೆದುಕೊಂಡು, ವಿಮಾನದ ಬಗ್ಗೆ ಹೀಗೆ ಹೇಳಿತು.

**ನವಿಲು :** ಮನುಷ್ಯ ಹಕ್ಕಿಗಳು ಹಾರುವುದನ್ನು ಕಂಡು ತಾನೂ ಹಾರಬೇಕೆಂದು ಈ ವಿಮಾನವನ್ನು ಕಂಡುಹಿಡಿದನು. ವಿಮಾನವು ವಾಯುಮಾರ್ಗದಲ್ಲಿ ಚಲಿಸುತ್ತದೆ. ಇದರ ಮೂಲಕ ಕಡಿಮೆ ಸಮಯದಲ್ಲಿ ಬಹಳ ದೂರ ಪ್ರಯಾಣಿಸಬಹುದು. ಜನರು ದೇಶವಿದೇಶಗಳಿಗೆ ಹೋಗುವಾಗ ಹೆಚ್ಚಾಗಿ ವಿಮಾನದಲ್ಲಿಯೇ ಸಂಚರಿಸುತ್ತಾರೆ. ನನಗೆ ವಿಮಾನ ಪ್ರಯಾಣವೆಂದರೆ ತುಂಬಾ ಇಷ್ಟ. ಆದರೆ ಇದರ ದರ ದುಬಾರಿ ಎಂಬುದೇ ನನಗೆ ಬೇಸರವಾಗಿದೆ.

*(ಎನ್ನುತ್ತಾ ವೈಯಾರ ಮಾಡುತ್ತಾ ವೇದಿಕೆಯಿಂದ ಕೆಳಗೆ ಇಳಿದು ಬಂದಿತು.*

ಕುಣಿ ಕುಣಿಯುತ್ತ ಬಂದ ಕರಡಿಯು ಸಭಿಕರಿಗೆಲ್ಲಾ ಕೈಮುಗಿದು ಒಂದು ಚೀಟಿಯನ್ನು ಎತ್ತಿಕೊಂಡಿತು.)


**ಕರಡಿ :** ನನಗೆ ಸಿಕ್ಕ ವಿಷಯ ಹಿಮಾಲಯ. ಇದು ಅತ್ಯಂತ ಎತ್ತರವಾದ ಪರ್ವತ. ಭಾರತದ ಉತ್ತರ ಭಾಗದಲ್ಲಿದ್ದು ಹಿಮದಿಂದ ಕೂಡಿದೆ. ಶತ್ರುಗಳು ನಮ್ಮ ದೇಶಕ್ಕೆ ಬರದಂತೆ ಇದು ತಡೆದಿದೆ. ಇಲ್ಲಿ ಹುಟ್ಟುವ ಗಂಗಾ, ಯಮುನಾ, ಬ್ರಹ್ಮಪುತ್ರ ನದಿಗಳು ಸದಾ ತುಂಬಿ ಹರಿಯುತ್ತವೆ.

ತಕ್ಷಣ ತೀರ್ಪುಗಾರನಾದ ಕೋತಿಯು "ಕರಡಿ ಮಹಾರಾಯರೇ ನಿಮ್ಮ ಸಮಯ ಮುಗಿಯಿತು" ಎಂದು ಎಚ್ಚರಿಸಿತು. ಸರಸರನೆ ಹರಿಯುತ್ತಾ ಹಾವೊಂದು ಬಂದಿತು. ಹೆಡೆ ಬಿಚ್ಚಿ "ಶ್" ಎನ್ನುತ್ತಾ ಎಲ್ಲರನ್ನು ಆಕರ್ಷಿಸಿತು. ಬಗ್ಗಿ ತಾನೊಂದು ಚೀಟಿಯನ್ನು ತೆಗೆದುಕೊಂಡು ಸುರುಳಿ ಬಿಚ್ಚಿತು.

**ಹಾವು :** ಬ್ಯಾಂಕ್ ವಿಷಯ ನನಗೆ ಸಿಕ್ಕಿದೆ. ಎಲ್ಲರೂ ಬ್ಯಾಂಕ್‌ನಲ್ಲಿ ಹಣದ ವ್ಯವಹಾರ ಮಾಡುತ್ತೇವೆ. 'ಹನಿ ಹನಿಗೂಡಿದರೆ ಹಳ್ಳ, ತೆನೆ ತೆನೆಗೂಡಿದರೆ ಬಳ್ಳ' ಎಂಬಂತೆ ಉಳಿತಾಯ ಮಾಡಬೇಕು. ಹಣ ಇರಿಸಲು, ಬೇಕಾದಾಗ ತೆಗೆದುಕೊಳ್ಳಲು ಈಗ ಉತ್ತಮ ವ್ಯವಸ್ಥೆಯನ್ನು ಎಲ್ಲಾ ಬ್ಯಾಂಕಿನವರೂ ಮಾಡಿದ್ದಾರೆ. ನಮ್ಮ ಖಾತೆಯಲ್ಲಿರುವ ಹಣವನ್ನು ಅವಶ್ಯಕತೆ ಇದ್ದಾಗಲೆಲ್ಲಾ ಬ್ಯಾಂಕಿನಿಂದ ಅಥವಾ ಎ.ಟಿ.ಎಂ. ಮೂಲಕ ತೆಗೆದುಕೊಳ್ಳಬಹುದು. ಎ.ಟಿ.ಎಂ. ವ್ಯವಸ್ಥೆಯು ಹೆಚ್ಚಿನ ಬ್ಯಾಂಕ್‌ಗಳಲ್ಲಿ ಲಭ್ಯವಿದೆ, ಎಂದು ಹೇಳಿ ಕೆಳಗಿಳಿಯಿತು.

ರೆಕ್ಕೆ ಬಿಚ್ಚಿ ಹಾರುತ್ತಾ ಕೆಂಪು ಮೂತಿಯ ಗಿಳಿಯು ಕೊಕ್ಕಿನಿಂದ ಚೀಟಿಯನ್ನು ಹೆಕ್ಕಿತು. ಮುದ್ದು ಮುದ್ದಾಗಿ ಹೀಗೆ ಮಾತನಾಡತೊಡಗಿತು.

©KTBS Not to be republished



**ಗಿಳಿ :** 'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು ಅನ್ನ' ಎಂಬಂತೆ ನನಗೆ 'ಮೊಬೈಲು' ವಿಷಯ ಬಂದಿದೆ. ಈಗ ಎಲ್ಲರ ಕೈಯಲ್ಲಿ ಇರುವುದು ಮೊಬೈಲು. ಇದರ ಮೂಲಕ ಜಗತ್ತಿನ ಮೂಲೆಮೂಲೆಯ ಜನರು ವಿಚಾರ ವಿನಿಮಯ ಮಾಡಿಕೊಳ್ಳಬಹುದು. ವಿಚಾರ ವಿನಿಮಯದ ಜೊತೆಗೆ ಸಂದೇಶಗಳನ್ನೂ ಕಳುಹಿಸಬಹುದು. ಇವುಗಳಲ್ಲದೆ ಇದರಿಂದ ಛಾಯಾಚಿತ್ರ ತೆಗೆಯಬಹುದು, ಲೆಕ್ಕ ಮಾಡಬಹುದು. ದಿನಾಂಕ ತಿಳಿಯಬಹುದು, ದೂರವಾಣಿ ಸಂಖ್ಯೆಗಳನ್ನು ದಾಖಲಿಸಿಕೊಳ್ಳಬಹುದು. ಮೊಬೈಲ್ ಈಗ ಅಂಗೈನಲ್ಲಿರುವ ಸಣ್ಣ ಕಂಪ್ಯೂಟರ್‌ನಂತೆ ಆಗಿದೆ.

**ನರಿ :** ಅಬ್ಬಾ! ಮೊಲವು ತಿಳಿಸಿದಂತೆ ಈ ಆಶುಭಾಷಣ ಸ್ಪರ್ಧೆ ಮೂಲಕ ನಾವೆಲ್ಲಾ ಬಹಳ ವಿಷಯಗಳನ್ನು ತಿಳಿದುಕೊಂಡೆವು. ಎಲ್ಲರೂ ತುಂಬಾ ಅದ್ಭುತವಾಗಿ ಮಾತನಾಡಿದ್ದೀರಿ. ಈ ಸ್ಪರ್ಧೆ ನಡೆಸಲು ಸಹಕರಿಸಿದವರಿಗೆಲ್ಲಾ ಧನ್ಯವಾದಗಳು.

**ಸಿಂಹ :** ಓ ನನ್ನ ಬಂಧುಗಳೆ, ನೀವೆಲ್ಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿ ನಡೆಸಿಕೊಟ್ಟಿದ್ದೀರಿ. ಇದು ನನಗೆ ಹರ್ಷ ತಂದಿದೆ. ನಾಳೆ ಹೊರಾಂಗಣದಲ್ಲಿ ಕಬಡ್ಡಿ ಆಟವನ್ನೂ ಆಡೋಣ. ಎರಡೂ ಸ್ಪರ್ಧೆಗಳಲ್ಲಿ ಗೆದ್ದವರಿಗೆ ದಿನಾಚರಣೆಯಂದು ಇನಾಮನ್ನು ನೀಡೋಣ.

**ಕೂಡಿ ಬಾಳಿದರೆ ಸ್ವರ್ಗ ಸುಖ**

©KTBS Not to be republished

## ಪದಗಳ ಅರ್ಥ

ಕಂಗೊಳಿಸು – ಹೊಳೆಯುವುದು; ಉಲಿ – ಮಾತು, ಧ್ವನಿ; ಸಹಬಾಳ್ವೆ – ಒಟ್ಟಾಗಿ ಬಾಳುವುದು; ಸ್ಪರ್ಧೆ– ಪೈಪೋಟಿ, ಮೇಲಾಟ; ಸರದಿ – ಸಾಲು; ತೀರ್ಪು– ತೀರ್ಮಾನ; ಸರಕು – ವಸ್ತುಗಳು; ಸಾಗಾಣಿಕೆ – ಸಾಗಿಸುವುದು; ದರ – ಬೆಲೆ; ವಾಯು– ಗಾಳಿ; ವಿದೇಶ – ಹೊರದೇಶ; ಸಭಿಕರು – ಪ್ರೇಕ್ಷಕರು; ಎಚ್ಚರ – ಜಾಗೃತಿ; ಆಕರ್ಷಣೆ– ಸೆಳೆತ; ಲಭ್ಯ – ದೊರಕಿದುದು, ಪ್ರಾಪ್ತಿ; ವಿನಿಮಯ – ಪರಸ್ಪರ ಬದಲಾಯಿಸು; ಸಂದೇಶ – ಸುದ್ದಿ, ಮಾಹಿತಿ; ಬಂಧು – ಸಂಬಂಧಿ; ಸಹಕರಿಸು – ಸಹಾಯ ನೀಡು; ಇನಾಮು – ಬಹುಮಾನ; ಧನ್ಯ – ಪಾವನ; ಸಮ್ಮತಿ – ಒಪ್ಪಿಗೆ, ಅನುಮತಿ; ಹರ್ಷ – ಸಂತೋಷ; ಬಿಂಕ – ಗರ್ವ; ಅದ್ಭುತ – ಆಶ್ಚರ್ಯ.

## ಟಿಪ್ಪಣಿ

ಆಶುಭಾಷಣ : ಸ್ಥಳದಲ್ಲಿಯೆ ಸೂಚಿಸಿದ ವಿಷಯದ ಬಗ್ಗೆ ಭಾಷಣ ಮಾಡುವುದು.

ಚಿಂತನೆ : ಒಂದು ವಿಷಯದ ಬಗ್ಗೆ ಆಳವಾಗಿ ಆಲೋಚಿಸುವುದು.

ಬಳ್ಳ : ಒಂದು ಅಳತೆಯ ಪ್ರಮಾಣ.

ಎ.ಟಿ.ಎಂ. : ಅಟೋಮೇಟೆಡ್ ಟೆಲ್ಲರ್ ಮೆಷಿನ್. (Automated Teller Machine). ಬೇಕಾದಾಗ ನಮ್ಮ ಖಾತೆಯಲ್ಲಿರುವ ಹಣವನ್ನು ತೆಗೆದುಕೊಳ್ಳಲು ಅವಕಾಶ ಇರುವ ಯಂತ್ರ.

©KTBS Not to be republished

## ಅಭ್ಯಾಸ

### ಅ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ

೧. ಪ್ರಾಣಿ ಪಕ್ಷಿಗಳ ಸಭೆಯನ್ನು ಕರೆದವರು ಯಾರು?

..........................................................................................................

೨. ಕಾಡಿನಲ್ಲಿ ನಡೆದ ಸ್ಪರ್ಧೆ ಯಾವುದು?

..........................................................................................................

೩. ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದವರು ಯಾರು?

..........................................................................................

## ಆ. ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ

೧. ರೇಡಿಯೋದಲ್ಲಿ ನಾವು ಪ್ರತಿದಿನ ಯಾವ ಯಾವ ಕಾರ್ಯಕ್ರಮ ಕೇಳಬಹುದು?

..........................................................................................

..........................................................................................

..........................................................................................

..........................................................................................

೨. ರೈಲು ಪ್ರಯಾಣದ ಬಗ್ಗೆ ಚಿರತೆಯ ಅಭಿಪ್ರಾಯವೇನು?

..........................................................................................

..........................................................................................

..........................................................................................

..........................................................................................

೩. ಆಶುಭಾಷಣ ಸ್ಪರ್ಧೆಯಲ್ಲಿ ಯಾರು ಯಾರು ಭಾಗವಹಿಸಿದ್ದರು?

..........................................................................................

..........................................................................................

..........................................................................................

..........................................................................................

## ಇ. ಈ ಮಾತುಗಳನ್ನು ಯಾರು? ಯಾರಿಗೆ ಹೇಳಿದರು?

೧. "ಆಮೆಯ ಜೊತೆ ಓಟದ ಸ್ಪರ್ಧೆಯಲ್ಲಿ ಸೋತಿದ್ದಕ್ಕೆ ಭಯವೇನು?"

ಯಾರು? ..........................................................................................

ಯಾರಿಗೆ? ..........................................................................................

೨. "ಅಬ್ಬಾ! ಚೀಟಿಯಲ್ಲಿ ನನಗೆ ಇಷ್ಟವಾದ ವಿಷಯ 'ರೇಡಿಯೊ' ಬಂದಿದೆ".

ಯಾರು? ..........................................................................................

ಯಾರಿಗೆ? ..........................................................................................

©KTBS Not to be republished

## ಈ. ಕೊಟ್ಟಿರುವ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ

೧. ಸಂತೋಷದಿಂದ ನಡೆಸುತ್ತಿದ್ದವು ಸಹಬಾಳ್ವೆ ಪ್ರಾಣಿ ಪಕ್ಷಿಗಳು

.................................................................................................

೩. ಕೇಳಿ ಕಲಿ ಕಾರ್ಯಕ್ರಮ ನನಗೆ ಎಂದರೆ ಅಚ್ಚುಮೆಚ್ಚು

.................................................................................................

೪. ತುಂಬಾ ಇಷ್ಟ ನನಗೆ ಪ್ರಯಾಣವೆಂದರೆ ವಿಮಾನ

.................................................................................................

## ಉ. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.

ಸಹಬಾಳ್ವೆ – .................................................................................

.................................................................................

ಆಕರ್ಷಣೆ – .................................................................................

.................................................................................

ಸ್ಪರ್ಧೆ – .................................................................................

.................................................................................

ಅಚ್ಚುಮೆಚ್ಚು – .................................................................................

.................................................................................

ತಮಾಷೆ – .................................................................................

.................................................................................

©KTBS
Not to be republished

## ಊ. ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ

೧. ಭಯ × ......................................

೨. ಶತ್ರು × ......................................

೩. ಸಂತೋಷ × ......................................

೪. ಮುಕ್ತಾಯ × ......................................




## ಅ. ನಾನು ಯಾರು? ಯೋಚಿಸಿ ಬರೆ.

ಅ. ಜುಟ್ಟುಂಟು ನಾರಿಯಲ್ಲ
ಕಣ್ಣುಂಟು ಮನುಷ್ಯನಲ್ಲ
ನೀರುಂಟು ಬಾವಿಯಲ್ಲ
ಹಾಗಾದರೆ ನಾನು ಯಾರು?

.............................................................

ಆ. ನಾಲ್ಕು ಕಂಬಗಳುಂಟು ದೇವಾಲಯವಲ್ಲ
ಎರಡು ಮೊರಗಳುಂಟು ಕೇರಲಾಗುವುದಿಲ್ಲ
ಒಂದು ಕಹಳೆಯುಂಟು ಊದಲಾಗುವುದಿಲ್ಲ
ಹಾಗಾದರೆ ನಾನು ಯಾರು?

.............................................................

ಇ. ಮರದ ಮೇಲಿರುವೆ ಪಕ್ಷಿಯಲ್ಲ
ಹಸಿರಂಗಿ ತೊಟ್ಟಿರುವೆ ಬಾಲಕನಲ್ಲ
ಕೆಂಪು ಮೂತಿಯುಂಟು ಗಿಳಿಯಲ್ಲ
ಹಾಗಾದರೆ ನಾನು ಯಾರು?

.............................................................

## ಆ. ಮಾದರಿಯಲ್ಲಿ ಸೂಚಿಸಿರುವಂತೆ ಸೂಕ್ತ ಪದ ರಚಿಸಿ ಬರೆಯಿರಿ.

**ಮಾದರಿ :** ರೈಲು + ಅನ್ನು = ರೈಲನ್ನು

ನಾಡು + ಅನ್ನು = ....................

ಕಾಡು + ಅನ್ನು = ....................

ಬಸ್ಸು + ಅನ್ನು = ....................

ಮಾತು + ಅನ್ನು = ....................

©KTBS Not to be republished

**೩. ಕೊಟ್ಟಿರುವ ವಾಕ್ಯದಲ್ಲಿ ಗೆರೆ ಹಾಕಿದ ಪದವನ್ನು ಗಮನವಿಟ್ಟು ಓದಿ.**

೧. ಆನೆ <u>ಘೀಳಿಟ್ಟಿತು.</u>

೨. ನವಿಲು <u>ನರ್ತಿಸಿತು.</u>

೩. ಕರಡಿ <u>ಕುಣಿಯಿತು.</u>

೪. ಚಿರತೆ ವೇಗವಾಗಿ <u>ಓಡಿತು.</u>

೫. ಗಿಳಿ ರೆಕ್ಕೆ ಬಿಚ್ಚಿ <u>ಹಾರುತ್ತಾ ಬಂದಿತು.</u>




**೧. ಕೆಳಗಿನವುಗಳನ್ನು ಗಮನಿಸಿ. ಅನುಕೂಲ ಹಾಗೂ ಅನಾನುಕೂಲಗಳನ್ನು ಬರೆಯಿರಿ.**

| | ಅನುಕೂಲ | ಅನಾನುಕೂಲ |
|---|---|---|
| ದೂರದರ್ಶನ | ೧ ...................................... | ೧ ...................................... |
| | ೨ ...................................... | ೨ ...................................... |
| | ೩ ...................................... | ೩ ...................................... |
| ಮೊಬೈಲ್ | ೧ ...................................... | ೧ ...................................... |
| | ೨ ...................................... | ೨ ...................................... |
| | ೩ ...................................... | ೩ ...................................... |

©KTBS Not to be republished

**೨. ನೀನು ಆಡುವ ಆಟಗಳನ್ನು ಚೌಕದಲ್ಲಿ ಬರೆಯಿರಿ.**

| | | |
|---|---|---|
| | | |
| | | |
| | | |

## ಈರುಳ್ಳಿ ಸಿಪ್ಪೆ ಆಟ

**೩. ಆಟ ಆಡಲು ಸೂಚನೆ:**

- ಈರುಳ್ಳಿಯ ಆಕಾರವನ್ನು ಕಾಗದದ ಹಾಳೆಯಿಂದ ಸಿದ್ಧಪಡಿಸುವುದು.
- ಪ್ರತಿ ಹಾಳೆಯಲ್ಲು ನಿರ್ದಿಷ್ಟ ವಿಷಯ ಬರೆದು ಸುರುಳಿ ಸುತ್ತುವುದು.
- ವೃತ್ತಾಕಾರದಲ್ಲಿ ಕುಳಿತ ಮಕ್ಕಳು ಈರುಳ್ಳಿಯನ್ನು ಒಬ್ಬರ ಕೈನಿಂದ ಮತ್ತೊಬ್ಬರ ಕೈಗೆ ಬದಲಾಯಿಸುತ್ತಿರಬೇಕು.
- ಸೀಟಿ ಊದುವಾಗ ಯಾರ ಕೈಯ್ಯಲ್ಲಿ ಈರುಳ್ಳಿ ಇರುತ್ತದೊ ಅವರು ಅದರ ಒಂದು ಸಿಪ್ಪೆ ಸುಲಿದು ಆ ಸಿಪ್ಪೆಯಲ್ಲಿದ್ದ ವಿಷಯದ ಬಗ್ಗೆ ಮಾತನಾಡಬೇಕು.

**೪. ವಿವಿಧ ಮರ ಗಿಡಗಳ ಚಿತ್ರಗಳನ್ನು ಸಂಗ್ರಹಿಸಿ ಚಿತ್ರಕೋಶ ತಯಾರಿಸಿ.**

**೫. ಕಬಡ್ಡಿ ಆಟ ಹಾಗೂ ಆಟದ ನಿಯಮಗಳನ್ನು ಶಿಕ್ಷಕರಿಂದ ಕೇಳಿ ತಿಳಿದು ಸ್ನೇಹಿತರ ಜೊತೆ ಸೇರಿ ಆಡಿ ಆನಂದಿಸಿ.**

**೬. ಈ ಪಾಠದಲ್ಲಿ ಯಾವ ಪ್ರಾಣಿ ಅಥವಾ ಪಕ್ಷಿಯ ಮಾತು ನಿನಗಿಷ್ಟವಾಯಿತು? ಏಕೆ? ನಿನ್ನ ಸ್ನೇಹಿತರೊಂದಿಗೆ ಚರ್ಚಿಸು.**

©KTBS Not to be republished




ನೀನೀಗ ಮೌಖಿಕ ಸೂಚನೆಗಳ ಸರಣಿಯನ್ನು ಅರ್ಥಮಾಡಿಕೊಂಡು ಕಾರ್ಯರೂಪಕ್ಕೆ ತರುವುದರ ಜೊತೆಗೆ ಅಪರಿಚಿತ ವಸ್ತುಗಳ ಬಗ್ಗೆ ನಿನ್ನ ಮಾತುಗಳಲ್ಲಿ ವಿವರಿಸಬಲ್ಲೆಯಲ್ಲವೇ?



# ನುಡಿ ಆಟಗಳು



**ಸಮಿತಿ ರಚನೆ –**

## ಅ. ರಾಗವಾಗಿ ಪದ್ಯ ಹಾಡುತ್ತಾ ಅಭಿನಯದೊಂದಿಗೆ ಆಟ ಆಡು.

ತರತರದ ತರಕಾರಿಗಳು
ಕುಣಿದಾಟದ ಆಟದಿ ನಲಿದಾಡಿಹವು
ಒಂದೆಡೆ ಸಭೆಯನು ಸೇರಿಹವು
ಚೆಂದದ ಯೋಚನೆ ಮಾಡಿಹವು

ಸಂಘವನೊಂದು ನೋಂದಣಿ ಮಾಡಲು
ಒಕ್ಕೊರಲಲ್ಲಿ ಕೂಗಿಹವು
ವಿಧವಿಧ ಹುದ್ದೆಗೆ ಆಯ್ಕೆಯ ಮಾಡಲು
ಚುನಾವಣೆ ನಡೆಸಲು ನಿರ್ಧರಿಸಿದವು

ಹಾಗಲ ಕುಂಬಳ ಹೀರೇಕಾಯಿ
ಪಡುವಲ ಬದನೆ ಸೌತೇಕಾಯಿ
ಅಭ್ಯರ್ಥಿಗಳಾದರು ಸ್ಪರ್ಧೆಯಲಿ
ಅಧ್ಯಕ್ಷರ ಪದವಿಯ ಆಸೆಯಲಿ

ಓಟು ಮಾಡಿಹವೆಲ್ಲ ಸಂತೆಯಲಿ
ಬಂದೋಬಸ್ತಿನ ಬುಟ್ಟಿಯಲಿ
ಎಣಿಕೆಯಾಯಿತು ಮರುದಿನವೇ
ಜನರ ಗದ್ದಲದ ಬ್ಯಾಗಲ್ಲಿ!

ಕೊಂಡೊಯ್ದರು ಅಡಿಗೆ ಮನೆಗೆ
ತುಂಡರಿಸಿ ಬೇಯಿಸಲು ಒಲೆಯೊಳಗೆ
ಸಂಘದ ಸಮಾಪ್ತಿಯಾಗ್ಹೋಯ್ತು
ತರಕಾರಿಗಳ ಗತಿ ಮುಗಿದಿತ್ತು



©KTBS Not to be republished

**ಆ. ಕೊಟ್ಟಿರುವ ವ್ಯಕ್ತಿಗಳ ಬಗ್ಗೆ ಹಿರಿಯರಿಂದ ಕಿರುಪರಿಚಯ ಮಾಡಿಕೊ.**


ದ್ರೋಣಾಚಾರ್ಯ, ದುರ್ಯೋಧನ, ಕೃಷ್ಣ,
ಅಭಿಮನ್ಯು, ಭೀಮಸೇನ, ಧರ್ಮರಾಯ,
ಏಕಲವ್ಯ, ಶ್ರವಣಕುಮಾರ, ಅರ್ಜುನ.

**ಇ. ಮಧ್ಯದಲ್ಲಿರುವ ನಾನು ಇಬ್ಬರಿಗೂ ಗೆಳೆಯ, ಓದಿ ನೋಡು – ಇಂತಹ ಪದಗಳನ್ನು ನೀನೂ ರಚಿಸಬಹುದು.**

| | | | | | |
|---|---|---|---|---|---|
| ಕ<br>ಉ ರ ಗ<br>ಗ | ರ<br>ವ ಚ ನ<br>ನ | ಉ<br>ಚ ದ ರ<br>ರ | ಸ<br>ಓ ಲ ಗ<br>ಗ | ಹೃ<br>ಉ ದ ಯ<br>ಯ | ಅ<br>ಆ ಗ ಸ<br>ಸ |
| ಚ<br>ವ ಲ ನ<br>ನ | ಸ<br>ಹ ಂ ದಿ<br>ದಿ | ಸಿ<br>ಜಿ ಂ ಕೆ<br>ಹ | ಕ<br>ಚಿ ರ ತೆ<br>ಡಿ | ಗ<br>ಕ ಂ ದ<br>ಧ | ಮ<br>ಮ ಂ ಚ<br>ಗ |
| ಅ<br>ಸ ರ ಳು<br>ಳು | ಸ<br>ಕೊ ಕ್ಕ ರೆ<br>ರೆ | ಕ<br>ತ ಣ್ಣೀ ರು<br>ರು | ಅ<br>ರ ಕ್ಷ ಕ<br>ರ | ಲ<br>ಶಿ ಕ್ಷ ಣ<br>ಣೆ | ಉ<br>ಕ ತ್ತ ರಿ<br>ರ |
| ಅ<br>ಬ ಜ್ಜಿ | ಚಿ<br>ಬ ಟ್ಟೆ | ಸಿ<br>ಕ ಪ್ಪೆ | ಮ<br>ಕ ಣ್ಣು | ಆ<br>ಓ ಟ | ಹ<br>ಕ ಣ |
| ಶ<br>ಹ ರ | ಆ<br>ಊ ಟ | ಬ<br>ಛ ಲ | ಪ<br>ರ ಥ | ಜ<br>ಧ ನ | ಮ<br>ಕ ಡಿ |


©KTBS Not to be republished

ಈ. ಶೃಂಗದಲ್ಲಿರುವ ನಾನು ಇಬ್ಬರಿಗೂ ಗೆಳೆಯ, ಎರಡೂ ಕಡೆಯಿಂದ ಓದು.





ಉ. ನಾನು ಎಲ್ಲರಿಗೂ ಗೆಳೆಯ. ನಾನು ಯಾರು ತಿಳಿದುಕೊ?

೧.





ಉತ್ತರ : ರ

೨.




ಉತ್ತರ : ಗ ಅಥವಾ ರ

೩.





ಉತ್ತರ : ರಿ


©KTBS Not to be republished

## ಊ. ಮಾದರಿಯಂತೆ ಪದರಚಿಸಿ ಓದಿ ಆನಂದಿಸಿ.

ಮಾದರಿ ೧ : ನುಡಿಹಬ್ಬ




ಮಾದರಿ ೨ : ನೇತ್ರದಾನ




## ಋ. ಕೊಟ್ಟಿರುವ ಚೌಕಗಳಲ್ಲಿ ಹಲವು ಅಕ್ಷರಗಳು ಅಡಗಿವೆ. ಅವುಗಳಿಂದ ಪದರಚಿಸಿ ನೋಟ್ ಪುಸ್ತಕದಲ್ಲಿ ಬರೆಯಿರಿ.

| | | | | | | | | | | | |
|---|---|---|---|---|---|---|---|---|---|---|---|
| ಜ | ನ | ಕ | ಓ | ಆ | ಜಾ | ಸಾ | ಕಾ | ಮ | ಸ | ಹ | ವಿ |
| ಹಾ | ಲು | ಮ | ಡು | ದು | ಡು | ದು | ಡು | ಬಿ | ರಿ | ವ | ಜ |
| ಬು | ಗು | ರಿ | ಆ | ಹಾ | ರ | ಜ | ಮ | ಹ | ನ | ಳ | ಯ |
| ಕು | ಮಾ | ರ | ಸು | ಅ | ಳು | ರ | ನೆ | ಳ | ರ | ಭ | ಸ |
| ಚಿ | ರು | ಸ | ಮ | ರ | ಭಾ | ನು | ವಾ | ರ | ಬ | ಜ | ಯ |
| ಕು | ಗು | ಮ | ಧು | ಸ | ಡಿ | ಸಿ | ರ | ಸ | ತೆ | ನೆ | ಕೆ |
| ಶು | ಚಿ | ಯ | ರ | ಲು | ಗೆ | ಳೆ | ಯ | ರ | ಬ | ಳ | ಗ |
| ಭ | ರ | ಣಿ | ವಿ | ಗೆ | ಡಿ | ರು | ಗಾ | ಸ | ವ | ರು | ರಿ |
| ರಿ | ಕಾ | ರಾ | ಹಾ | ಜ | ಗ | ಟ | ಬ | ವಾ | ಸು | ವ | ಮೆ |
| ಸು | ಲ | ಗಿ | ರ | ಣಿ | ನೆ | ಗು | ರಿ | ಲು | ಖ | ತ | ರ |

©KTBS Not to be republished

## ಎ. ಒಗಟುಗಳನ್ನು ಓದಿ ಆನಂದಿಸಿ.

೧. ಹುಟ್ಟುವಾಗ ಕೆಂಪು
ಕಣ್ಣಿಗೆ ತಂಪು
ಏರಿದಾಗ ನೆತ್ತಿ ಕೆಂಡ
ಇಳಿದಾಗ ಹೂವಿನ ಕುಂಡ – ಸೂರ್ಯ

೨. ಹಸಿರು ಕೊಡದ ತುಂಬ
ಸಿಹಿ ನೀರು – ಎಳನೀರು

೩. ನೋಡುವವರು ಇಬ್ಬರು
ಮಾಡುವವರು ಐವರು
ತಿನ್ನುವವರು ಮೂವತ್ತೆರಡು ಮಂದಿ – ಕಣ್ಣು, ಬೆರಳು, ಹಲ್ಲುಗಳು

೪. ಮಾತು ಕೇಳಿಸಿದರೂ
ಮುಖ ಕಾಣದು
ಕಿವಿಗೆ ಹತ್ತಿರವಾದರೂ
ಬಾಯಿಗೆ ದೂರ! ನಾನಾರು – ಟೆಲಿಫೋನ್

೫. ರೆಕ್ಕೆಯುಂಟು ಹಕ್ಕಿಯಲ್ಲ
ಸದ್ದುಂಟು ಗುಡುಗಲ್ಲ
ಓಡುವೆನು ಮೋಡವಲ್ಲ! ನಾನಾರು – ವಿಮಾನ


೬. ಊರುಂಟು ಜನರಿಲ್ಲ
ನದಿಯುಂಟು ನೀರಿಲ್ಲ
ರಸ್ತೆಯುಂಟು ವಾಹನವಿಲ್ಲ – ಭೂಪಟ

೭. ಕೆರೆಗೆ ಮುಳುಗ್ ಏಳ್ ಕಾಗೆ
ದಡಕ್ಕೆ ಹತ್ ಕಾಗೆ
ಮರಕ್ಕೆ ಹಾರ್ ಕಾಗೆ
ಒಟ್ಟು ಎಷ್ಟು ಕಾಗೆ – ಒಂದೇ ಕಾಗೆ

©KTBS Not to be republished

ಏ. ನಾನು ಎಲ್ಲರಿಗೂ ಗೆಳತಿ.

(ನಡುವಿನ ಅಕ್ಷರದೊಂದಿಗೆ ಪದ ರಚಿಸಿ ಓದು)




ಐ. ನೀನು ನಮ್ಮನ್ನು ಬಳಸಿ ಹಲವು ಪದಗಳನ್ನು ರಚಿಸಬಹುದು. ಪ್ರಯತ್ನಿಸು.

©KTBS Not to be republished

| | | |
|---|---|---|
| ಅ. | ಭಾ ರ ತ ದ ಪ ದ ಕ<br>೧ ೨ ೩ ೪ ೫ ೬ ೭ | |
| ಸುಳಿವು : | ೧, ೨, ೩, : ......................<br>೫, ೬, ೭ : ......................<br>೧, ೨ : ......................<br>೭, ೬ : ...................... | ೪, ೨ : ..............................<br>೫, ೬ : ..............................<br>೫, ೪ : ..............................<br>೭, ೨ : .............................. |

## ಒ. ಕೊಟ್ಟಿರುವ ಗಾದೆ ಓದಿ ಅರ್ಥ ಮಾಡಿಕೊ.

೧. ತಾಳಿದವನು ಬಾಳಿಯಾನು.

೨. ಮಾತು ಬೆಳ್ಳಿ, ಮೌನ ಬಂಗಾರ.

೩. ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡು.

೪. ಉಪಾಯ ಬಲ್ಲವರಿಗೆ ಅಪಾಯವಿಲ್ಲ.

೫. ಹೇಳುವುದಕ್ಕಿಂತ ಮಾಡಿ ತೋರಿಸುವುದು ಲೇಸು.

೬. ಮಾತು ಬಲ್ಲವರಿಗೆ ಜಗಳವಿಲ್ಲ, ಊಟ ಬಲ್ಲವರಿಗೆ ರೋಗವಿಲ್ಲ.

೭. ಹಾಸಿಗೆ ಇದ್ದಷ್ಟು ಕಾಲು ಚಾಚು.

## ಓ. ಒತ್ತಕ್ಷರಗಳನ್ನು ನೆನಪಿಸಿಕೊ.

### ೧. ಮೂಲ ಅಕ್ಷರಗಳನ್ನೇ ಹೋಲುವ ಒತ್ತಕ್ಷರಗಳು

©KTBS Not to be republished

| ಅಕ್ಷರ | ಒತ್ತಕ್ಷರಗಳು | ಪದ |
|---|---|---|
| ಜ | ್ಜ | ಅಜ್ಜ |
| ಟ | ್ಟ | ಬೆಟ್ಟ |
| ಣ | ್ಣ | ಬಣ್ಣ |
| ಬ | ್ಬ | ಹಬ್ಬ |
| ವ | ್ವ | ಅವ್ವ |

## ೨. ತಲೆಕಟ್ಟು ರಹಿತ ಮೂಲ ಅಕ್ಷರಗಳನ್ನು ಹೋಲುವ ಒತ್ತಕ್ಷರಗಳು

| ಅಕ್ಷರ | ಒತ್ತಕ್ಷರಗಳು | ಪದ |
|---|---|---|
| ಕ | ್ಕ | ಅಕ್ಕ |
| ಗ | ್ಗ | ಮಗ್ಗ |
| ಘ | ್ಘ | ಉದ್ಘಾಟನೆ |
| ಚ | ್ಚ | ಅಚ್ಚು |
| ಛ | ್ಛ | ಸ್ವಚ್ಛ |
| ಠ | ್ಠ | ಗರಿಷ್ಠ |
| ಡ | ್ಡ | ಗುಡ್ಡ |
| ಥ | ್ಥ | ಸ್ಥಳ |
| ದ | ್ದ | ಉದ್ದ |
| ಧ | ್ಧ | ಯುದ್ಧ |
| ಪ | ್ಪ | ಅಪ್ಪ |
| ಶ | ್ಶ | ನಿಶ್ಶಬ್ದ |
| ಷ | ್ಷ | ಅಕ್ಷರ |
| ಸ | ್ಸ | ಬಸ್ಸು |
| ಹ | ್ಹ | ಚಿನ್ಹೆ |
| ಳ | ್ಳ | ಕುಳ್ಳ |

©KTBS Not to be republished

## ೩. ಭಿನ್ನ ರೂಪದ ಒತ್ತಕ್ಷರಗಳು

| | | |
|---|---|---|
| ತ | ್ತ | ಭತ್ತ |
| ನ | ್ನ | ಅನ್ನ |
| ಮ | ್ಮ | ಅಮ್ಮ |
| ಯ | ್ಯ | ಅಯ್ಯ |
| ರ | ್ರ ರ್ | ಚಂದ್ರ, ಸೂರ್ಯ |
| ಲ | ್ಲ | ಬೆಲ್ಲ |

©KTBS
Not to be republished

✽ ✽ ✽